

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 25 ಶನಿವಾರ 2023

ಸಂಪುಟ: 43 | ಸಂಚಿಕೆ: 307 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




ಯಡಿಯೂರಪ್ಪ ವಿಧಾನಸಭೆಗೆ ವಿದಾಯ: ಇನ್ನು ಕೆಲವರದು ಮೌನ ನಡೆ!

ಸ್ವಾರಸ್ಯಕರ ಚರ್ಚೆ, ಅನುಭವಗಳ ಅನಾವರಣ, ಗುಣಗಾನಗಳೊಂದಿಗೆ 15ನೇ ವಿಧಾನಸಭೆ ಕೊನೆ ಅಧಿವೇಶನ ಅಂತ್ಯ

ಬೆಂಗಳೂರು, ಫೆ. 24 (ಕೆಎಂಶಿ)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಹಿರಂಗವಾಗಿ, ಇನ್ನು ಕೆಲವು ಹಿರಿಯರು ಮೌನವಾಗಿಯೇ ವಿಧಾನಸಭೆಗೆ ಇಂದು ವಿದಾಯ ಹೇಳಿದ್ದಾರೆ. ಹದಿನೈದನೇ ವಿಧಾನಸಭೆಯ ಕೊನೆಯ ದಿನದ ಕಲಾಪ ದಲ್ಲಿ ತಮ್ಮ ಪ್ರಜಾಸತ್ತಾತ್ಮಕ ಕಾರ್ಯಪಾಲನೆಗೆ ವೇದಿಕೆಯಾದ ಸದನಕ್ಕೆ ತಲೆಬಾಗಿ ವಂದಿಸಿದರು.

ಯಡಿಯೂರಪ್ಪ ಚುನಾವಣಾ ರಾಜಕೀಯ ನಿವೃತ್ತಿ ಘೋಷಣೆ ಮಾಡುವುದರ ಮೂಲಕ ಸದನಕ್ಕೆ ವಿದಾಯ ಹೇಳಿದರೆ, ಮತ್ತೆ ಕೆಲವರು ವಯೋ ಕಾರಣಗಳಿಂದಾಗಿ ಮತ್ತೆ ವಿಧಾನಸಭೆ ಪ್ರವೇಶ ಮಾಡಲು ಸಾಧ್ಯವಾಗುವುದಿಲ್ಲ ಎಂದು ಮೌನದಿಂದ ವಿನಮ್ರವಾಗಿ ಗೌರವ ಸಲ್ಲಿಸಿದರು. ಕಿರಿಯರು ಮತ್ತು ಮಧ್ಯಮ ವಯೋಮಾನದವರು ತಮ್ಮ ಕ್ಷೇತ್ರದ ಜನರ ನಾಡಿಮಿಡಿತ ಅರಿತವರಂತೆ ತಾವು ಮತ್ತೆ ಸದನ ಪ್ರವೇಶ ಮಾಡುವುದು ಸಾಧ್ಯವಿಲ್ಲ ಎಂಬ ಭಾವನೆ ವ್ಯಕ್ತಪಡಿಸುವಂತಿತ್ತು ಅವರ ನಡೆ–ನುಡಿ.

ಕೆಲವು ಸದಸ್ಯರಂತೂ ಸದನದ ಒಳಗೆಲ್ಲ ಸುತ್ತಾಡಿ, ಖಾಲಿ



ಇರುವ ಸ್ಥಾನಗಳಲ್ಲಿ ಕುಳಿತು ತಮ್ಮ ಬಯಕೆ ಈಡೇರಿಸಿಕೊಳ್ಳುತ್ತಿದ್ದರು. ಇನ್ನೂ ಕೆಲವರು ತಮ್ಮ ಕುಟುಂಬದ ಸದಸ್ಯರನ್ನು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳ್ಳಿರಿಸಿ ತಮ್ಮ ಕೊನೆಯ ದಿನದ ಕಲಾಪ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟರು. ಕೊನೆಯ ದಿನವಾದ ಇಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ಸದಸ್ಯರು ಪಕ್ಷಾತೀತವಾಗಿ ರಾಜಕೀಯ ಭಿನ್ನ ನಿಲುವುಗಳು, ವೈರತ್ವವನ್ನು ಮರೆತು ಒಬ್ಬರನ್ನೊಬ್ಬರು ಹಾಡಿ ಹೊಗಳುವ ಮೂಲಕ ನಾಯಕರ ಕಾರ್ಯವೈಖರಿಯನ್ನು ಶ್ಲಾಘಿಸಿದರು. ಮುಂಬರುವ 16ನೇ ವಿಧಾನಸಭೆಯ ಚುನಾವಣೆಯಲ್ಲಿ ಸ್ಪರ್ಧಿಸುವ ಮತ್ತು ಸ್ಪರ್ಧೆ ಮಾಡದಿರುವ ವಿಚಾರವೂ ಪರಸ್ಪರ ವಿನಿಮಯವಾಯಿತು. ಈಗಾಗಲೇ ತಮ್ಮ ತಮ್ಮ ಪಕ್ಷಗಳಲ್ಲಿ ಮತ್ತೆ ಟಿಕೆಟ್ ಸಿಗುವುದಿಲ್ಲ ಎಂಬ ಖಾತ್ರಿಯಾಗಿರುವವರು ಮುಂದಿನ ನಡೆಯ ಬಗ್ಗೆ ಆತ್ಮೀಯರೊಂದಿಗೆ ಹಂಚಿಕೊಂಡರು. ತಮಗೆ ಸಿಗದಿದ್ದರೆ, ಕುಟುಂಬದ ಸದಸ್ಯರನ್ನಾದರೂ ಕಣಕ್ಕಿಳಿಸುವ ಬಗ್ಗೆ ಹರಸಾಹಸ ಪಡುತ್ತಿರುವ ಕತೆಯನ್ನೂ ಹೇಳಿಕೊಂಡರು.

▶ 6ನೇ ಪುಟಕ್ಕೆ

ಬಿಎಸ್‌ವೈ ಭಾಷಣಕ್ಕೆ ಮೋದಿ ಪ್ರಶಂಸೆ

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ



ಅವರು ವಿಧಾನ ಸಭೆಯಲ್ಲಿ ಮಾಡಿದ ಕೊನೆ ಭಾಷಣಕ್ಕೆ ಪ್ರಧಾನಿ ನರೇಂದ್ರ ಮೋದಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಯಡಿಯೂರಪ್ಪ ಭಾಷಣದ ಬಗ್ಗೆ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಟ್ವೀಟ್ ಮಾಡಿರುವ ಅವರು, "ಯಡಿಯೂರಪ್ಪ ಅವರ ಭಾಷಣ ನನಗೆ ಸ್ಫೂರ್ತಿದಾಯಕ. ಅವರ ಭಾಷಣದಲ್ಲಿ ನಮ್ಮ ನೈತಿಕತೆ ಅಡಕವಾಗಿದೆ" ಎಂದಿರುವುದಲ್ಲದೇ, ಬಿಎಸ್‌ವೈ ಪಕ್ಷನಿಷ್ಠೆ ಕುರಿತು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಮೋದಿಯವರ ಪ್ರಶಂಸೆಗೆ ಯಡಿಯೂರಪ್ಪ ಧನ್ಯವಾದ ತಿಳಿಸಿದ್ದು, "ತಮ್ಮ ಸ್ಫೂರ್ತಿದಾಯಕ ನಾಯಕತ್ವದಲ್ಲಿ ಪಕ್ಷದ ಪ್ರತಿ ಯೊಬ್ಬ ಕಾರ್ಯಕರ್ತರೂ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಇನ್ನಷ್ಟು ಹುಮ್ಮಸ್ಸಿನಿಂದ ನಿರಂತರ ವಾಗಿ ಕೆಲಸ ಮಾಡಲಿದ್ದೇವೆ" ಎಂದಿದ್ದಾರೆ.

ನಮ್ಮೆಲ್ಲರಿಗೂ ಆದರ್ಶ ದೇವೇಗೌಡರು

ಬೆಂಗಳೂರು: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮತ್ತು ಅವರ ಕುಟುಂಬದ ಬಗ್ಗೆ ಸದಾ ಬೆಂಕಿ ಉಂಡೆ ಉಗುಳುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಇಂದು ವಿಧಾನಸಭೆಯಲ್ಲಿ ಗೌಡರನ್ನು ಹಾಡಿ ಹೊಗಳಿದ್ದು, ಆಡಳಿತ ಪಕ್ಷದ ಒತ್ತಡಕ್ಕೆ ಮಣಿದ ಯಡಿಯೂರಪ್ಪ ಪ್ರಸಕ್ತ ವಿಧಾನಸಭೆಯ ಕೊನೆಯ ದಿನವಾದ ಇಂದು ಮತ್ತೆ ಅಂತಿಮ ಭಾಷಣವನ್ನು ಮಾಡುವ ಸಂದರ್ಭದಲ್ಲಿ ಗೌಡರು ರಾಜ್ಯ ಮತ್ತು ರಾಷ್ಟ್ರಕ್ಕೆ ನೀಡಿರುವ ಕೊಡುಗೆಯನ್ನು ಶ್ಲಾಘಿಸಿದರು. ಈಗಾಗಲೇ ತೀರ್ಮಾನ ಕೈಗೊಂಡಿರುವಂತೆ ನಾನು ಚುನಾವಣಾ ರಾಜಕೀಯದಿಂದ ನಿವೃತ್ತಿಗೊಂಡಿದ್ದೇನೆ. ಇಂದು ವಿಧಾನಸಭೆಯ ಅಧಿವೇಶನದ ಕೊನೆಯ ದಿನ ಎಂದು ತಾವು ಮೊದಲ ಬಾರಿ ಶಾಸಕರಾಗಿ, ಪ್ರತಿಪಕ್ಷದ

▶ 9ನೇ ಪುಟಕ್ಕೆ

BPL ಕುಟುಂಬದ ಪ್ರತಿ ಸದಸ್ಯರಿಗೆ 10 ಕೆಜಿ ಉಚಿತ ಅಕ್ಕಿ ನೀಡ್ತೇವೆ...

- ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಜಂಟಿ ಘೋಷಣೆ
- ಜೊತೆಗೆ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್, ಕುಟುಂಬದ ಯಜಮಾನಿಗೆ ಮಾಸಿಕ 2000ರೂ. ಪ್ರೋತ್ಸಾಹ ಧನ

ಬೆಂಗಳೂರು, ಫೆ.24(ಕೆಎಂಶಿ)–ತಾವು ಅಧಿಕಾರಕ್ಕೆ ಬಂದರೆ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬದ ಸದಸ್ಯರಿಗೆ ಮಾಸಿಕ ಹತ್ತು ಕೆಜಿ ಅಕ್ಕಿ ಉಚಿತವಾಗಿ ನೀಡುವುದಾಗಿ ಪ್ರದೇಶ ಕಾಂಗ್ರೆಸ್ ಇಂದಿಲ್ಲಿ ಘೋಷಣೆ ಮಾಡಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಧಾನ ಸಭೆಯ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ಘೋಷಣೆ ಮಾಡಿದರು. ನಾವು ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೂ 200 ಯುನಿಟ್ ವಿದ್ಯುತ್ ಹಾಗೂ ಕುಟುಂಬದ ಯಜಮಾನಿಗೆ 2000 ರೂ. ಪ್ರೋತ್ಸಾಹಧನ ನೀಡುವುದಾಗಿ ಈಗಾಗಲೇ ಘೋಷಣೆ ಮಾಡಿದ್ದೇವೆ. ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನರಿಗೆ ನೆರವು ನೀಡುವ ಉದ್ದೇಶದಿಂದ ಇಂತಹ ಯೋಜನೆಗಳನ್ನು ಜಾರಿ ಗೊಳಿಸಲು ಪಕ್ಷ ತೀರ್ಮಾನಿಸಿದೆ ಎಂದರು. ಹಿಂದೆ ನಮ್ಮ ಸರ್ಕಾರ ಇದ್ದ ಸಂದರ್ಭದಲ್ಲೇ ಅನ್ನ ಭಾಗ್ಯ ಯೋಜನೆಯನ್ನು ಜಾರಿಗೊಳಿಸಿ, ಬಿಪಿಎಲ್



ಕುಟುಂಬದ ಪ್ರತಿ ಸದಸ್ಯರಿಗೆ ಉಚಿತವಾಗಿ ಐದು ಕೆಜಿ ಅಕ್ಕಿ ಘೋಷಣೆ ಮಾಡಿದ್ದೆವು. ನಂತರ 7 ಕೆಜಿ ಅಕ್ಕಿ ನೀಡುವ ತೀರ್ಮಾನ ಕೈಗೊಂಡಿದ್ದೆವು.

ಆದರೆ ಅಧಿಕಾರಕ್ಕೆ ಬಂದ ಬಿಜೆಪಿ ಏಳು ಕೆಜಿ ಬದಲು ಐದು ಕೆಜಿಗೆ ಸೀಮಿತಗೊಳಿಸಿದೆ. ನಮ್ಮನ್ನು ಬೆಂಬಲಿಸಿದರೆ, ಬಿಪಿಎಲ್ ಕುಟುಂಬದ ಸದಸ್ಯರಿಗೆ ಹತ್ತು ಕೆಜಿ ಅಕ್ಕಿ ನೀಡುವುದಾಗಿ ತಿಳಿಸಿದರು. ಇಂದು ವಿಧಾನಮಂಡಲ ಅಧಿವೇಶನ ಮುಕ್ತಾಯಗೊಂಡಿದ್ದು, ಬಿಜೆಪಿಯ ಕೊನೆ ದಿನಗಳು ಸಮೀಪಿಸುತ್ತಿವೆ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ 2013ರಲ್ಲಿ ಬಸವ ಜಯಂತಿ

▶ 9ನೇ ಪುಟಕ್ಕೆ

ಇದುವರೆಗೆ ಕಡಲೇಪುರಿ ತಿನ್ನುತ್ತಿದ್ದರಾ...!

"ಮುಖ್ಯಮಂತ್ರಿಗಳು ನಾವುಗಳು ಇಲ್ಲದ ಸಮಯದಲ್ಲಿ ನಿನ್ನೆ ವಿಧಾನಮಂಡಲ ಅಧಿವೇಶನದಲ್ಲಿ ಅರ್ಕಾವತಿ ರೀಡೂ ವಿಚಾರವಾಗಿ ಮಾತನಾಡಿ ಪತ್ರಿಕೆಗಳಲ್ಲಿ ಹೆಡ್ ಲೈನ್ ಬರುವಂತೆ ಮಾಡಿದ್ದಾರೆ. ಅವರು ವಿರೋಧ ಪಕ್ಷದಲ್ಲಿ ಕೂತಿದ್ದಾಗ ಕಡಲೇಪುರಿ ತಿನ್ನುತ್ತಿದ್ದರಾ? ಇನ್ನು ಕಳೆದ ನಾಲ್ಕು ವರ್ಷಗಳಿಂದ ಆಡಳಿತ ಮಾಡಿದರಲ್ಲಾ ಆಗ್ಯಾಕೆ ಅವರು ಸುಮ್ಮನಿದ್ದರು. ಅವರು ಈ ವರದಿಯನ್ನು ಸದನದಲ್ಲಿ ಮಂಡಿಸಿ ಏಕೆ ಚರ್ಚೆ ಮಾಡಲಿಲ್ಲ. ಈಗಲೂ ನಾನು ಅವರಿಗೆ ಸವಾಲು ಹಾಕುತ್ತೇನೆ. ಒಂದು ದಿನ ಅದಿವೇಶನ ವಿಸ್ತರಣೆ ಮಾಡಲಿ, ಈ ವಿಚಾರವಾಗಿ ಚರ್ಚೆಗೆ ಅವಕಾಶ ನೀಡಲಿ. ನಾವು ಎಐಸಿಸಿ ಅಧಿವೇಶನಕ್ಕೆ ಹೋಗದಿದ್ದರೂ ಪರ್ವಾಗಿಲ್ಲ, ಈ ವಿಚಾರವಾಗಿ ಚರ್ಚೆ ಮಾಡಲು ಸಿದ್ಧವಿದ್ದೇವೆ.



ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಉದ್ಘಾಟನೆಗೆ ಮುನ್ನವೇ

ಅತೀ ವೇಗಕ್ಕೆ ಒಂದು ಬಲಿ

ಶ್ರೀರಂಗಪಟ್ಟಣ, ಫೆ.24–ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ಉದ್ಘಾಟನೆಗೂ ಮುನ್ನವೇ ವೇಗದ ಚಾಲನೆಗೆ ಒಂದು ಜೀವ ಬಲಿಯಾಗಿದೆ. ಮೈಸೂರಿನ ರಾಮಕೃಷ್ಣನಗರ ಹೆಚ್–ಬ್ಲಾಕ್ ನಿವಾಸಿ ಪೂಜಾ(32) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರ ತಂದೆ ಮುರಳೀಧರ್(62), ತಾಯಿ ಇಂದ್ರ (60), ಕಾರು ಚಾಲಕ(35) ಹಾಗೂ ಮತ್ತೊಂದು ಕಾರನ್ನು ಚಾಲನೆ ಮಾಡುತ್ತಿದ್ದ ಮಂಡ್ಯದ ಸ್ವರ್ಣಸಂದ್ರ ಬಡಾವಣೆ ನಿವಾಸಿ ಶಿವಕುಮಾರ್(40) ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೂಪರ್ ಎಕ್ಸ್‌ಪ್ರೆಸ್ ವೇ ಆಗಿರುವ ಈ ದಶಪಥ ರಸ್ತೆಯಲ್ಲಿ ಯಾವುದೇ ಅಡೆತಡೆ ಇಲ್ಲದೆ ವಾಹನಗಳು ಅತೀ ವೇಗವಾಗಿ ಚಲಿಸಬಹುದಾಗಿದೆ. ಇಂದು ಸಂಜೆ ಸ್ವರ್ಣಸಂದ್ರ

▶ 9ನೇ ಪುಟಕ್ಕೆ

ರಿಂಗ್ ರಸ್ತೆ ಇಕ್ಕೆಲಗಳಲ್ಲಿ ಮತ್ತೆ ಬಂದು ಬಿತ್ತು ರಾಶಿ ರಾಶಿ ಕಸ

- ಫೆ.27ರಿಂದ ನಾಲ್ಕು ದಿನ ಸ್ವಚ್ಛತಾ ಅಭಿಯಾನ
- ಮೈಸೂರು ಪಾಲಿಕೆ ಜೊತೆಗೆ ಹೂಟಗಳ್ಳಿ ನಗರಸಭೆ, ರಮ್ಮನಹಳ್ಳಿ, ಬೋಗಾದಿ, ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವತಿಯಿಂದ ಸ್ವಚ್ಛತೆ
- ಅಧಿಕಾರಿಗಳೊಂದಿಗೆ ಸಂಸದ ಪ್ರತಾಪ್ ಸಿಂಹ ಸಭೆ; ಸ್ವಚ್ಛತೆ ವಿಚಾರವಾಗಿ ಸಲಹೆ–ಸೂಚನೆ



ಮೈಸೂರು, ಫೆ.24(ಎಂಟಿವೈ)– ಮೈಸೂರಿನ ರಿಂಗ್ ರಸ್ತೆಯಲ್ಲಿ ಮತ್ತೆ ಕಸ ಸುರಿದು ಅಂದಗೆಡಿಸುವ ಹೀನ ಕೆಲಸ ಮುಂದುವರೆದಿದ್ದು, ರಸ್ತೆಯ ನೈರ್ಮಲ್ಯ ಕಾಪಾಡಲು ಫೆ.27ರಿಂದ ನಾಲ್ಕು ದಿನ ಸ್ವಚ್ಛತಾ ಅಭಿಯಾನ ನಡೆಸಲಾಗುವುದು ಎಂದು ಸಂಸದ ಪ್ರತಾಪಸಿಂಹ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ರಿಂಗ್ ರಸ್ತೆಯ ಸ್ವಚ್ಛತೆ ಕಾಪಾಡುವ ಸಂಬಂಧ ರಿಂಗ್ ರಸ್ತೆ ವ್ಯಾಪ್ತಿಯ ನಗರ ಸಭೆ, ಪಟ್ಟಣ ಪಂಚಾಯ್ತಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ವಿಶೇಷ ಸ್ವಚ್ಛತಾ ಅಭಿಯಾನ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದರು. ಹೂಟಗಳ್ಳಿ ನಗರ ಸಭೆ, ಶ್ರೀರಾಮಪುರ, ರಮ್ಮನಹಳ್ಳಿ, ಬೋಗಾದಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಬರುವ ರಿಂಗ್ ರಸ್ತೆಯ ಎರಡೂ ಬದಿ ಸ್ವಚ್ಛಗೊಳಿಸುವುದು, ರಸ್ತೆಯ ವಿಭಜಕಗಳಲ್ಲಿ ಬೆಳೆದಿರುವ ಹುಲ್ಲಿಗೆ ಬೆಂಕಿ ಹಾಕುತ್ತಿರುವುದರಿಂದ ಬೆಳೆದಿದ್ದ ಮರಗಳಿಗೆ ಹಾನಿಯಾಗುತ್ತಿದೆ. ಅವುಗಳ ರಕ್ಷಣೆಗೆ ಕ್ರಮ,

▶ 9ನೇ ಪುಟಕ್ಕೆ

ಖಾಸಗಿ ಬಡಾವಣೆಗಳ ಕಸ

"ಶ್ರೀರಾಂಪುರ, ಬೋಗಾದಿ, ಕಡಕೊಳ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ಬರುವ ರಿಂಗ್ ರಸ್ತೆಯ ಆಸು ಪಾಸಿನ ಸುಮಾರು 35 ಮುಡಾ ಅನುಮೋದಿತ ಬಡಾವಣೆಯಲ್ಲಿ ಸಂಗ್ರಹವಾಗುವ ಕಸವನ್ನು ತಂದು ರಿಂಗ್ ರಸ್ತೆಗೆ ಹಾಕಲಾಗುತ್ತಿದೆ. ಆಯಾ ಸ್ಥಳೀಯ ಸಂಸ್ಥೆಗಳ ವತಿಯಿಂದಲೇ ನಿತ್ಯವೂ ಸ್ವಚ್ಛತಾ ಕಾರ್ಯ ನಡೆಸಬೇಕು. ಅಲ್ಲಿನ ಮುಖ್ಯ ಅಧಿಕಾರಿಗಳು ಈ ಜವಾಬ್ದಾರಿ ವಹಿಸಿಕೊಳ್ಳಬೇಕು.

-ಸಂಸದ ಪ್ರತಾಪ್ ಸಿಂಹ

ಮೈಸೂರು ವಿಮಾನ ನಿಲ್ದಾಣ ವಿಸ್ತರಣಾ ಕಾಮಗಾರಿ ಶೀಘ್ರ ಆರಂಭ

ಮೈಸೂರು, ಫೆ. 24(ಆರ್‌ಕೆ)–ಉದ್ದೇಶಿತ ಮೈಸೂರು ವಿಮಾನ ನಿಲ್ದಾಣ ವಿಸ್ತರಣಾ ಕಾಮಗಾರಿಯನ್ನು ಶೀಘ್ರ ಆರಂಭಿಸಲಾಗುವುದು ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ. ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗಾಗಿ ಭೂ ಸ್ವಾಧೀನ ಹಾಗೂ ಹಸ್ತಾಂತರ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಅದಕ್ಕಾಗಿ ಗುರುತಿಸಿದ್ದ 240 ಎಕರೆ ಪೈಕಿ ಈಗಾಗಲೇ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ 160 ಎಕರೆ ಭೂಮಿಯನ್ನು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ)ಕ್ಕೆ ಹಸ್ತಾಂತರಿಸುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ವಿಶೇಷ ಭೂ ಸ್ವಾಧೀನಾಧಿಕಾರಿ ವಿ. ಪ್ರಿಯದರ್ಶಿನಿ ಅವರಿಗೆ ಸೂಚನೆ ನೀಡಿದರು.

▶ 9ನೇ ಪುಟಕ್ಕೆ

ಸಿದ್ದರಾಮಯ್ಯ ಕುರಿತು ಸಚಿವ ಡಾ.ಅಶ್ವತ್ಥ್‌ನಾರಾಯಣ್ ಹೇಳಿಕೆ ಖಂಡಿಸಿ

ಇಂದು ಭಾರೀ ಪ್ರತಿಭಟನಾ ಮೆರವಣಿಗೆ



ಮೈಸೂರು,ಫೆ.24(ಪಿಎಂ)– ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಟಿಪ್ಪುವಿನಂತೆ ಹೊಡೆದು ಹಾಕಿ ಎಂಬ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್ ನಾರಾಯಣ್ ಹೇಳಿಕೆ ಖಂಡಿಸಿ ಸ್ವಾಭಿಮಾನಿ ಹೋರಾಟ ಸಮಿತಿ ವತಿಯಿಂದ ಫೆ.25ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಅಶ್ವತ್ಥ್ ನಾರಾಯಣ್ ಅವರು ಫೆ.15ರಂದು ಮಂಡ್ಯದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಟಿಪ್ಪುವಿಗೆ ನಂಜೇಗೌಡ, ಉರಿಗೌಡ ಏನು ಮಾಡಿದರೋ ಅದೇ ರೀತಿಯಲ್ಲಿ ಸಿದ್ದರಾಮಯ್ಯರನ್ನೂ ಹೊಡೆದು ಹಾಕಿ ಎಂದು ಕರೆ ಕೊಟ್ಟಿದ್ದಾರೆ. ಇದು ಜನಸಾಮಾನ್ಯರಲ್ಲಿ ಅತ್ಯಂತ ಆತಂಕ ಮೂಡಿಸಿದೆ. ಒಬ್ಬ ಮಂತ್ರಿ ಪ್ರತಿಪಕ್ಷದ ನಾಯಕರನ್ನು ಕೊಂದು ಹಾಕಿ ಎಂದು ಕರೆ ನೀಡಿರುವುದು ರಾಜ್ಯ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರದ ವರ್ಚಸ್ಸು ಕುಸಿದಿದ್ದು, ಹೀಗಾಗಿ ಮುಂದಿನ ಚುನಾವಣೆಗಳಲ್ಲಿ ಸೋಲುವ ಭೀತಿಯಿಂದ ಜಾತಿ–ಜಾತಿ ನಡುವೆ ಬೆಂಕಿ ಹಚ್ಚಿ ಅದರಿಂದ ಲಾಭ ಪಡೆಯಲು ಬಿಜೆಪಿಯವರು ಹುನ್ನಾರ ನಡೆಸುತ್ತಿದ್ದಾರೆ. ಸಿದ್ದರಾಮಯ್ಯರನ್ನು ಇಡಿ, ಐಟಿ ಮತ್ತು ಸಿಬಿಐ ಮೂಲಕ ಬಗ್ಗಿಸಲು ಸಾಧ್ಯವಾಗಲಿಲ್ಲ. ಅಲ್ಲದೇ ಆಪರೇಷನ್ ಕಮಲದ ಮೂಲಕ ಸೆಳೆಯಲು ಆಗದ ಕಾರಣ ಕೊನೆ ಅಸ್ತ್ರವಾಗಿ ಹೊಡೆದು ಹಾಕಿ ಎಂದು ಬಹಿರಂಗ ಕರೆ ನೀಡಲಾಗಿದೆ. ಅಶ್ವತ್ಥ್ ನಾರಾಯಣ ಹೇಳಿಕೆ ವಿರುದ್ಧ ರಾಜ್ಯದಲ್ಲಿ ಹಲವು ದೂರುಗಳು ಪೊಲೀಸ್ ಇಲಾಖೆಗೆ ಸಲ್ಲಿಕೆಯಾಗಿದ್ದರೂ ಎಲ್ಲಿಯೂ ಎಫ್‌ಐಆರ್ ದಾಖಲಿಸಿಲ್ಲ ಎಂದು ಕಿಡಿಕಾರಿದರು.

ಫೆ.25ರಂದು ಬೆಳಗ್ಗೆ 10ಕ್ಕೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸಾವಿರಾರು ಸಂಖ್ಯೆಯಲ್ಲಿ ಸಮಾವೇಶಗೊಳ್ಳಲಿದ್ದೇವೆ. ಬಳಿಕ ಬೃಹತ್ ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತಲುಪಿ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಲಿದ್ದೇವೆ ಎಂದು ತಿಳಿಸಿದರು. ಕಾಂಗ್ರೆಸ್ ಮುಖಂಡ ಬಿರಿಹುಂಡಿ ಬಸವಣ್ಣ ಮಾತನಾಡಿ, ಅಶ್ವತ್ಥ್‌ನಾರಾಯಣ್ ಮಂತ್ರಿಯಂತಹ ಸ್ಥಾನದಲ್ಲಿದ್ದೂ ಸಮಾಜ ಎತ್ತಿಕಟ್ಟುವಂತಹ ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ. ಇದರ ವಿರುದ್ಧ ನಾಳೆ ನಡೆಯುವ ಬೃಹತ್ ಹೋರಾಟಕ್ಕೆ ಜಿಲ್ಲಾ ಕಾಂಗ್ರೆಸ್‌ನಿಂದಲೂ ಸಂಪೂರ್ಣ ಬೆಂಬಲ ನೀಡಲಾಗಿದೆ ಎಂದು ತಿಳಿಸಿದರು.

ಬಿಜೆಪಿಯಿಂದ ಸಿ.ಟಿ.ರವಿ ಹೊರಹಾಕಿ: ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮಾಂಸ ತಿಂದು ಸಿದ್ದರಾಮಯ್ಯನವರು ದೇವಸ್ಥಾನಕ್ಕೆ ಹೋಗಿದ್ದರು ಎಂದು ಈ ಹಿಂದೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ದೊಡ್ಡಾದಾಗಿ ಆರೋಪ ಮಾಡಿ, ಹಿಂದೂಗಳ ಭಾವನೆಗೆ ಧಕ್ಕೆಯಾಗಿದೆ ಎಂದು ಅಬ್ಬರಿಸಿದ್ದರು. ಆದರೆ ಈಗ ಅವರೇ ಮಾಂಸ ತಿದ್ದು ದೇವಸ್ಥಾನಕ್ಕೆ ಹೋಗಿದ್ದಾರೆ. ಆ ಮೂಲಕ ಸಿ.ಟಿ.ರವಿಯವರು ಹಿಂದೂ ಸಂಪ್ರದಾಯಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಬಿಜೆಪಿಯವರಿಗೆ ಬದ್ಧತೆ ಇದ್ದರೆ ಅವರನ್ನು ಪಕ್ಷದಿಂದ ಹೊರ ಹಾಕಲಿ ಎಂದು ಕಿಡಿಕಾರಿದರು. ಜಿಪಂ ಮಾಜಿ ಸದಸ್ಯ ಮಾದೇಗೌಡ, ಮುಖಂಡರಾದ ನಾಗೇಶ್, ಡಿ.ನಾಗಭೂಷಣ್, ಲೋಕೇಶ್ ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.2.2023 ಶನಿವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖನ ಡಾ.ಶ್ರೀರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು– ಕೆ.ಎಸ್. ಸುರೇಖ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಜಾಗತಿಕ ಆರ್ಥಿಕ ಸಲಹೆಗಾರರಾದ ಮೂಕನಹಳ್ಳಿ ರಂಗಸ್ವಾಮಿ ಅವರೊಡನೆ ಸಂವಾದ ನಡೆಸಿಕೊಡುವವರು– ದಿವಾಕರ ಹೆಗಡೆ, 10.00 ಈ. ಗಾಯತ್ರಿ–ವೀಣಾವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ನಾಗಣ್ಣ ಮತ್ತು ತಂಡ – ತತ್ವಪದಗಳು, 1.20 ಭಾವಗೀತೆ–ಕಸ್ತೂರಿ ಶಂಕರ್, ಬಿ.ವಿ. ಮೋಹನ್, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ.ಮೀನಾ, 4.00 ನಾಟಕ–ಯಮನ ಸೋಲು, ರಚನೆ– ಕುವೆಂಪು, ನಿರ್ದೇಶನ– ಹೆಚ್.ಎಸ್. ಸರಸ್ವತಿ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ– ಎಸ್.ಸುಬ್ರಹ್ಮಣ್ಯ, 8.00 ಯುವವಾಣಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ವಿದ್ವಾನ್ ಬಿ.ವಿ. ಬಾಲಸಾಯಿ– ವೇಣುವಾದನ

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ :** ಗುರು ವೈಭವೋತ್ಸವ–2023, ಬೆಳಗ್ಗೆ 7ಕ್ಕೆ ಪವಮಾನ ಹೋಮ (ಮೃತ್ಯುಪೀಡಾ ಪರಿಹಾರ), ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನಕೆರೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 6.30 ರಿಂದ ಶ್ರೀ ಶಂಶುಕುಮಾರ ಮಹಾಯಾಗ ಮನ್ಯು ಶ್ರೀಸೂಕ್ತ ಹೋಮ ಹಾಗೂ ಸುದರ್ಶನ ಹೋಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ವಿಶ್ವ ಕುಷ್ಠರೋಗ ದಿನ, ಮುಖ್ಯ ಅತಿಥಿಗಳು: ಕಾಲೇಜು ಕಾರ್ಯದರ್ಶಿ ಎನ್. ಚಂದ್ರಶೇಖರ್, ಗೌರವ ಅತಿಥಿಗಳು: ಡಾ. ಎಂ.ಎನ್. ರಘುವೀರ್, ಡಾ. ಚಂದ್ರಶೇಖರ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಹನುಮಂತಚಾರ್ ಜೋಶಿ, ಸ್ಥಳ : ಪ್ರೊ. ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಬೆಳಗ್ಗೆ 10ಕ್ಕೆ.

■ **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಅರ್ಕ ಕ್ಲಿನಿಕ್ ಮತ್ತು ಡಯಾಗ್ನೋಸ್ಟಿಕ್ ಸೆಂಟರ್:** ಉಚಿತ ಕಣ್ಣಿನ ತಪಾಸಣೆ, ಬಿಪಿ, ಶುಗರ್ ಪರೀಕ್ಷೆ ಶಿಬಿರ, ಸ್ಥಳ: ಅರ್ಕ ಕ್ಲಿನಿಕ್ ಮತ್ತು ಡಯಾಗ್ನೋಸ್ಟಿಕ್ ಸೆಂಟರ್, ಬೈಪಾಸ್ ರಸ್ತೆ, ಬಿಳಿಕೆರೆ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ :** ಮೂರು ದಿನಗಳ ರಂಗ ಸಹೃದಯ ಕಾರ್ಯಾಗಾರ, ಸ್ಥಳ: ಲಲಿತ ಕಲಾ ರಂಗ ಮಂದಿರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಇಂಟರ್‌ನ್ಯಾಷನಲ್ ಸೆಂಟರ್:** ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಪುನಶ್ಚೇತನ ಕಾರ್ಯಕ್ರಮ, ಉದ್ಘಾಟನೆ: ಡಾ.ಎನ್.ಆರ್. ಪರಶುರಾಮನ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಮುಜಾಫರ್ ಅಸ್ಸಾದಿ, ಉಪಸ್ಥಿತರು: ಇಂಟರ್‌ನ್ಯಾಷನಲ್ ಸೆಂಟರ್ ನಿರ್ದೇಶಕ ಪ್ರೊ. ಜಿ.ಆರ್. ಜನಾರ್ಧನ, ಸ್ಥಳ: ವಿಜ್ಞಾನ ಭವನ, ಬೆಳಗ್ಗೆ 10.30ಕ್ಕೆ.

■ **ಜಯಂತಿ ಬಲ್ಲಾಳ್ ಫ್ಲ್ಯಾಗ್‌ಶಿಪ್ ಸ್ಟೋರ್:** ಕೀರ್ತಿಲಾಲ್ಸ್ ಡೈಮಂಡ್ ಜ್ಯುವೆಲ್ಲರಿ ಪ್ರದರ್ಶನ, ಸ್ಥಳ: ವಿಜಯನಗರ 1ನೇ ಹಂತ, ಬೆಳಗ್ಗೆ 11 ರಿಂದ.

■ **ಕನ್ನಡ ಲೇಖಕಿಯರ ಟ್ರಸ್ಟ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಕಲಾಕೂಟ:** ಡಾ.ಕೆ.ಎಸ್. ರತ್ನಮ್ಮನವರ ಸಾಹಿತ್ಯದ ಕೊಡುಗೆ ಕೃತಿ ಬಿಡುಗಡೆ ಹಾಗೂ ಸನ್ಮಾನ ಸಮಾರಂಭ, ಕೃತಿ ಬಿಡುಗಡೆ: ಸಂಘದ ಅಧ್ಯಕ್ಷೆ ಡಾ. ಹೆಚ್.ಎಲ್. ಪುಷ್ಪಾ, ಕೃತಿ ಕುರಿತು: ಡಾ.ಸಿ.ಜಿ. ಉಷಾದೇವಿ, ಅಧ್ಯಕ್ಷತೆ: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಸನ್ಮಾನಿತರು: ಶ್ರೀಮತಿ ಕೆ.ಲಲಿತಾ ಜಿ.ಟಿ.ದೇವೇಗೌಡ, ಮೈಸೂರು ವಿವಿ ಕುಲಸಚಿವೆ ವಿ.ಆರ್. ಶೈಲಜ, ಉಪಸ್ಥಿತರು: ಮಡ್ಡೀಕೆರೆ ಗೋಪಾಲ್, ಎಂ.ಚಂದ್ರಶೇಖರ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ, ನೃಪತುಂಗ ಕನ್ನಡ ಶಾಲೆ :** ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ, ಧ್ವನಿ ವಿಜ್ಞಾನ ಆಧರಿಸಿದ ಕನ್ನಡ ಕಲಿಕೆ ಕಾರ್ಯಾಗಾರ, ಉಪಸ್ಥಿತರು: ಡಾ.ರಜನಿರಾವ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಬಿ.ಎಸ್.ರಾಮಚಂದ್ರ ರಾಜೇ ಅರಸ್, ಸ್ಥಳ: ಶಾಲೆ ಆವರಣ, ಬೆಳಗ್ಗೆ 11ಕ್ಕೆ.

■ **ಹಿರಿಯ ವಿದ್ಯಾರ್ಥಿಗಳ ಸಂಘ, ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್, ಚೆಷೈರ್ ಡಿಸೆಬಿಲಿಟಿ ಟ್ರಸ್ಟ್, ಬೆಂಗಳೂರು:** ಶ್ರವಣದೋಷವುಳ್ಳವರ ರಾಜ್ಯ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ, ಉದ್ಘಾಟನೆ: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ಚೆಷೈರ್ ಡಿಸೆಬಿಲಿಟಿ ಟ್ರಸ್ಟ್ ವ್ಯವಸ್ಥಾಪಕರಾದ ಶ್ರೀಮತಿ ಅನುರಾಧ ಪಾಟೀಲ್, ಅಧ್ಯಕ್ಷತೆ: ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ. ಇಳಂಗೋವನ್, ಸ್ಥಳ: ಎಸ್‌ಜೆಸಿಇ ಆಟದ ಮೈದಾನ, ಬೆಳಗ್ಗೆ 11ಕ್ಕೆ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘ :** ಜಿಲ್ಲಾ ಮಟ್ಟದ ವಾರ್ಷಿಕ ಸಮಾವೇಶ, ಉದ್ಘಾಟನೆ : ಕೇಂದ್ರ ಸಚಿವ ಭಗವಂತ ಖೂಬಾ, ಮುಖ್ಯ ಅತಿಥಿಗಳು: ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಅತಿಥಿಗಳು: ಜಂಟಿ ಕೃಷಿ ನಿರ್ದೇಶಕರಾದ ಡಾ. ಬಿ.ಎಸ್. ಚಂದ್ರಶೇಖರ್, ಡಾ. ಕೆ. ಮಧುಸೂಧನ್, ಜಂಟಿ ತೋಟಗಾರಿಕಾ ನಿರ್ದೇಶಕ ಡಾ. ಹೆಚ್.ಎಂ. ನಾಗರಾಜ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಎ. ನಂಜಪ್ಪ, ಉಪಸ್ಥಿತರು : ಸಂಘದ ಗೌರವಾಧ್ಯಕ್ಷ ಯೋಗರಾಜ್, ಸ್ಥಳ: ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ, ಶ್ರೀ ರಾಮಕೃಷ್ಣ ಸೇವಾ ಸಂಘ, ಶ್ರೀ ರಾಮಕೃಷ್ಣ ಜಾತ್ರೋತ್ಸವ ಸಮಿತಿ:** ಆಧ್ಯಾತ್ಮಿಕ ಚಿಂತನ ಮಂಥನ ಕಾರ್ಯಕ್ರಮ, ಸಂಜೆ 5 ರಿಂದ ಶ್ರೀ ಪ್ರಸನ್ನ ಗಣಪತಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಹಿರಿಯರ ಯೋಗ ಪ್ರಾತ್ಯಕ್ಷಿಕೆ, ಸಂಜೆ 6 ರಿಂದ ಹೃದ್ರೋಗ ತಜ್ಞರಾದ ಡಾ. ಸಿ.ಎನ್. ಮಂಜುನಾಥ್ ಅವರಿಂದ ಜೀವನ ಶೈಲಿಯ ಕಾಯಿಲೆಗಳು ಕುರಿತು ಪ್ರವಚನ, ಸಂಜೆ 7 ರಿಂದ ರಂಜನಿ ಗಾನ ಕಲಾ ಶಾಲೆ ವಿದ್ಯಾರ್ಥಿಗಳಿಂದ ಹಾಡುಗಾರಿಕೆ, ಸಂಜೆ 7.30 ರಿಂದ ಬಲಮುರಿ ವಿನಾಯಕ ಗಾನಲಹರಿ ಅವರಿಂದ ಹಾಡುಗಾರಿಕೆ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಮಧು ಮಾದೇಗೌಡ, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮರಿತಿಬ್ಬೇಗೌಡ, ಡಾ. ಡಿ. ತಿಮ್ಮಯ್ಯ, ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಯತೀಂದ್ರ ಸಿದ್ದರಾಮಯ್ಯ, ಸಿ.ಎನ್. ಮಂಜೇಗೌಡ, ಸ್ಥಳ: ರಾಮಕೃಷ್ಣ ಪರಮಹಂಸ ವೃತ್ತ, ರಾಮಕೃಷ್ಣನಗರ.

■ **ಶ್ರೀರಾಮಕೃಷ್ಣ ಆಶ್ರಮ:** ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ 188ನೇ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಸಂಜೆ 5.30 ರಿಂದ ಸಂಧ್ಯಾರತಿ, ಸಂಜೆ 5.45 ರಿಂದ ಅಭಿದಾನ್ ಪುಣ್ಯ ಟ್ರಸ್ಟ್ ಸಂಸ್ಥಾಪಕ ದೀಪಕ್ ಅಭಿ ಅವರಿಂದ ಸೇವೆಯ ಕುರಿತು ಇಂಗ್ಲೀಷ್‌ನಲ್ಲಿ ಭಾಷಣ, ಸಂಜೆ 6 ರಿಂದ ರೋಹಿತ್ ಚಕ್ರವರ್ತಿ ಅವರಿಂದ ಮೈಸೂರಿಗೆ ವಿವೇಕ ಬಾಂಧವ್ಯ ಕುರಿತು ಕನ್ನಡದಲ್ಲಿ ಪ್ರವಚನ. ಸಂಜೆ 7ರಿಂದ ಶ್ರೀ ಗಜಾನನ ಭಟ್ ತುಳಗೇರಿ ಅವರಿಂದ ವೀರ ಸಂನ್ಯಾಸಿ– ಏಕವ್ಯಕ್ತಿ ತಾಳಮದ್ದಳೆ ನಡೆಯಲಿದೆ. ಭಾಗವತರು : ಗಜಾನನ ಭಟ್ ತುಳಗೇರಿ, ಮದ್ದಲೆ : ಮಂಜುನಾಥ ಗುಡ್ಡೆದಿಂಬ. ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಭಾರತೀ ಪ್ರಕಾಶನ :** ರವೀಂದ್ರ ಭಟ್ ದೊಡ್ನಳ್ಳಿ ಅವರ ವಿರಚಿತ ಕಗ್ಗದ ಕಂಪು ಪುಸ್ತಕ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಅಧ್ಯಾತ್ಮ ಚಿಂತಕ ದೇವನೂರು ಶಂಕರ್, ಕೃತಿ ಪರಿಚಯ : ಡಾ. ಜ್ಯೋತಿ ಶಂಕರ್, ಮುಖ್ಯ ಅತಿಥಿಗಳು : ಲೇಖಕ ರವೀಂದ್ರ ಭಟ್ ದೊಡ್ನಳ್ಳಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ :** ಶ್ರೀ ತ್ಯಾಗರಾಜ ಮತ್ತು ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ, ಸಂಜೆ 6 ರಿಂದ ಗಾಯತ್ರಿ ಗಾನಸುಧೆ ಶಾಲೆಯ ವಿದ್ಯಾರ್ಥಿಗಳಿಂದ ಗಾಯನ, ಸಂಜೆ 7 ರಿಂದ ವಿದುಷಿ ಶಾರದಾ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಕು. ಪ್ರೇರಣಾ –ಪಿಟೀಲು, ಸುಮುಖ–ಮೃದಂಗ, ಸ್ಥಳ:ಶ್ರೀರಾಮಮಂದಿರದ ಆವರಣ, ಜಯನಗರ.

■ **ಶ್ರೀ ಕೃಷ್ಣಗಾನ ಸಭಾ :** ಭಾರತ ರತ್ನ ಪಂಡಿತ್ ಭೀಮಸೇನ್ ಜೋಶಿಯವರ ಜಯಂತಿ ಮಹೋತ್ಸವ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ವಿದುಷಿ ಸಂಜನಾ ಕೌಶಿಕ್ ಅವರಿಂದ ಗಾಯನ, ಪಂಡಿತ್ ಪ್ರಭು ಸೊನ್ನ–ಹಾರ್ಮೋನಿಯಂ, ಪಂಡಿತ್ ರಮೇಶ್ ಜನ್ನೂರು–ತಬಲ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6.30ಕ್ಕೆ.

■ **ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜರ ಮತ್ತು ಶ್ರೀ ಪುರಂದರದಾಸರ ಸಂಗೀತೋತ್ಸವ, ವಿದುಷಿ ಎಸ್. ಮಹತಿ (ಚೆನ್ನೈ) ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ:ಶ್ರೀಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

■ **ಮೈಸೂರು ಜಿಲ್ಲಾ ಅಮೆಚೂರ್ ಖೋ ಖೋ ಸಂಸ್ಥೆ, ಮಾಡರ್ನ್ ಖೋ ಖೋ ಸಂಸ್ಥೆ:** ಹೊನಲು ಬೆಳಕಿನ ಮಾಡರ್ನ್ ಖೋ ಖೋ ರಾಷ್ಟ್ರೀಯ ಚಾಂಪಿಯನ್‌ಶಿಪ್, ಸ್ಥಳ: ವಿವೇಕಾನಂದ ಕ್ರೀಡಾಂಗಣ, ಕುವೆಂಪುನಗರ, ಸಂಜೆ 6.30ಕ್ಕೆ.

■ **ಮೈಸೂರು ಮ್ಯೂಸಿಕ್ ಅಸೋಸಿಯೇಷನ್ :** ಸಿಸ್ಟರ್ ಸಿಸ್ಟರ್ ಜಾನ್ ಡಿ. ಬ್ರಿಟ್ಟೋ ಸ್ಮರಣಾರ್ಥ ಫ್ಯೂಷನ್ ಸಂಗೀತ ಉತ್ಸವ, ಮ್ಯಾಂಡೋಲಿನ್ ಯು. ರಾಜೇಶ್, ನರೇಶ್ ಅಯ್ಯರ್, ಆಲಾಪ್ ರಾಜು, ಸ್ವಾಮಿನಾಥನ್ ಮತ್ತು ಸ್ಟೀವನ್ ಸ್ಯಾಮುಯೆಲ್ ಅವರಿಂದ ಧ್ರುವ–ದಿ ಬಾಂಡ್. ಸ್ಥಳ : ಜಗನ್ಮೋಹನ ಅರಮನೆ, ಸಂಜೆ 6.30ಕ್ಕೆ.

ಚಂದ್ರವಾಡಿಯಲ್ಲಿಂದು, ನಂಜನಗೂಡು ತಾಲೂಕು

■ **ಜೆಎಸ್‌ಎಸ್ ಪಾಲಿಟೆಕ್ನಿಕ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ:** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ ಸಿ.ಎಸ್.ರಾಜಣ್ಣ ಅವರಿಂದ, ಬೆಳಗ್ಗೆ 10 ರಿಂದ ಉಚಿತ ತಾಂತ್ರಿಕ ಸೇವೆ, ಸಂಜೆ 5ಕ್ಕೆ ಜಿ. ಪುರುಷೋತ್ತಮ್ ಮತ್ತು ಡಾ. ಕೆ.ಎಂ. ಅನಿಲ್ ಕುಮಾರ್ ಅವರಿಂದ ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಜಾಗೃತಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ಜೆಎಸ್‌ಎಸ್ ಪಾಲಿಟೆಕ್ನಿಕ್ ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಜೆ.ಕೆ. ಸದಾಶಿವ ಶೈಲೇಂದ್ರ.

ಪತ್ರಕರ್ತರ ಆರೋಗ್ಯ ಸುರಕ್ಷತೆಗೆ 50 ಲಕ್ಷ ರೂ. ಮೀಸಲು

ಪ್ರಶಸ್ತಿ ಪುರಸ್ಕೃತ ಪತ್ರಕರ್ತರ ಸನ್ಮಾನಿಸಿ ಮೇಯರ್ ಶಿವಕುಮಾರ್ ಘೋಷಣೆ



ಮೈಸೂರು, ಫೆ 24 (ಆರ್‌ಕೆ)– ಮೈಸೂರಿನ ಪತ್ರಕರ್ತರ ಆರೋಗ್ಯ ಸುರಕ್ಷತಾ ನಿಧಿಗೆ ಪಾಲಿಕೆಯು 50 ಲಕ್ಷ ರೂ. ಅನುದಾನ ಮೀಸಲಿರಿಸಲಿದೆ ಎಂದು ಮೇಯರ್ ಶಿವಕುಮಾರ್ ಪ್ರಕಟಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯಿಂದ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಾದ ವಿಜಯವಾಣಿಯ ಮುಳ್ಳೂರು ರಾಜು, ಆಂದೋಲನದ ಮುಳ್ಳೂರು ಶಿವಪ್ರಸಾದ್, ರಮೇಶ್ ನಾಯ್ಕ, ಪಬ್ಲಿಕ್ ಟಿವಿಯ ಕೆ.ಪಿ. ನಾಗರಾಜ, ವಿಜಯ ಕರ್ನಾಟಕದ ಛಾಯಾಗ್ರಾಹಕ ನಾಗೇಶ್ ಪಾಣತ್ತಲೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಶಸ್ತಿಗೆ ಭಾಜನರಾದ ವಿಜಯವಾಣಿಯ ಅವಿನಾಶ್ ಜೈನಹಳ್ಳಿ, ಮೈಸೂರು ಮಿತ್ರ ಛಾಯಾಗ್ರಾಹಕ ಎಂ.ಎನ್. ಲಕ್ಷ್ಮೀನಾರಾಯಣ ಯಾದವ್, ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದಿರುವ ಎಸ್.ಆರ್. ಮಧುಸೂದನ್ ಹಾಗೂ ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಲಭಿಸಿರುವ ಉತ್ತಮ ಸಾಂಘಿಕ ಸಕ್ರಿಯ ಪ್ರಶಸ್ತಿಗಾಗಿ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಮತ್ತು ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ ಅವರನ್ನು ಪಾಲಿಕೆ ಕಚೇರಿ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮೇಯರ್ ಆತ್ಮೀಯವಾಗಿ ಅಭಿನಂದಿಸಿ, ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮನವಿ ಮೇರೆಗೆ ಮೈಸೂರು ಮಹಾನಗರ ಪಾಲಿಕೆ ಇತಿಹಾಸದಲ್ಲಿ ಇದೇ ಪ್ರಥಮ ಭಾರಿ ಪತ್ರಕರ್ತರ ಆರೋಗ್ಯ ಸುರಕ್ಷತೆಗಾಗಿ ಕಳೆದ ವರ್ಷ 25 ಲಕ್ಷ ರೂ. ಅನುದಾನ ಇರಿಸಿ ಅದರಲ್ಲಿ ಈಗಾಗಲೇ 30 ಮಂದಿಗೆ ಆರ್ಥಿಕ ನೆರವು ನೀಡಲಾಗಿದೆ. ಈ ವರ್ಷ ಅದನ್ನು 50 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು ಎಂದ ಅವರು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ರಾಜ್ಯ ಮಟ್ಟದಲ್ಲಿ ಉತ್ತಮ ಪ್ರಶಸ್ತಿ ಗಳಿಸಿರುವುದು ಶ್ಲಾಘನೀಯ ಎಂದರು.

ಸಂಸದ ಪ್ರತಾಪ್ ಸಿಂಹ, ಉಪ ಮೇಯರ್ ಡಾ. ಜಿ. ರೂಪಾ, ಪಾಲಿಕೆ ಸದಸ್ಯರಾದ ಎಸ್.ಬಿ.ಎಂ. ಮಂಜು, ಬಿ.ವಿ. ಮಂಜುನಾಥ್, ಪ್ರೇಮಾ ಶಂಕರೇಗೌಡ, ಅಶ್ವಿನಿ ಅನಂತು, ಶೋಭಾ, ಜಗದೀಶ್, ಕೆ.ಜೆ. ರಮೇಶ್, ಪಲ್ಲವಿ ಬೇಗಂ, ವೇದಾವತಿ, ಛಾಯಾದೇವಿ, ಸತ್ಯರಾಜು, ಕಮೀಷನರ್ ಜಿ. ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ಹಲವರು ಪ್ರಶಸ್ತಿ ಪುರಸ್ಕೃತರಿಗೆ ಶುಭ ಕೋರಿದರು.

ಕಲ್ಯಾಣ ಮಂಟಪದಲ್ಲಿ ವರನ ತಾಯಿಯ ಚಿನ್ನಾಭರಣ ಕಳವು

ಮೈಸೂರು, ಫೆ24–ಕಲ್ಯಾಣ ಮಂಟಪದಲ್ಲಿ ವರನ ತಾಯಿಯ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕು ಆನೆಗುಂದಿ ಗ್ರಾಮದ ನಿರ್ಮಲಾ ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಫೆ.21ರಂದು ರಾತ್ರಿ ಮೈಸೂರಿನ ಬಲ್ಲಾಳ್ ಸರ್ಕಲ್ ಬಳಿ ಇರುವ ನಿತ್ಯೋತ್ಸವ ಕಲ್ಯಾಣ ಮಂಟಪದಲ್ಲಿ ಇವರ ಪುತ್ರ ಕೆ.ಗೌತಮ್‌ನ ವಿವಾಹದ ಆರತಕ್ಷತೆ ನಡೆಯುತ್ತಿತ್ತು. ರಾತ್ರಿ 10.10 ಗಂಟೆ ಸಮಯದಲ್ಲಿ ಇವರು ತಮ್ಮ ವ್ಯಾನಿಟಿ ಬ್ಯಾಗ್ ಅನ್ನು ಚೇರ್‌ವೊಂದರ ಮೇಲಿಟ್ಟು ಫೋಟೋ ತೆಗೆಸಿಕೊಂಡು ಹಿಂತಿರುಗುವಷ್ಟರಲ್ಲಿ ಅವರ ವ್ಯಾನಿಟಿ ಬ್ಯಾಗ್ ಕಳುವಾಗಿದೆ. ಅದರಲ್ಲಿ 41 ಗ್ರಾಂ ತೂಕದ ಮಾಂಗಲ್ಯ ಸರ, 41 ಗ್ರಾಂ ತೂಕದ ಚಿನ್ನದ ಬಳೆ, ತಲಾ 7 ಗ್ರಾಂ ತೂಕದ ಓಲೆ ಮತ್ತು ರಿಂಗ್, 4 ಗ್ರಾಂ ತೂಕದ ರಿಂಗ್, 8 ಗ್ರಾಂ ತೂಕದ ಜುಮುಕಿ, 7 ಗ್ರಾಂ ತೂಕದ ಜಡೆ ಬಿಲ್ಲೆ, 5 ಗ್ರಾಂನ ಚಿನ್ನದ ಗುಂಡು, ಲಕ್ಷ ರೂ. ನಗದು, 3 ಮೊಬೈಲ್‌ಗಳು ಇತ್ತು ಎಂದು ನಿರ್ಮಲಾ ಪತಿ ಕೆ.ಮುರುಳಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಾ.5ರಂದು ಎಸ್‌ಎಸ್‌ಎಸ್‌ಸಿ ವಿದ್ಯಾರ್ಥಿಗಳಿಗೆ ಟ್ಯಾಲೆಂಟ್ ಸರ್ಚ್



ಮೈಸೂರು,ಫೆ.24(ಪಿಎಂ)–ಶ್ರೀ ವಿಜಯರಂಗ ಚಾರಿಟೆಬಲ್ ಟ್ರಸ್ಟ್ ಅಧೀನದ ಮಾರ್ವೆಲ್ ಪಿಯು ಕಾಲೇಜು ವತಿಯಿಂದ ಮಾ.5ರಂದು ಎಸ್‌ಎಸ್‌ಎಸ್‌ಸಿ ವಿದ್ಯಾರ್ಥಿಗಳಿಗೆ ಟ್ಯಾಲೆಂಟ್ ಸರ್ಚ್–ಸ್ಕಾಲರ್‌ಶಿಪ್ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಂ.ಸಿದ್ದೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಸ್‌ಸಿ ವಿದ್ಯಾರ್ಥಿಗಳಿಗೆ ವಿಷಯ ಜ್ಞಾನ ಹೆಚ್ಚಿಸಲು ಈ ಪರೀಕ್ಷೆ ನಡೆಸಲಾಗುತ್ತಿದೆ. ಪರೀಕ್ಷೆ ಬರೆಯಲಿಚ್ಛಿಸುವವರು ಅಂದು ಬೆಳಗ್ಗೆ 10ಕ್ಕೆ ಕಾಲೇಜಿನ (ಲಲಿತಾದ್ರಿಪುರ) ಆವರಣದಲ್ಲಿ ಹಾಜರಿರಬೇಕು. ಉತ್ತಮ ರೀತಿ ಪರೀಕ್ಷೆ ಬರೆದ ನಾಲ್ವರನ್ನು ಆಯ್ಕೆ ಮಾಡಿ, ಕ್ರಮವಾಗಿ 50 ಸಾವಿರ, 25 ಸಾವಿರ, 10 ಸಾವಿರ, 5 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಅಲ್ಲದೆ, 20 ಮಂದಿಗೆ ಸಮಾಧಾನಕರ ಬಹುಮಾನ ದೊರೆಯಲಿದೆ. ಪರೀಕ್ಷೆಗೆ ನೋಂದಣಿ ಉಚಿತ. ವಿವರಗಳಿಗೆ ದೂ.ಸಂ 0821–2950971 ಅಥವಾ ಮೊ.ಸಂ. 7676581441 ಅನ್ನು ಸಂಪರ್ಕಿಸಬಹುದು ಎಂದರು. ಟ್ರಸ್ಟ್ ಕಾರ್ಯದರ್ಶಿ ಡಾ. ಗಿಣಿಸ್ವಾಮಿ, ಕಾಲೇಜಿ ಪ್ರಾಂಶುಪಾಲ ಪೆರಿಯಾ ನಾಯಗಂ ಗೋಷ್ಠಿಯಲ್ಲಿದ್ದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಮೈಸೂರು, ಫೆ. 24–ವಿದ್ಯಾರಣ್ಯ ಟ್ರಸ್ಟ್ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ವಿದ್ಯಾರಣ್ಯಪುರಂನ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಆವರಣದಲ್ಲಿ ಫೆ28ರ ಸಂಜೆ 5:30 ಗಂಟೆಗೆ ಏರ್ಪಡಿಸಲಾಗಿದೆ ಎಂದು ವಿದ್ಯಾರಣ್ಯ ಟ್ರಸ್ಟ್‌ನ ಅಧ್ಯಕ್ಷರಾದ ಜಿ.ವಿ.ರವಿಶಂಕರ್ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಡ್ಡಿಕೆರೆ ಗೋಪಾಲ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಂಚಾಲಕರಾದ ಅನಂತ ರಾಮು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಆರ್.ಎಚ್.ಪವಿತ್ರ ಹಾಗೂ ಇನ್ನಿತರರು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಇಂದು ಪರಿಸರ ಸ್ನೇಹಿ ಉತ್ಪನ್ನಗಳ ಬಳಕೆ ಬಗ್ಗೆ ಜಾಗೃತಿ ಜಾಥಾ



ಮೈಸೂರು,ಫೆ.24(ಪಿಎಂ)– ಮೈಸೂರಿನ ಪೋದಾರ್ ಇಂಟರ್‌ನ್ಯಾಷನಲ್ ಶಾಲೆ ವತಿಯಿಂದ ಫೆ.25ರಂದು ಪರಿಸರ ಸ್ನೇಹಿ ಉತ್ಪನ್ನಗಳ ಬಳಕೆಗೆ ಆದ್ಯತೆ ನೀಡುವ ಬಗ್ಗೆ ಜಾಗೃತಿ ಮೂಡಿಸಲು ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಶಾಲೆಯ ಪ್ರಾಂಶುಪಾಲ ಕೃಷ್ಣ ಬಂಗೇರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾವಯವ ಹತ್ತಿ ಬಟ್ಟೆ ಹಾಗೂ ಹಳೆಯ ಬಟ್ಟೆಗಳ ಮರುಬಳಕೆಗೆ ಆದ್ಯತೆ ನೀಡಬೇಕೆಂದು ಜಾಗೃತಿ ಮೂಡಿಸಲು ಈ ಜಾಥಾ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 10ಕ್ಕೆ ವಿವಿ ಮೊಹಲ್ಲಾದ ಮಾತೃಮಂಡಳಿ ವೃತ್ತದಿಂದ ಕಾಳಿದಾಸ ರಸ್ತೆ ಮಾರ್ಗವಾಗಿ ಬಿಎಂ ಹೆಬಿಟೆಟ್ ಮಾಲ್‌ವರೆಗೆ ಶಾಲೆಯ 6ರಿಂದ 9ನೇ ತರಗತಿಯ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಾಥಾ ನಡೆಸಲಿದ್ದಾರೆ. ಆಸಕ್ತ ಸಾರ್ವಜನಿಕರೂ ಜಾಥಾದಲ್ಲಿ ಭಾಗವಹಿಸಬಹುದು ಎಂದರು. ಇದೇ ವೇಳೆ ಹಳೇ ಬಟ್ಟೆಗಳಿಂದ ತಾವೇ ತಯಾರಿಸಿದ ವಸ್ತುಗಳ ಪ್ರದರ್ಶಿಸಿ ಮಾರಾಟ ಮಾಡುವ ಮೂಲಕ ಹಳೇ ಬಟ್ಟೆ ಮರುಬಳಕೆ ಬಗ್ಗೆ ಶಾಲೆ ವಿದ್ಯಾರ್ಥಿಗಳು ಜಾಗೃತಿ ಮೂಡಿಸಲಿದ್ದಾರೆ. ಮಾರಾಟದಿಂದ ಬಂದ ಹಣವನ್ನು ಅನಾಥಾಶ್ರಮವೊಂದಕ್ಕೆ ದಾನವಾಗಿ ನೀಡಲಾಗುವುದು ಎಂದು ತಿಳಿಸಿದರು. ಶಾಲೆಯ ವಿದ್ಯಾರ್ಥಿಗಳಾದ ಖುಷಿ ಹೆಗ್ಡೆ, ಲೀಯಾ ಗುಪ್ತ, ವಸುಂಧರಾ, ಅಭಿ ರಾಮ್ ಗೋಷ್ಠಿಯಲ್ಲಿದ್ದರು.

ಮೈಸೂರು ಹೋಟೆಲ್ ಉದ್ಯಮಿ ಆರ್.ನಾಗರಾಜ್ ಪ್ರಸಾದ್ ನಿಧನ



ಮೈಸೂರು, ಫೆ. 24–ಸ್ವಾನ್ ಗ್ರೂಪ್ ಆಫ್ ಹೋಟೆಲ್ಸ್ ಸಂಸ್ಥಾಪಕರು ಹಾಗೂ ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಆರ್.ನಾಗರಾಜ್ ಪ್ರಸಾದ್ ಶುಕ್ರವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ಚಾಮುಂಡಿ ಬಾಯಿ, ಪುತ್ರರಾದ ಅನಿಲ್ ಕುಮಾರ್ ಮತ್ತು ಸುನೀಲ್ ಕುಮಾರ್, ಸೊಸೆಯಂದಿರಾದ ರೇಣುಕಾ ಮತ್ತು ಸವಿತಾ, ಪುತ್ರಿಯರಾದ ಬೀನಾ ಪ್ರಸಾದ್ ಮತ್ತು ರೀನಾ ಶೆಣೈ, ಅಳಿಯಂದಿರಾದ ಸತ್ಯಜಿತ್ ಸಿಂಗ್ ಮತ್ತು ನಗರದ ಹೆಸರಾಂತ ಉದ್ಯಮಿ ಡಾ.ಮಹೇಶ್‌ಶೆಣೈ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸ್ವಾನ್ ಗ್ರೂಪ್ ಆಫ್ ಹೋಟೆಲ್ಸ್, ಮೌರ್ಯ ಪ್ಯಾಲೇಸ್, ಮೌರ್ಯ ರೆಸಿಡೆನ್ಸಿ, ಜುವೆಲ್ ರಾಕ್, ವೆಜ್ ಕೋರ್ಟ್, ಮೌರ್ಯ ವೆಜ್ ಅಂಡ್ ಗ್ರ್ಯಾಂಡ್ ಮೌರ್ಯ ಹೋಟೆಲ್ ಅಂಡ್ ರೆಸಾರ್ಟ್ಸ್‌ಗಳನ್ನು ಒಳಗೊಂಡಿದೆ.

ನಾಗರಾಜ್ ಅವರ ಪಾರ್ಥೀವ ಶರೀರವನ್ನು ಸಿದ್ದಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ ಹಿಂಭಾಗವಿರುವ ಅವರ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿದೆ. ಇವರ ಅಂತ್ಯಕ್ರಿಯೆ ನಾಳೆ (ಫೆ. 25) ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಮತ್ತು ಇತರರು ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಫೆ.28ರಿಂದ ಮೂರು ದಿನ ಜೆಸಿ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ



ಮೈಸೂರು,ಫೆ.24(ಪಿಎಂ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಅಧೀನದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ (ಎಸ್‌ಜೆಸಿಇ) ವಜ್ರ ಮಹೋತ್ಸವದ ಅಂಗವಾಗಿ ಕಾಲೇಜಿನ ವತಿಯಿಂದ ಫೆ.28ರಿಂದ ಮಾ.2ರವರೆಗೆ 'ಆರೋಗ್ಯ, ಶಕ್ತಿ ಮತ್ತು ಪರಿಸರಕ್ಕಾಗಿ ಸುಧಾರಿತ ಸಾಮಾಗ್ರಿಗಳು' ಕುರಿತು ಮೂರು ದಿನಗಳ 2ನೇ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎ.ಎನ್. ಸಂತೋಷ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ರಸಾಯನಶಾಸ್ತ್ರ ವಿಭಾಗ, ಬಯೋಟೆಕ್ನಾಲಜಿ ವಿಭಾಗ, ಎನ್ವಿರ್ಮೆಂಟಲ್ ಇಂಜಿನಿಯರಿಂಗ್ ಅಂಡ್ ಪಾಲಿಮರ್ ಸೈನ್ಸ್ ಅಂಡ್ ಟೆಕ್ನಾಲಜಿ ವಿಭಾಗದಿಂದ ಕಾಲೇಜಿನ ಐಎಸ್ ಸೆಮಿನಾರ್ ಹಾಲ್‌ನಲ್ಲಿ ಸಮ್ಮೇಳನ ನಡೆಯಲಿದೆ. ಸಮ್ಮೇಳನದಲ್ಲಿ ದೇಶ, ವಿದೇಶಗಳ 230ಕ್ಕೂ ಹೆಚ್ಚು ಸಂಶೋಧಕರು ಭಾಗವಹಿಸಿ, ತಮ್ಮ ಸಂಶೋಧನೆಗಳನ್ನು ಸಾದರಪಡಿಸಲಿದ್ದಾರೆ. ಒಟ್ಟಾರೆ 300ಕ್ಕೂ ಹೆಚ್ಚು ಮಂದಿ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಫೆ28ರಂದು ಬೆಳಗ್ಗೆ 10.30ಕ್ಕೆ ನಡೆಯುವ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಕೆನಡಾದ ಸಾಸ್ಕಾಚೆವಾನ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ಲೀ ಡಿ.ವಿಲ್ಸನ್ ಪಾಲ್ಗೊಳ್ಳಲಿದ್ದಾರೆ. ನವದೆಹಲಿಯ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಜಂಟಿ ಸಲಹೆಗಾರ ಡಾ.ವಿ.ಕೆ.ಚೌರಾಸಿಯಾ ಮುಖ್ಯಭಾಷಣ ಮಾಡಲಿದ್ದಾರೆ. ನವದೆಹಲಿಯ ಜಲಶಕ್ತಿ ಸಚಿವಾಲಯದ ನಿರ್ದೇಶಕ ಎನ್.ಅಶೋಕ್‌ಬಾಬು, ಜಂಟಿ ನಿರ್ದೇಶಕಿ ಡಾ.ಸಬಿತಾ ಮಾಧ್ವಿ ಸಿಂಗ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಮಾ.2ರಂದು ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಧಾರವಾಡದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕ ಡಾ.ಎಸ್.ಎಂ.ಶಿವಪ್ರಸಾದ್, ತಮಿಳುನಾಡು ಕೇಂದ್ರೀಯ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಎಸ್.ನಾಗರಾಜನ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಬಿ. ಕಿವಾಡೆ, ಪ್ರಾಧ್ಯಾಪಕ ಡಾ.ಅನಂತಪದ್ಮನಾಭ, ಸಮ್ಮೇಳನದ ಸಂಚಾಲಕ ಡಾ.ಪಿ.ಮಲ್ಲು ಗೋಷ್ಠಿಯಲ್ಲಿದ್ದರು.

ಫೆ.28 ರಂದು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ

ಮೈಸೂರು, ಫೆ. 24– ಮೈಸೂರು ನಗರ ಕನ್ನಡ ಸಾಹಿತ್ಯ ಪರಿಷತ್ ಘಟಕವು ಫೆ.28ರಂದು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಏರ್ಪಡಿಸಲಾಗಿದೆ. ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಹಿರಿಯ ಲೇಖಕರು, ಕಲಾವಿದರು ಆದ ಎಲ್.ಶಿವಲಿಂಗಪ್ಪ ಅವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಗರಾಧ್ಯಕ್ಷ ಕೆ.ಎಸ್. ಶಿವರಾಮು ಹಾಗೂ ಸಮ್ಮೇಳನದ ಪ್ರಧಾನ ಸಂಚಾಲಕ ಎಂ. ಚಂದ್ರಶೇಖರ್ ತಿಳಿಸಿದ್ದಾರೆ.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹಾರಂಗಿ ಪುನರ್ವಸತಿ ವಿಭಾಗ,
ಕುಶಾಲನಗರ-571234, ಸೋಮವಾರಪೇಟೆ ತಾ||, ಕೊಡಗು ಜಿಲ್ಲೆ, ಕರ್ನಾಟಕ
ದೂರವಾಣಿ ಸಂಖ್ಯೆ: 08276-274365 ಫ್ಯಾಕ್ಸ್ ಸಂಖ್ಯೆ: 08276-274365, ಇ-ಮೇಲ್: eehrdksh@gmail.com

ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಟಿ/ಟೆಂಡರ್ ಪ್ರಕಟಣೆ ಸಂಖ್ಯೆ : 30/22-23 ದಿನಾಂಕ: 24.02.2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ ಕರೆ)

(ಐಟಂವಾರು: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಈ ವಿಭಾಗ ವ್ಯಾಪ್ತಿಯಿಂದ, ಕುಶಾಲನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ 4701 ಲೆಕ್ಕಶೀರ್ಷಿಕೆಯಡಿ 2 ಕಾಮಗಾರಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ 300.00 ಹಾಗೂ ರೂ.400.00 ಲಕ್ಷಗಳಿದ್ದು ಈ ಕಾಮಗಾರಿಗಳಿಗೆ ನಿಗಧಿತ ದರ್ಜೆ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ

ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ 3.3.2023 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ : 4.03.2023ರ ಪೂರ್ವಾಹ್ನ 4.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ: http://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಪುನರ್ವಸತಿ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕುಶಾಲನಗರ, ಸೋಮವಾರಪೇಟೆ ತಾ., ಕೊಡಗು ಜಿಲ್ಲೆ-571234

ನಕ್ಕರೆ ಅದೇ ಸ್ವರ್ಗ

ಗುಂಡ : ಓದುವ ಆಸೆಯಿಂದ ಬೆಳಗ್ಗೆ ಬೇಗ ಎದ್ದೆ
ಸ್ನೇಹಿತ : ಮತ್ಯಾಕೆ ತಿರುಗಿ ಮಲಗಿದೆ?
ಗುಂಡ : ಓದುವ ಆಸೆಯಿಂದ ಬೆಳಗ್ಗೆ ಬೇಗ ಎದ್ದೆ, ಆದರೆ ಆಸೆಯೇ ದುಃಖಕ್ಕೆ ಮೂಲ ಎಂದು ಪುನಃ ಮಲಗಿದೆ!

ಮೈಸೂರು ಮಿತ್ರ

ಶನಿವಾರ, 25 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸದವಕಾಶ ಸಿಕ್ಕಿದ ಮರುಕ್ಷಣ ಕಾರ್ಯಪ್ರವೃತ್ತನಾಗುವುದು ಯಶಸ್ಸಿನ ಗುಟ್ಟು –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ

ನಿಮ್ಮ ಪತ್ರಗಳು

ಬಿಜೆಪಿ ಸರ್ಕಾರ ರಾಮರಾಜ್ಯ ಕನಸು ನನಸು ಮಾಡಲಿ

ಮಾನ್ಯರೆ,

ನಮ್ಮ ದೇಶವನ್ನು ಸುಸ್ಥಿತಿಯಲ್ಲಿಟ್ಟು, ದೇಶದ ರಕ್ಷಣೆಯನ್ನು ಮಾಡುತ್ತಾ ದೇಶವನ್ನು ಉಗ್ರವಾದಿಗಳಿಂದ ರಕ್ಷಿಸಿ ವಿಶ್ವ ನಾಯಕರುಗಳೆಲ್ಲರೂ ಭಾರತದತ್ತ ಮುಖ ಮಾಡಿ ಭಾರತ ದೇಶದ ಆಡಳಿತ ವೈಖರಿಯನ್ನು ನೋಡುವಂತೆ ಮಾಡಿದ ನರೇಂದ್ರ ಮೋದಿಯವರ ಬಿಜೆಪಿ ಸರ್ಕಾರಕ್ಕೆ ಹೃದಯಪೂರ್ವಕ ಧನ್ಯವಾದಗಳನ್ನು ಭಾರತೀಯರೆಲ್ಲರೂ ಸಲ್ಲಿಸಬೇಕಾಗಿದೆ.

ಹಿಂದೆ ಸುಮಾರು 70ರ ದಶಕಗಳ ಕಾಲ ದೇಶ ಆಳಿದ ಹಲವು ನಾಯಕರುಗಳು ನೀತಿ ನಿಯಮ ಇಲ್ಲದ ಅಧಿಕಾರವನ್ನು ನಡೆಸಿ ನಮ್ಮ ದೇಶವನ್ನು ದಿವಾಳಿ ಹಂತಕ್ಕೆ ಕೊಂಡೊಯ್ದ ಪರಿಸ್ಥಿತಿಯನ್ನು ನಾವೆಲ್ಲರೂ ನೋಡಿದ್ದೇವೆ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಆಪದ್ಬಾಂದವರಂತೆ ಬಂದ ನರೇಂದ್ರ ಮೋದಿಯವರ ಬಿಜೆಪಿಯ ಸಮರ್ಥ ನಾಯಕತ್ವದಿಂದ ದೇಶವನ್ನು ಮುನ್ನಡೆಸಿಕೊಂಡು ಎಲ್ಲರನ್ನೂ ಒಟ್ಟಿಗೆ ಕರೆದೊಯ್ದ ಕೀರ್ತಿಯು ಅವರಿಗೆ ಸಲ್ಲಬೇಕಾಗಿದೆ. ನರೇಂದ್ರ ಮೋದಿಯವರ ಬಿಜೆಪಿ ಸರ್ಕಾರ ನಮ್ಮ ಎಲ್ಲಾ ರಾಜ್ಯಗಳಲ್ಲಿ ಇನ್ನೂ 40 ವರ್ಷಗಳ ಕಾಲ ಆಡಳಿತದ ಚುಕ್ಕಾಣಿಯನ್ನು ಹಿಡಿದು ರಾಮರಾಜ್ಯದ ಕನಸನ್ನು ನನಸನ್ನಾಗಿ ಮಾಡಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ.

–ಎನ್.ಆರ್. ವಿಜಯಕುಮಾರ್, ಮೈಸೂರು.

ಮಹಿಳಾ ಅಧಿಕಾರಿಗಳ ಜಗಳ ಶೋಭೆ ತರುವಂತದ್ದಲ್ಲ!

ಮಾನ್ಯರೆ,

ಇಬ್ಬರು ಹಿರಿಯ ಮಹಿಳಾ ಅಧಿಕಾರಿಗಳ ನಡುವಿನ ಸಾರ್ವಜನಿಕ ಜಗಳ ಜವಾಬ್ದಾರಿಯುತ ಸ್ಥಾನದಲ್ಲಿರುವವರಿಗೆ ಶೋಭೆ ತರುವುದಿಲ್ಲ. ಇಬ್ಬರು ಅಧಿಕಾರಿಗಳು ತಮ್ಮ ನಡುವೆ ಇರುವ ಆರೋಪ ಪ್ರತ್ಯಾರೋಪಗಳನ್ನು ತಮ್ಮ ವ್ಯಾಪ್ತಿಯಲ್ಲಿನ ಸಮಕ್ಷಮ ಉನ್ನತ ಅಧಿಕಾರಿಗಳಿಗೆ ದೂರು ಕೊಟ್ಟು ಅಲ್ಲಿ ಬಗೆಹರಿಸಿಕೊಳ್ಳಬೇಕೆ ಹೊರತು ಮಾಧ್ಯಮಗಳೆದುರು ಪರಸ್ಪರ ನಿಂದನೆಯಲ್ಲಿ ತೊಡಗಿದ್ದು ಸರಿಯಲ್ಲ.

ತಾವು ಮಾಡುವ ಕೆಲಸದಲ್ಲಿ ಇಬ್ಬರು ಕಾರ್ಯದಕ್ಷತೆ ಹಾಗೂ ಬದ್ಧತೆಯನ್ನು ತೋರ್ಪಡಿಸಬೇಕೇ ಹೊರತು, ಈ ರೀತಿ ಹಾದಿ ಬೀದಿ ರಂಪ ಮಾಡಿಕೊಂಡು ಪರಸ್ಪರ ಒಬ್ಬರನ್ನೊಬ್ಬರು ಅವಹೇಳನ ಮಾಡಿಕೊಳ್ಳುವುದು ಅನಾರೋಗ್ಯಕರ ಬೆಳವಣಿಗೆ ಆಗಿದೆ. ಮಾಧ್ಯಮಗಳೆದುರು ತಾವಿಬ್ಬರು ದೋಷಾರೋಪ ಮಾಡುತ್ತಿರುವ ಜಗಳ ನಿಂದನೆ ಹಾಗೂ ಅವಹೇಳನ ಇವೆಲ್ಲವನ್ನು ಸೂಕ್ಷ್ಮವಾಗಿ ನೋಡುತ್ತಿರುವ ಜನರ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂಬ ಕನಿಷ್ಠ ಸೂಕ್ಷ್ಮತೆಯ ಅರಿವು ಇಬ್ಬರು ಮಹಿಳಾ ಅಧಿಕಾರಿಗಳಲ್ಲಿ ಇಲ್ಲದಿರುವುದು ನಾಚಿಕೆಗೇಡಿನ ಸಂಗತಿ ಆಗಿದೆ. ಇನ್ಮುಂದೆ ಈ ರೀತಿಯ ಘಟನೆಗಳು ಮರುಕಳಿಸದಂತೆ ಅಧಿಕಾರಿಗಳ ವಲಯದಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಜೀವ ಹಿಂಡುತ್ತಿರುವ ವಾಯುಮಾಲಿನ್ಯ

ಮಾನ್ಯರೆ,

'ಕಾಡು ಬೆಳೆಸಿ ನಾಡು ಉಳಿಸಿ' ಎಂಬ ನೀತಿ ಬೋಧನೆ ನಮ್ಮೆಲ್ಲರಿಗೆ ಮನದಟ್ಟಾಗಿದ್ದರೂ ನಗರಗಳನ್ನು ಬೆಳೆಸುವ ಭರದಲ್ಲಿ ನಾವು ಪರಿಸರ ನಾಶ ಮಾಡುತ್ತಿದ್ದೇವೆ. ಇದಕ್ಕೆ ಪೂರಕವೆಂಬಂತೆ ನಾಡಿನಲ್ಲಿ ಪ್ರಮುಖವಾದ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು ಮನಸೋ ಇಚ್ಛೆ ಪರಿಸರ ಹದಗೆಡುಸುತ್ತಿವೆ. ಅದರಲ್ಲೂ ರಾಯಚೂರು ಮತ್ತು ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು ವಾಯುಮಂಡಲಕ್ಕೆ ಹಾರುವ ಬೂದಿ ಮತ್ತು ವಿಷ ಅನಿಲಗಳಾದ SO2,CO2, CO, PM2.5, PM10 ಮುಂತಾದವುಗಳನ್ನು ಮಿತಿ ಮೀರಿ ಹೊರಸೂಸುತ್ತಿವೆ. ಈ ವಿಷ ಅನಿಲಗಳಿಂದ ಮತ್ತು ಸರಿಯಾದ ಹಾರುವ ಬೂದಿ ನಿಯಂತ್ರಣವಿಲ್ಲದ ಕಾರಣ ಈ ವಿದ್ಯುತ್ ಕೇಂದ್ರಗಳ ಸುತ್ತಮುತ್ತಲಿರುವ ದೇವಸೂಗೂರು, ಯದ್ಲಾಪುರ, ಚಿಕ್ಕಸೂಗೂರು ಗ್ರಾಮ ನಿವಾಸಿಗಳಲ್ಲಿ ಉಸಿರಾಟದ ತೊಂದರೆ, ಶ್ವಾಸಕೋಶದ ಕ್ಯಾನ್ಸರ್ ಕಂಡುಬರುತ್ತಿದ್ದಲ್ಲದೆ ಪರಿಸರದಲ್ಲಿ ದಿನೇ ದಿನೆ ತಾಪಮಾನ ಹೆಚ್ಚುತ್ತಿದೆ.

ಆದಕಾರಣ ರಾಜ್ಯ ಸರ್ಕಾರ ಕೂಡಲೇ ಈ ವಿದ್ಯುತ್ ಕೇಂದ್ರಗಳಿಂದ ಉದ್ಭವಿಸುವ ವಾಯು ಮಾಲಿನ್ಯ ನಿಯಂತ್ರಿಸಲು ನೂತನ ತಂತ್ರಜ್ಞಾನ ಬಳಸಬೇಕು ಅಥವಾ ಈ ವಿದ್ಯುತ್ ಕೇಂದ್ರಗಳನ್ನು ನಿಷ್ಕ್ರಿಯಗೊಳಿಸಿ ಪರ್ಯಾಯವಾದ ಪರಿಸರ ಸ್ನೇಹಿ ಸೌರ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಿ ವಿದ್ಯುತ್ ಬೇಡಿಕೆ ಪೂರೈಸಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು

ವಿಟಿಯು ನಿಯಮದಿಂದ ತಾಂತ್ರಿಕ ಶಿಕ್ಷಣ ಗುಣಮಟ್ಟ ಕುಸಿತ

ಮಾನ್ಯರೇ,

ಕರ್ನಾಟಕ ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲೊಂದಾದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (Visvesraya Technological University) ಇತ್ತೀಚಿನ ಹತ್ತು ಹಲವು ವ್ಯತಿರಿಕ್ತ ನೀತಿ ನಿಯಮಗಳಿಂದ ತಾಂತ್ರಿಕ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಕೋವಿಡ್ ಸಾಂಕ್ರಾಮಿಕ ರೋಗ ಪ್ರಾರಂಭವಾದ ವರ್ಷ ವಿದ್ಯಾರ್ಥಿಗಳಿಗೆ Year back ಮತ್ತು Neck back ನಿಯಮಗಳನ್ನು ಸಡಿಲಗೊಳಿಸಿ ಮೊದಲನೆ ವರ್ಷದಿಂದ ಹಿಡಿದು ಪ್ರತಿ ಸೆಮಿಸ್ಟರ್‌ನಲ್ಲಿ ವಿಷಯಗಳನ್ನು ಬಾಕಿ ಉಳಿಸಿಕೊಂಡಿದ್ದರೂ ಸಹ ಕೊನೆ ವರ್ಷಕ್ಕೆ ದಾಖಲಾಗಬಹುದು ಎಂಬ ನಿಯಮ ರೂಪಿಸಿರುವುದು ಸರಿಯಷ್ಟೆ, ವಿದ್ಯಾರ್ಥಿಗಳು VTUನ ಈ ನಿಯಮವನ್ನು ದುರುಪಯೋಗಪಡಿಸಿಕೊಂಡು ಒಟ್ಟಾರೆ ಇಂಜಿನಿಯರಿಂಗ್‌ನ್ನೂ ಪೂರ್ಣಗೊಳಿಸುವುದಿಲ್ಲ ಹಾಗೂ ಈ ನಿಯಮ ಸಮಾಜಕ್ಕೆ ಮತ್ತು ಕುಟುಂಬಕ್ಕೆ ಕಂಟಕವೇ ಸರಿ.

ವಿದ್ಯಾರ್ಥಿಗಳಿಗೆ ಕನಿಷ್ಟ ಒಂದು ವರ್ಷ ಮನೆಯಲ್ಲಿರಬೇಕು ಎಂಬ ಭಯದಿಂದಲಾದರೂ ಸರಿಯಾಗಿ ಶ್ರಮಪಟ್ಟು ಓದಿ ವ್ಯಾಸಂಗವನ್ನು ಮುಂದುವರೆಸುವ ಅವಕಾಶಗಳನ್ನು ಕಸಿದು, ಎಷ್ಟೇ ವಿಷಯಗಳಲ್ಲೂ ಅನುತ್ತೀರ್ಣರಾದರೂ ಸಹ ಪದವಿಯ ಕೊನೆ ವರ್ಷಕ್ಕೆ ಬರಬಹುದು ಎಂಬ ನಿಯಮವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (VTU) ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮರು ಪರಿಷ್ಕರಿಸಿದರೆ ಒಳ್ಳೆಯದು. ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು ಧನದಾಹದಿಂದ ಪದವೀಧರರನ್ನು ಸೃಷ್ಟಿಸುವ ಕಾರ್ಖಾನೆಗಳಾಗದೇ, ವಿಷಯಾಧಾರಿತ, ಮೌಲ್ವಿಕ, ನೈಜ, ಅಧ್ಯಯನಭರಿತ ಪ್ರಶಿಕ್ಷಣಾರ್ಥಿಗಳನ್ನು ಹುಟ್ಟುಹಾಕುವಲ್ಲಿ ಕಾರ್ಯಪ್ರವೃತ್ತರಾಗಬೇಕು. ಕಷ್ಟಪಟ್ಟು ದುಡಿದು ಮಗ ಅಥವಾ ಮಗಳು ತಾಂತ್ರಿಕ ಶಿಕ್ಷಣ ಕಲಿತು, ಕುಟುಂಬ ಮತ್ತು ಸಮಾಜವನ್ನು ಸುಧಾರಿಸಲಿ ಎಂಬುದು ಪೋಷಕರ ಆಶಯವಾಗಿರುತ್ತದೆ. ಈ ನಿಟ್ಟಿನಲ್ಲಿ ಅಮಾಯಕ ವಿದ್ಯಾರ್ಥಿಗಳ ಬದುಕಿನಲ್ಲಿ ಚೆಲ್ಲಾಟವಾಡದೇ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಈ ರೀತಿಯಾದ ಅವೈಜ್ಞಾನಿಕ ನೀತಿ ನಿಯಮಗಳನ್ನು ಮರುಪರಿಶೀಲಿಸಬೇಕೆಂದು ಮನವಿ.

–ವೇಣುಬೀರಿಹುಂಡಿ, ಮೈಸೂರು



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಬರಲಿವೆ ಭಾರತಕ್ಕೆ ವಿದೇಶಿ ವಿಶ್ವವಿದ್ಯಾಲಯಗಳು



> "ಹೊಸತನವನ್ನು ಸ್ವೀಕರಿಸಿದಲ್ಲಿ ಭಾರತೀಯ ಉನ್ನತ ಶಿಕ್ಷಣವನ್ನು ಹಿಂದೆಂದಿಗಿಂತಲೂ ಆಧುನಿಕ, ಕ್ರಾಂತಿಕಾರಕ ಹಾಗೂ ಅಂತರರಾಷ್ಟ್ರೀಕರಣಗೊಳಿಸಲು ಸಾಧ್ಯವಾಗುತ್ತದೆ. ಭಾರತೀಯ ವಿವಿಗಳಲ್ಲೂ ಗುಣಾತ್ಮಕ ಸುಧಾರಣೆ, ಬದಲಾವಣೆಗಳಿಗಾಗಿ ವೇಗ, ಸಂಚಲನ ಉಂಟಾಗಬಹುದು. ಅನೇಕ ವಿದೇಶಿ ವಿವಿಗಳು ಈಗಾಗಲೇ ಭಾರತದಲ್ಲಿ ತಮ್ಮ ಕಚೇರಿಗಳನ್ನು ಹೊಂದಿದ್ದು, ಭಾರತದಲ್ಲಿ ತಮ್ಮ ಕ್ಯಾಂಪಸ್ ಸ್ಥಾಪಿಸಲು ಬೇಕಾದ ಕಾನೂನಾತ್ಮಕ ಪ್ರಕ್ರಿಯೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಸಾಧ್ಯತೆಗಳಿವೆ.

ಭಾರತದ ಹೆಚ್ಚಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಡೆಯಲು ಬಯಸುತ್ತಾರೆ. ವಿದೇಶಿ ವಿವಿಗಳಲ್ಲಿ ಉನ್ನತ ಶಿಕ್ಷಣ ಪಡೆದರೆ ಪ್ರತಿಷ್ಠಿತ ಕಂಪನಿಗಳಲ್ಲಿ, ಸಂಸ್ಥಾನಗಳಲ್ಲಿ ಉದ್ಯೋಗ, ಉತ್ತಮ ವೇತನ ಹಾಗೂ ಸಮಾಜದಲ್ಲಿ ತಮ್ಮ ಅಂತಸ್ತು (Status) ಹೆಚ್ಚುವುದು ಎಂಬ ಭಾವನೆ ವಿದ್ಯಾರ್ಥಿ ಹಾಗೂ ಮಾತಾ–ಪಿತರಲ್ಲಿದೆ. ಈ ಕಾರಣದಿಂದ ಭಾರತದಲ್ಲಿ 1,113 ಉನ್ನತ ಶಿಕ್ಷಣ ಸಂಸ್ಥೆಗಳಿದ್ದರೂ ಪ್ರತಿ ವರ್ಷ ಲಕ್ಷಾಂತರ ಸಂಖ್ಯೆಯಲ್ಲಿ ಭಾರತೀಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗುತ್ತಿದ್ದಾರೆ. 2016ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ವಿದೇಶಗಳಿಗೆ ತೆರಳಿದ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ 4.40 ಲಕ್ಷದಿಂದ 2024ರ ವೇಳೆಗೆ 1.8 ಮಿಲಿಯನ್‌ಗೆ ಏರುವ ನಿರೀಕ್ಷೆ ಇದೆ. ಈ ರೀತಿ ಭಾರೀ ಪ್ರಮಾಣದಲ್ಲಿ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಗಳು ವಿದೇಶಕ್ಕೆ ತೆರಳುತ್ತಿರುವುದರಿಂದ ದೇಶಕ್ಕೆ ವಿದೇಶಿ ವಿನಿಮಯ ಸಹಿತ ಇನ್ನಿತರ ನಷ್ಟವಾಗುತ್ತಿದೆ. ಇದನ್ನು ಗುರುತಿಸಿದ ಕೇಂದ್ರ ಸರಕಾರ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ) ನಿರ್ಣಯಿಸಿದಂತೆ ಮುಂದಿನ ದಿನಗಳಲ್ಲಿ ವಿಶ್ವದ ಪ್ರತಿಷ್ಠಿತ ವಿದೇಶಿ ವಿವಿಗಳಿಗೆ ಭಾರತದಲ್ಲಿ ತಮ್ಮ ಕ್ಯಾಂಪಸ್‌ಗಳನ್ನು ತೆರೆಯಲು ಅವಕಾಶ ಸಿಗಲಿದೆ.

ಹಿಂದಿನ ಪ್ರಯತ್ನ

ವಿದೇಶಿ ವಿವಿಗಳು ತಮ್ಮ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಅವಕಾಶ ನೀಡಲು ಹಿಂದೆಯೂ ಸರಕಾರಗಳು ಯತ್ನಿಸಿವೆ. ಈ ಉದ್ದೇಶಕ್ಕಾಗಿ 1995ರಲ್ಲಿ ಸಂಸತ್ತಿನಲ್ಲಿ ಮಂಡನೆಯಾದ ಮಸೂದೆ ಅನುಮೋದನೆಯಾಗಲಿಲ್ಲ. 2005–06ರಲ್ಲಿ ರಚಿಸಲಾದ ಕಾನೂನಿನ 2ನೇ ಪ್ರಯತ್ನವು ಕ್ಯಾಬಿನೆಟ್ ಹಂತದಲ್ಲಿ ವಿಫಲವಾಯಿತು. ಮೂರನೇ ಹಾಗೂ ಕೊನೇ ಬಾರಿ ಯುಪಿಎ 2ನೇ ಅವಧಿಯ ಸರಕಾರದಿಂದಾಯಿತು. ಆದರೆ ಸಮಾಜವಾದಿ ಪಕ್ಷ, ಎಡಪಕ್ಷಗಳು ವಿಶೇಷವಾಗಿ ಬಿಜೆಪಿಯ ವಿರೋಧದಿಂದ ವಿಫಲವಾಯಿತು. ಪ್ರಸ್ತಾವಿತ ವಿದೇಶಿ ವಿವಿ ಶಿಕ್ಷಣ ಮಸೂದೆಯು ಸಂಸತ್ತಿನಲ್ಲಿ ನಿಲ್ಲದೇ ಅಂತಿಮವಾಗಿ 2014ರಲ್ಲಿ ರದ್ದಾಯಿತು.

ವಿದೇಶಿ ವಿವಿ ಸ್ಥಾಪನೆಗೆ ಅನುಮೋದನೆ

ಜನವರಿ 5ರಂದು ವಿವಿ ಅನುದಾನ ಆಯೋಗವು (UGC) ಭಾರತದಲ್ಲಿ ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಗಳ (FHEI) ಕ್ಯಾಂಪಸ್‌ಗಳ ಸ್ಥಾಪನೆ ಮತ್ತು ಕಾರ್ಯದ ಕುರಿತು ಮಹತ್ವದ ಮಾಹಿತಿಗಳನ್ನು ಪ್ರಕಟಿಸಿ, ಸಲಹೆಗಳನ್ನು ನೀಡಲು ತಿಂಗಳಾಂತ್ಯದವರೆಗೆ ಅವಕಾಶ ನೀಡಿತು. ಸಲಹೆಗಳ ಪರಿಶೀಲನೆಯ ನಂತರ ಅಧಿಸೂಚನೆಯನ್ನು ಹೊರಡಿಸಲಾಗುವುದೆಂದು ಯುಜಿಸಿ ಅಧ್ಯಕ್ಷ ಜಗದೇಶ ಕುಮಾರ್ ತಿಳಿಸಿದ್ದಾರೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ (NEP) ಭಾರತೀಯ ಉನ್ನತ ಶಿಕ್ಷಣವನ್ನು ಅಂತರಾಷ್ಟ್ರೀಕರಿಸುವ ಮುಂದಿನ ಹೆಜ್ಜೆಯಾಗಿ ವಿದೇಶಿ ವಿವಿಗಳಿಗೆ ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು ಅನುಮತಿ ನೀಡಲಾಗುವುದು. ಸರಕಾರ ಹಾಗೂ ಯುಜಿಸಿಯ ಈ ಉಪಕ್ರಮವು ನಿಶ್ಚಿತವಾಗಿ ವಿದೇಶಿ ವಿವಿಗಳಲ್ಲಿ ಶಿಕ್ಷಣ ಪಡೆಯುವ ಹಂಬಲವಿರುವ ಭಾರತೀಯ ವಿದ್ಯಾರ್ಥಿಗಳಿಗೆ ದೇಶದೊಳಗೆ ಜಾಗತಿಕ ಮಾನದಂಡ ಹಾಗೂ ಗುಣಮಟ್ಟದ ಶಿಕ್ಷಣ ದೊರೆಯುವುದರೊಂದಿಗೆ ಭಾರತದ ವಿವಿಗಳು ಹಾಗೂ ವಿದೇಶಿ ವಿವಿಗಳ ಮಧ್ಯೆ ಆರೋಗ್ಯಕರ ಸ್ಪರ್ಧೆಗೆ ಅವಕಾಶ ನೀಡುವುದು, ಸರಕಾರವು ನೂತನ ನೀತಿಯನ್ವಯ ವಿಶ್ವದ ಪ್ರತಿಷ್ಠಿತ ವಿವಿಗಳಾದ ಆಕ್ಸ್‌ಫರ್ಡ್, ಹಾರ್ವರ್ಡ್, ಯಾಲೆಗಳಿಗೆ ಸ್ವಾಗತಿಸಲು ಸಿದ್ಧವಾಗಿದೆ.

ಎರಡು ಮಾದರಿಯ ವಿವಿಗಳಿಗೆ ಅವಕಾಶ

ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಎರಡು ಮಾದರಿಯ ವಿದೇಶಿ ವಿವಿಗಳಿಗೆ ಅವಕಾಶ ನೀಡಲಾಗುವುದು. ಜಗತ್ಪ್ರಸಿದ್ಧ ಹಾಗೂ ಪ್ರತಿಷ್ಠಿತ ಮೊದಲ ಉನ್ನತ 500 ರ್‍ಯಾಂಕ್‌ನೊಳಗಿರುವ ವಿವಿಗಳಿಗೆ ಅವಕಾಶ ನೀಡಲಾಗುತ್ತದೆ. ಅದೇ ರೀತಿ ತಮ್ಮ ಆದ್ಯತೆಯ ಕ್ಷೇತ್ರಗಳಲ್ಲಿ ನಿರ್ದಿಷ್ಟ ವಿವಿಯ ಅಥವಾ ವಿಶೇಷತೆಗಳಲ್ಲಿ ಉನ್ನತ ರ್‍ಯಾಂಕ್ ಹೊಂದಿರುವ ಸಂಸ್ಥಾನಗಳು ಕ್ಯಾಂಪಸ್ ತೆರೆಯಬಹುದು. ಆಶಯ ಪತ್ರ (LETTER OF INTENT) ಅನುಮೋದನೆಯಾದ ನಂತರ ವಿದೇಶಿ ವಿವಿಗಳು ಭಾರತೀಯ ಕ್ಯಾಂಪಸ್‌ಗಳಲ್ಲಿ ಎರಡು ವರ್ಷದೊಳಗೆ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು. ಭಾರತೀಯ ಕ್ಯಾಂಪಸ್‌ಗಳಿಗೆ ನೇಮಕಗೊಳ್ಳುವ ವಿದೇಶಿ ಪ್ರಾಧ್ಯಾಪಕರು ಅತಿಥಿ (GUEST)ಗಳಾಗಿ ಬರದೆ ಭಾರತದಲ್ಲೇ ವಾಸಿಸುವರೆಂದು ನಿರೀಕ್ಷಿಸಲಾಗಿದೆ. ಭಾರತದಲ್ಲಿ ನೀಡುವ ಶಿಕ್ಷಣದ ಗುಣಮಟ್ಟ ಮುಖ್ಯ ಕ್ಯಾಂಪಸ್‌ಗೆ ಸಮನಾಗಿರಬೇಕು ಎಂದು ಕುಮಾರ್ ಸ್ಪಷ್ಟಪಡಿಸಿದರು.

ಆರಂಭದಲ್ಲಿ ಹತ್ತು ವರ್ಷಗಳ ಅವಧಿಗೆ ಅನುಮತಿ ನೀಡಲಾಗುವುದು. ತದನಂತರ ಅಗತ್ಯ ಷರತ್ತುಗಳನ್ನು ಪೂರ್ಣಗೊಳಿಸಿದ ನಂತರ ಒಂಭತ್ತನೇ ವರ್ಷದಲ್ಲಿ ನವೀಕರಣಕ್ಕೆ ಅನುಮತಿ ನೀಡಲಾಗುವುದು. ವಿದೇಶಿ ವಿವಿಗಳಿಗೆ ತಮ್ಮದೇ ಆದ ಪ್ರವೇಶ ಪ್ರಕ್ರಿಯೆ ಮತ್ತು ಪಠ್ಯಕ್ರಮ ರೂಪಿಸುವ ಸ್ವಾತಂತ್ರ್ಯ ನೀಡಲಾಗುತ್ತಿದೆ. ಆದರೆ ಈ ವಿವಿಗಳು ಭಾರತದ ರಾಷ್ಟ್ರೀಯ ಹಿತಾಸಕ್ತಿ ಹಾಗೂ ಉನ್ನತ ಶಿಕ್ಷಣದ ಮಾನದಂಡಗಳಿಗೆ ಧಕ್ಕೆಯಾಗುವಂತಹ ಪಠ್ಯಕ್ರಮ ಮತ್ತು ಕಾರ್ಯಕ್ರಮಗಳನ್ನು ನೀಡುವ ಅವಕಾಶವಿರುವುದಿಲ್ಲ. ವಿದೇಶಿ ವಿವಿಗಳ ಕಾರ್ಯಚಟುವಟಿಕೆಗಳು ಭಾರತದ ಸಮಗ್ರತೆ, ಸಾರ್ವಭೌಮತೆ, ರಾಷ್ಟ್ರೀಯ ಭದ್ರತೆ, ವಿದೇಶಾಂಗ ಸ್ನೇಹ–ಸಂಬಂಧಗಳು, ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ, ನೈತಿಕತೆ ಹಾಗೂ ಭಾರತೀಯ ಸಂಸ್ಕೃತಿಗೆ ವಿರುದ್ಧವಾಗಿರಬಾರದು. ತುಕ್ಡೇ, ತುಕ್ಡೆ ಗ್ಯಾಂಗ್‌ಗಳಂತಹ ದೇಶ ವಿರೋಧಿ ಗುಂಪುಗಳು ಕ್ಯಾಂಪಸ್‌ನೊಳಗೆ ಬೆಳೆಯಲು ಅವಕಾಶ ನೀಡಬಾರದು. ವಿದೇಶಿ ವಿವಿಗಳ ಚಟುವಟಿಕೆಗಳು ಕೇವಲ ಉತ್ಕೃಷ್ಟ, ಉನ್ನತ ಶಿಕ್ಷಣ ನೀಡುವುದಕ್ಕಷ್ಟೇ ಸೀಮಿತವಾಗಿರಬೇಕು. ರ್‍ಯಾಗಿಂಗ್ ಹಾಗೂ ಇತರ ಅಪರಾಧಗಳಿಗೆ ಸಂಬಂಧಿಸಿದಂತೆ ಎಲ್ಲ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತವೆ.

ಪ್ರಾಧ್ಯಾಪಕರು ನೇರವಾಗಿ ಶಿಕ್ಷಣ ನೀಡುವ ಪೂರ್ಣ ಪ್ರಮಾಣದ ತರಗತಿಗಳಿಗೆ ಮಾತ್ರ ಅನುಮತಿ ನೀಡಲಾಗುತ್ತದೆ. ಆದ್ದರಿಂದ ಆನ್‌ಲೈನ್ (OnLINE) ಅಥವಾ ದೂರ ಶಿಕ್ಷಣಕ್ಕೆ ಯಾವುದೇ ಅವಕಾಶಗಳಿರುವುದಿಲ್ಲ. ಶುಲ್ಕಗಳು ಸಮಂಜಸ ಮತ್ತು ಪಾರದರ್ಶಕವಾಗಿರಬೇಕು. ಶಿಕ್ಷಣವು ಲಾಭೋದ್ದೇಶವಿಲ್ಲದ ಮಾದರಿಯಲ್ಲಿ ರೂಪಿಸಬೇಕು. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ–1999(FEMA)ರ ಅನುಗುಣವಾಗಿ ನಿಧಿಗಳನ್ನು ದೇಶದಾಚೆಗೆ ವರ್ಗಾಯಿಸಬಹುದು. ಯುಜಿಸಿ ಅನುಮತಿ ಇಲ್ಲದೇ ಯಾವುದೇ ವಿದೇಶಿ ವಿವಿಗಳಿಗೆ ಭಾರತದಲ್ಲಿ ಹೊಸ ಘಟಕದ ಸ್ಥಾಪನೆ ಅಥವಾ ವಿಸ್ತರಣೆಗೆ ಅವಕಾಶವಿರುವುದಿಲ್ಲ ಎಂದು ಕುಮಾರ್ ಸ್ಪಷ್ಟಪಡಿಸಿದರು.

ಶಿಕ್ಷಣ ಹಾಗೂ ಪದವಿ ಪ್ರಧಾನಿಸುವ ಮಾದರಿ

ಯುಜಿಸಿಯ ಈ ಕ್ರಮವು ಭಾರತೀಯ ಮತ್ತು ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಗಳ ನಡುವಿನ ಶೈಕ್ಷಣಿಕ ಸಹಯೋಗದ ದಿನಾಂಕ 02–05–2022ರ ಅಧಿಸೂಚನೆಯನ್ವಯ ಇರುತ್ತದೆ. ಭಾರತೀಯ ಮತ್ತು ವಿದೇಶಿ ವಿವಿಗಳ ನಡುವಿನ ಸಹಯೋಗಕ್ಕಾಗಿ ಮೂರು ಸಾಧ್ಯತೆಗಳನ್ನು ನೀಡಲಾಗುತ್ತಿದೆ. ಮೊದಲನೆಯದಾಗಿ ಅವಳಿ ಕಾರ್ಯಕ್ರಮ (TWINNING PROGRAMME) ದಂತೆ ಭಾರತೀಯ ಸಂಸ್ಥಾನಗಳಿಗೆ ವಿದೇಶಿ ವಿವಿಗಳೊಂದಿಗೆ ಪಾಲುದಾರಿಕೆಗೆ ಅವಕಾಶವಿರುತ್ತದೆ. ಎರಡನೆಯದಾಗಿ ಜಂಟಿ ಪದವಿ ಕಾರ್ಯಕ್ರಮ (JOINT DEGREE PROGRAMME) ದಲ್ಲಿ ಭಾರತೀಯ ಮತ್ತು ವಿದೇಶಿ ವಿವಿಗಳು ಜಂಟಿ ಪಠ್ಯಕ್ರಮ ಅಭಿವೃದ್ಧಿಪಡಿಸುತ್ತವೆ. ಆದರೆ ಒಂದೇ ಪದವಿ ನೀಡುತ್ತವೆ. ಮೂರನೆಯದಾಗಿ ದ್ವಂದ್ವ ಪದವಿ ಕಾರ್ಯಕ್ರಮ (DUAL DEGREE PROGRAMME)ದನ್ವಯ ಜಂಟಿಯಾಗಿ ಪಠ್ಯ ರಚಿಸಿ ಎರಡು ಪ್ರತ್ಯೇಕ ಪದವಿ ನೀಡಲಾಗುತ್ತದೆ.

ಭಾರತೀಯ ಕ್ಯಾಂಪಸ್‌ನಲ್ಲಿ ಅನಿರೀಕ್ಷಿತವಾಗಿ ಸಮಸ್ಯೆಗಳು ಉದ್ಭವಿಸಿದಲ್ಲಿ ಮುಚ್ಚುಗಡೆ ಪರಿಸ್ಥಿತಿ ಎದುರಾದಲ್ಲಿ ದಾಖಲಾದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗದಂತೆ, ಯುಕ್ರೇನ್‌ಗೆ ಹೋದ ವಿದ್ಯಾರ್ಥಿಗಳಿಗಾದ ಸಮಸ್ಯೆ ಎದುರಾಗದಂತೆ ರಕ್ಷಣಾತ್ಮಕ ಕ್ರಮಗಳು ಇರುತ್ತವೆ. ಯುಜಿಸಿ, ವಿದೇಶಿ ವಿವಿಗಳನ್ನು ಪರಿಶೀಲಿಸುವ, ನಿಯಂತ್ರಿಸುವ, ವ್ಯಾಖ್ಯಾನಿಸುವ ಮತ್ತು ಅಂತ್ಯಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

ಪರಿಣಾಮ ಅರಿಯದ ಪರಿಣತರು

ವಿದೇಶಿ ವಿವಿಗಳಿಗೆ ನೀಡಿರುವ ಅನುಮತಿಯು ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆಯ ಮೇಲೆ ಯಾವ ರೀತಿಯ ಪರಿಣಾಮ ಬೀರಲಿದೆ ಎಂಬ ಬಗ್ಗೆ ಶಿಕ್ಷಣ ತಜ್ಞರು ಇನ್ನೂ ಗೊಂದಲದಲ್ಲಿದ್ದಾರೆ. ಈ ನಿರ್ಣಯ ಪ್ರತಿಷ್ಠಿತ ವಿದೇಶಿ ವಿವಿಗಳನ್ನು ಆಕರ್ಷಿಸುವುದೇ ಎಂಬುದನ್ನು ಕಾದು ನೋಡಬೇಕಾಗಿದೆ. ಸರಕಾರ ಬದಲಾದಲ್ಲಿ ಯಾವ ರೀತಿಯ ಸಮಸ್ಯೆಗಳು ಎದುರಾಗಬಹುದೆಂಬ ಕುರಿತು ವಿದೇಶಿ ವಿವಿಗಳು ಇನ್ನೂ ಚಿಂತನೆ ಆರಂಭಿಸಿಲ್ಲ. ವಿವಿಗಳ ಸ್ಥಾಪನೆ ಮತ್ತು ಕ್ಯಾಂಪಸ್‌ಗಳ ನಿರ್ಮಾಣ ಒಂದು ಸಂಕೀರ್ಣ ವಿಚಾರವಾಗಿದೆ. ಪಠ್ಯಗಳ ರಚನೆ, ಸಂಶೋಧನಾ ಕಟ್ಟಡಗಳ ನಿರ್ಮಾಣ, ಪರಿಣಿತ ಪ್ರಾಧ್ಯಾಪಕರ ಎರವಲು ಪಡೆಯುವುದು ಹಾಗೂ ಸಂಸ್ಥಾನದ ಸಿಬ್ಬಂದಿಗಳ ನಿಯೋಜನೆಯಂತಹ ಎಲ್ಲವನ್ನೂ ಗಮನಿಸಬೇಕಾಗುತ್ತದೆ. ಪ್ರಸ್ತುತ ಭಾರತೀಯ ಉನ್ನತ ಶೈಕ್ಷಣಿಕ ಸಂಸ್ಥಾನಗಳು ವಾಣಿಜ್ಯೀಕರಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಇದಲ್ಲದೇ ಕಳಪೆ ಸಾಧನೆ, ಸಾಂಪ್ರದಾಯಿಕ ವ್ಯವಸ್ಥೆಗಳ ಅನುಸರಣೆ, ಔನ್ನತ್ಯ ಸಾಧಿಸುವಲ್ಲಾಗುತ್ತಿರುವ ಸಮಸ್ಯೆಗಳು, ಅತಿಯಾದ ಕೇಂದ್ರೀಕೃತ ವ್ಯವಸ್ಥೆ, ವಿಶ್ವಾಸಾರ್ಹತೆ, ವೃತ್ತಿಪರತೆಯ ಕೊರತೆ, ರಾಜಕೀಯ ಪ್ರವೇಶ ಇವೇ ಮೊದಲಾದ ಅನೇಕ ಸಮಸ್ಯೆಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿವೆ.

ಸಿಂಗಾಪುರ, ಮಲೇಷ್ಯಾ, ವಿಯೆಟ್ನಾಂನಂತಹ ಕೆಲವು ದೇಶಗಳು ಕಳೆದ ಎರಡು ದಶಕಗಳಿಂದ ವಿದೇಶಿ ವಿವಿಗಳನ್ನು ತಮ್ಮ ದೇಶಕ್ಕೆ ತರುವಲ್ಲಿ ಸಫಲರಾಗಿಲ್ಲ. ಪ್ರಸ್ತುತ ಯುಜಿಸಿಯ ಉನ್ನತ 500ಕ್ಕಿಂತ 100 ಉನ್ನತ ವಿವಿಗಳಿಗೆ ಸೀಮಿತವಾಗಿದ್ದರೆ ಉತ್ತಮವಾಗಿರುತ್ತಿತ್ತು ಎಂಬ ಭಾವನೆ ಇದೆ. ಏಕೆಂದರೆ ಎರಡನೇ ದರ್ಜೆಯ ವಿವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾರತಕ್ಕೆ ಬರಬಹುದೆಂಬ ನಿರೀಕ್ಷೆ ಇದೆ. ಈ ರೀತಿಯ 2ನೇ ದರ್ಜೆಯ ವಿವಿಗಿಂತ ದೇಶೀಯ ಉನ್ನತ ವಿವಿಗಳಿಗೆ ಪ್ರೋತ್ಸಾಹ ನೀಡಬಹುದೆಂಬ ವಾದವೂ ಇದೆ. ಯಾವುದೇ ವಿದೇಶಿ ವಿವಿಗೆ ಸಂಬಂಧಿಸಿದಂತೆ ಯುಜಿಸಿಯು ನಿಯಮ ರೂಪಿಸಿ ಸರಕಾರ ಅಧಿಸೂಚನೆ ಹೊರಡಿಸಿದರೆ ಜಾರಿಗೆ ಬರುತ್ತದೆ. ತಜ್ಞರು ಇದು ಸರಿಯಲ್ಲ, ಬದಲಾಗಿ ಸಂಸತ್ ಕಾಯ್ದೆ ಮೂಲಕ ಜಾರಿಗೆ ಬರಬೇಕೆನ್ನುತ್ತಾರೆ. ನಿಯಮಗಳ ಮೂಲಕ ಕೈಗೊಳ್ಳುವ ನಿರ್ಧಾರಗಳಲ್ಲಿ ದುರ್ಬಳಕೆಯ ಅಪಾಯವಿದೆ. ನಿಯಮಗಳನ್ನು ಯಾವುದೇ ಸಂದರ್ಭದಲ್ಲಿ ಬದಲಾಯಿಸುವ ಅವಕಾಶವಿದೆ. ಆದರೆ ಕಾಯ್ದೆ ಮೂಲಕ ಜಾರಿಗೆ ಬರುವಂತಿದ್ದರೆ ಬದಲಾವಣೆಗೆ ಕೂಡ ಸಂಸತ್ತಿನಲ್ಲಿ ಚರ್ಚಿಸಿ ಅನುಮೋದನೆ ಪಡೆಯಬೇಕಾಗುತ್ತದೆ. ವಿದೇಶಿ ವಿವಿಗಳಲ್ಲಿ ಭಾರತೀಯ ಭಾಷೆಗಳಿಗೆ ಅವಕಾಶವಿರುವುದಿಲ್ಲ ಎಂಬ ಆಕ್ಷೇಪಗಳು ಇವೆ. ಸಮಸ್ಯೆಗಳು, ಆಕ್ಷೇಪಗಳು, ಕೊರತೆಗಳು ಎದುರಾದಲ್ಲಿ ಅವುಗಳನ್ನು ಕಾಲ ಕಾಲಕ್ಕೆ ಸರಿಪಡಿಸುವ, ಪರಿಹರಿಸುವ ಅವಕಾಶಗಳಿವೆ. ಆದ್ದರಿಂದ ಉನ್ನತ ಶಿಕ್ಷಣ ಕ್ಷೇತ್ರವು ಹೊಸ ಪ್ರಯೋಗಕ್ಕೆ ತೆರೆದುಕೊಳ್ಳಲು ಸಿದ್ಧವಾಗಬೇಕಾಗಿದೆ.

ಈ ರೀತಿಯ ಹೊಸತನವನ್ನು ಸ್ವೀಕರಿಸಿದಲ್ಲಿ ಭಾರತೀಯ ಉನ್ನತ ಶಿಕ್ಷಣವನ್ನು ಹಿಂದೆಂದಿಗಿಂತಲೂ ಆಧುನಿಕ, ಕ್ರಾಂತಿಕಾರಕ ಹಾಗೂ ಅಂತರರಾಷ್ಟ್ರೀಕರಣಗೊಳಿಸಲು ಸಾಧ್ಯವಾಗುತ್ತದೆ. ಭಾರತೀಯ ವಿವಿಗಳಲ್ಲೂ ಗುಣಾತ್ಮಕ ಸುಧಾರಣೆ, ಬದಲಾವಣೆಗಳಿಗಾಗಿ ವೇಗ, ಸಂಚಲನ ಉಂಟಾಗಬಹುದು. ಅನೇಕ ವಿದೇಶಿ ವಿವಿಗಳು ಈಗಾಗಲೇ ಭಾರತದಲ್ಲಿ ತಮ್ಮ ಕಚೇರಿಗಳನ್ನು ಹೊಂದಿದ್ದು, ಭಾರತದಲ್ಲಿ ತಮ್ಮ ಕ್ಯಾಂಪಸ್ ಸ್ಥಾಪಿಸಲು ಬೇಕಾದ ಕಾನೂನಾತ್ಮಕ ಪ್ರಕ್ರಿಯೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಸಾಧ್ಯತೆಗಳಿವೆ. **ಆನೋ ಭದ್ರಾಃ ಕೃತವೋ ಯಂತು ವಿಶ್ವತಃ** । ಅರ್ಥಾತ್ ವಿಶ್ವದೆಲ್ಲೆಡೆಯಿಂದ ಜ್ಞಾನದ ಬೆಳಕು ಹರಿದು ಬರಲಿ.

ಗುಜರಾತ್ ಕರಕುಶಲ ಉತ್ಸವಕ್ಕೆ ಚಾಲನೆ

ಮೈಸೂರು, ಫೆ.24(ಜಿಎ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ಆವರಣದಲ್ಲಿ ಆಯೋಜಿಸಿರುವ ಗುಜರಾತ್ ಕರಕುಶಲ ಉತ್ಸವವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಮತ್ತು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಶುಕ್ರವಾರ ಸಂಜೆ ಉದ್ಘಾಟಿಸಿದರು.

ತಯಾರಕರಿಂದಲೇ ನೇರವಾಗಿ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಸಾಮಗ್ರಿಗಳನ್ನು ಒದಗಿಸಬೇಕೆಂಬ ಗುಜರಾತ್ ಸರ್ಕಾರದ ಆಶಯದಂತೆ ಗುಜರಾತಿನ ಹಸ್ತಕಲಾ ಸೇತು ಯೋಜನೆಯಡಿ ಅಹಮದಾಬಾದ್‌ನ ಎಂಟರ್‌ಪ್ರಿನರ್‌ಶಿಪ್ ಡೆವಲಪ್‌ಮೆಂಟ್ ಇನ್ಸಿಟ್ಯೂಟ್ ಆಫ್ ಇಂಡಿಯಾ, ಗುಜರಾತ್ ಸರ್ಕಾರ ಅಧೀನದ ಇಂಡಸ್ಟ್ರಿಯಲ್ ಎಕ್ಸ್‌ಟೆನ್ಸನ್ ಕಾಟೇಜ್, ಕಾಟೇಜ್ ಅಂಡ್ ರೂರಲ್ ಇಂಡಸ್ಟ್ರಿಸ್ ಸಂಯುಕ್ತಾಶಯದಲ್ಲಿ ಆಯೋಜಿಸಿರುವ ಈ ಮೇಳವು ಇಂದಿನಿಂದ ಹತ್ತು ದಿನಗಳ(ಫೆ.24 ರಿಂದ ಮಾ.5ರವರೆಗೆ) ಕಾಲ ನಡೆಯಲಿದೆ.

ಮೈಸೂರು ಹಾಗೂ ಸುತ್ತಮುತ್ತಲ ಗ್ರಾಹಕರು ಗುಜರಾತ್ ಸಂಸ್ಕೃತಿಯ ಉಡುಗೆ–ತೊಡುಗೆ,ಅಲಂಕಾರಿಕ ವಸ್ತುಗಳನ್ನು ಉತ್ಪಾದಕರಿಂದ ನೇರವಾಗಿ ಖರೀದಿಸಲು ಅನುವು ಮಾಡಿಕೊಡಲಾಗಿದೆ. ಮೇಳದಲ್ಲಿ ಗುಜರಾತ್ ರಾಜ್ಯದ ವಿವಿಧ ಭಾಗಗಳ ಪ್ರಸಿದ್ಧ ಹಾಗೂ ಕ್ರಿಯಾಶೀಲವಾಗಿರುವ 60ಕ್ಕೂ ಹೆಚ್ಚು ಕುಶಲ ಕರ್ಮಿಗಳು ಮೇಳದಲ್ಲಿ ಭಾಗವಹಿಸಿ, ತಮ್ಮ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ.



ಮೇಳದಲ್ಲಿ ಪಟೋಲ ಸೀರೆ, ಬಾಂದಿನಿ ಸೀರೆ, ಕಸೂತಿ ಮಾಡಿದ ಬೆಡ್‌ಶೀಟ್, ಟವಲ್, ಕುಶನ್ ಕವರ್, ಪರಿಸರ ಸ್ನೇಹಿ ಆಭರಣ, ಡ್ರೆಸ್ ಮೆಟೀರಿಯಲ್, ಮಣ್ಣಿನಿಂದ ಮಾಡಿದ ವಸ್ತುಗಳು, ಮೆಟಲ್‌ವರ್ಕ್, ಕುರ್ತಿ, ಚನಿಯಾ ಚೋಲಿ ಮೊದಲಾದ ಸಾಮಗ್ರಿಗಳು ಆಕರ್ಷಣೀಯ ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳು ಗುಣಮಟ್ಟ ಹಾಗೂ ಕಡಿಮೆ ಬೆಲೆಗೆ ದೊರೆಯಲಿವೆ.

ಉತ್ಸವಕ್ಕೆ ಚಾಲನೆ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಮಾತನಾಡಿ, ಮೈಸೂರು ಕಲೆ ಮತ್ತು ಸಂಸ್ಕೃತಿಯ ನಗರವಾಗಿದ್ದು, ಈ ರೀತಿ ಮೇಳಗಳಿಂದ ಮಾತ್ರ ನಮ್ಮ ಕಲೆ, ಸಂಸ್ಕೃತಿ ಉಳಿಯಲು ಸಾಧ್ಯ. ಇಲ್ಲಿ 60 ಮಳಿಗೆಗಳಲ್ಲಿ ಗುಜರಾತಿನ ಕುಶಲಕರ್ಮಿಗಳು, ತಮ್ಮ ರಾಜ್ಯದ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ. ಮೈಸೂರಿಗರು ಇದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಜಿಪಂ ಸಿಇಓ ಗಾಯತ್ರಿ ಮಾತನಾಡಿ, ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಪ್ರತಿ ಬಾರಿಯೂ ಆಯೋಜಿಸುವ ಮೇಳವು ಬಹಳ ವಿಶೇಷದಿಂದ ಕೂಡಿರುತ್ತದೆ. ಹಾಗೇ ಈ ಬಾರಿ ಗುಜರಾತಿನ ಸಂಸ್ಕೃತಿಯ ಉಡುಗೆ–ತೊಡುಗೆ ಅಲಂಕಾರಿಕ ವಸ್ತುಗಳನ್ನು ಒಳಗೊಂಡ ಉತ್ಸವವನ್ನು ಆಯೋಜಿಸಿದ್ದಾರೆ. ಇದು ವಿಶಿಷ್ಟವಾಗಿದ್ದು, ಜನತೆ ಇದರ ಪ್ರಯೋಜನ ಪಡೆಯುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ್, ಜೆಎಸ್‌ಎಸ್ ಅರ್ಬನ್ ಹಾತ್ ಯೋಜನಾಧಿಕಾರಿ ಶಿವನಂಜಸ್ವಾಮಿ ಜಂಟಿ ನಿರ್ದೇಶಕ ಡಾ.ಹೆಚ್.ಆರ್.ಮಹದೇವಸ್ವಾಮಿ ಉಪಸ್ಥಿತರಿದ್ದರು.

ನಾಳೆ ಸಂತ ಸೇವಾ ಲಾಲ್ ಜಯಂತಿ

ಮೈಸೂರು, ಫೆ.24– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.26 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಸಂತ ಸೇವಾಲಾಲ್ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸುವರು. ಬಂಜಾರ ಗುರು ಪೀಠಾಧಿಪತಿಯಾದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದ್ದು, ಅಧ್ಯಕ್ಷತೆಯನ್ನು ಶಾಸಕ ಎಲ್.ನಾಗೇಂದ್ರ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು.

ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಸಾರಾ ಮಹೇಶ್, ಜಿ.ಟಿ. ದೇವೇಗೌಡ, ಮಹದೇವ್, ಹರ್ಷವರ್ಧನ್, ಅಶ್ವಿನ್‌ಕುಮಾರ್, ಮಂಜುನಾಥ್, ರಾಮದಾಸ್, ಡಾ. ಯತೀಂದ್ರ, ಅನಿಲ್ ಕುಮಾರ್.ಸಿ ಹಾಗೂ ವಿಧಾನ ಪರಿಷತ್ತಿನ ಶಾಸಕರು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರಲ್ಲಿ ಮೂರು ದಿನಗಳ

ಫ್ಯೂಷನ್ ಮ್ಯೂಸಿಕ್ ಫೆಸ್ಟಿವಲ್‌ಗೆ ಚಾಲನೆ

■ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಉದ್ಘಾಟನೆ

■ ಮೊದಲ ದಿನ ಪ್ರವೀಣ್ ಡಿ.ರಾವ್ ತಂಡದ 'ಚಕ್ರಫೋನಿಕ್ಸ್ ವರ್ಲ್ಡ್ ಮ್ಯೂಸಿಕ್ ಬ್ಯಾಂಡ್' ರಸದೌತಣ





ಮೈಸೂರ್ ಮ್ಯೂಸಿಕ್ ಅಸೋಸಿಯೇಷನ್ ವತಿಯಿಂದ ಸಂಸ್ಥಾಪಕರಾದ ಸಿಸ್ಟರ್ ಜಾನ್ ಡಿ.ಬ್ರಿಟ್ಟೋ ಸಂಸ್ಮರಣಾರ್ಥ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿರುವ ಮೂರು ದಿನಗಳ 'ಫ್ಯೂಷನ್ ಮ್ಯೂಸಿಕ್ ಫೆಸ್ಟಿವಲ್'ಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಶುಕ್ರವಾರ ಚಾಲನೆ ನೀಡಿದರು. ಅಸೋಸಿಯೇಷನ್‌ನ ಖಜಾಂಚಿ ಎಬ್ಬಿ ಈಪನ್, ಕಾರ್ಯದರ್ಶಿ ಎಂ.ಜಿ.ನರಸಿಂಹ ಹಾಗೂ ಅಧ್ಯಕ್ಷ ಎಂ.ಲಕ್ಷ್ಮಿನಾರಾಯಣ್ ಚಿತ್ರದಲ್ಲಿದ್ದಾರೆ. 'ಚಕ್ರಫೋನಿಕ್ಸ್ ವರ್ಲ್ಡ್ ಮ್ಯೂಸಿಕ್ ಬ್ಯಾಂಡ್' ಮೂಲಕ ಸಂಗೀತ ರಸದೌತಣ ನೀಡಿದ ಪ್ರವೀಣ್ ಡಿ.ರಾವ್ ತಂಡವನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ.24(ಎಸ್‌ಬಿಡಿ)– ಮೈಸೂರ್ ಮ್ಯೂಸಿಕ್ ಅಸೊಸಿಯೇಷನ್ ವತಿಯಿಂದ ಅದರ ಸಂಸ್ಥಾಪಕರಾದ ಸಿಸ್ಟರ್ ಜಾನ್ ಡಿ ಬ್ರಿಟ್ಟೋ ಸ್ಮರಣಾರ್ಥ ಆಯೋಜಿಸಿರುವ ಮೂರು ದಿನಗಳ 'ಫ್ಯೂಷನ್ ಮ್ಯೂಸಿಕ್ ಫೆಸ್ಟಿವಲ್'ಗೆ ಶುಕ್ರವಾರ ಚಾಲನೆ ದೊರೆಯಿತು.

ನಗರದ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿರುವ ಸಂಗೀತ ಉತ್ಸವದ ಮೊದಲ ದಿನ ಸಂಗೀತ ಸಾಧಕ ಪ್ರವೀಣ್ ಡಿ.ರಾವ್ ಹಾಗೂ ತಂಡ ಪ್ರಸ್ತುತಪಡಿಸಿದ 'ಚಕ್ರಫೋನಿಕ್ಸ್ ವರ್ಲ್ಡ್ ಮ್ಯೂಸಿಕ್ ಬ್ಯಾಂಡ್', ಸಂಗೀತ ರಸದೌತಣ ನೀಡಿತು.

ಪ್ರಸಿದ್ಧ ಸಂಗೀತ ಕಲಾವಿದರಾದ ಪ್ರವೀಣ್ ಡಿ.ರಾವ್, ವಾರಿಜಾಶ್ರೀ, ಪ್ರಮಥ್ ಕಿರಣ್ ಹಾಗೂ ವಿವೇಕ್ ಸಂತೋಷ್ ನೆರೆದಿದ್ದವರಿಗೆ ವಿಶಿಷ್ಟ ಸಂಗೀತ ರಸಾಯನ ಉಣಬಡಿಸಿದರು. ಶಾಸ್ತ್ರೀಯ ಹಾಗೂ ಪಾಶ್ಚಾತ್ಯ ಸಂಗೀತ ವಾದ್ಯಗಳ ಸಮ್ಮಿಳಿತದ ಮೂಲಕ ಎಲ್ಲರನ್ನೂ ಮೂಕ ವಿಸ್ಮಿತರನ್ನಾಗಿಸಿದರು. ಗ್ರಾಸ್‌ಹೋಪರ್, ಓಷನ್, ಇನ್‌ಸೈಟ್ ಇನ್ನಿತರ ಕೃತಿಗಳನ್ನು ನಿರಂತರವಾಗಿ ಪ್ರಸ್ತುತಪಡಿಸಿ ಹೊಸ ಸಂಗೀತ ಲೋಕವನ್ನೇ ಸೃಷ್ಟಿಸಿದ್ದರು. ಕೊಳಲು ವಾದನದ ಜೊತೆಗೆ ಸುಶ್ರಾವ್ಯ ಗಾಯನದ ಮೂಲಕ ವಾರಿಜಾಶ್ರೀ ತಮ್ಮ ಮೇರು ಪ್ರತಿಭೆ ಪ್ರದರ್ಶಿಸಿದರು. ದೇಸಿ ಹಾಗೂ ಪಾಶ್ಚಾತ್ಯ ಪಕ್ಕವಾದ್ಯಗಳೊಂದಿಗೆ ಕೊಳಲು ನುಡಿಸಿಕೊಂಡು 'ಜಗದೋದ್ಧಾರನ ಮಗನೆಂದು ತಿಳಿಯುತ, ಸುಗುಣಾಂತ ರಂಗನ ಆಡಿಸಿದಳೆಶೋಧೆ...' ಹಾಡು ಮನಮೋಹಕವಾಗಿತ್ತು. ಹೀಗೆ ಪ್ರಸ್ತುತಗೊಂಡ ವಿಭಿನ್ನ ಕೃತಿಗಳನ್ನು ಸಂಗೀತ ಪ್ರಿಯರು ಆಸ್ವಾದಿಸಿ, ಚಪ್ಪಾಳೆ ಮೂಲಕ ಕಲಾವಿದರನ್ನು ಅಭಿನಂದಿಸಿದರು.

ಇದಕ್ಕೂ ಮುನ್ನ ಮೂರು ದಿನಗಳ ಫ್ಯೂಷನ್ ಸಂಗೀತ ಉತ್ಸವವನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಿದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು ಮಾತನಾಡಿ, ಸಂಗೀತದ ಬಗ್ಗೆ ಯೋಚಿಸಿದಾಗಲೆಲ್ಲಾ ಸಿಸ್ಟರ್ ಜಾನ್ ಅವರು ನೆನಪಾಗುತ್ತಾರೆ. ಅವರು ಅತ್ಯದ್ಭುತ ವ್ಯಕ್ತಿತ್ವ ಹೊಂದಿದ್ದ ಮೇರು ಕಲಾವಿದೆಯಾಗಿದ್ದರು. ಅವರನ್ನು ಮೈಸೂರಿನ ಪಿಯಾನೋ ಗುರು ಎನ್ನಬಹುದು. ಅಲ್ಲದೆ ಮೈಸೂರಿನ ಸಂಗೀತ ರಸಿಕರಿಗೆ ಪಾಶ್ಚಿಮಾತ್ಯ ಸಂಗೀತದ ರಸದೌತಣವನ್ನು ಬಡಿಸಿದ್ದಾರೆ. ಸಿಸ್ಟರ್ ಜಾನ್ ಸಂಸ್ಮರಣಾರ್ಥವಾಗಿ ಆಯೋಜಿಸಿರುವ ವಿಶೇಷ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿದ್ದಕ್ಕೆ ತುಂಬಾ ಸಂತೋಷವಾಗಿದೆ. 'ಸಂಗೀತ ಪ್ರೀತಿಯ ಆಹಾರ, ನನಗೆ ಅದನ್ನು ಹೆಚ್ಚು ನೀಡಿ' ಎಂಬ ವಿಲಿಯಂ ಶೇಕ್ಸ್‌ಪಿಯರ್ ಮಾತಿನಂತೆ ಮೂರು ದಿನಗಳ ಕಾಲ ಇಲ್ಲಿ ಸಂಗೀತದ ಔತಣವನ್ನು ಸವಿಯಬಹುದು ಎಂದು ಹೇಳಿದರು. ನಾನು ವರದಿಗಾರನಾಗಿದ್ದಾಗ ಬಾಂಬೆಯಲ್ಲಿ ಓರ್ವ ಯುವ ಸಂಗೀತಗಾರನನ್ನು ಸಂದರ್ಶನ ಮಾಡಲು ಹಿರಿಯ ವರದಿಗಾರರು ಸೂಚಿಸಿದ್ದರು. ಸಂದರ್ಶನವನ್ನು ಹೇಗೆ ಆರಂಭಿಸುವುದೆಂದು ತಿಳಿದಿರಲಿಲ್ಲ. ಆದರೂ ನಾನು ಭಾರತೀಯ ಸಂಗೀತ ಹಾಗೂ ಪಾಶ್ಚಿಮಾತ್ಯ ಸಂಗೀತದ ನಡುವಿನ ವ್ಯತ್ಯಾಸವೇನೆಂದು ಕೇಳಿದೆ. ಅದಕ್ಕೆ ಅವರು ಪಾಶ್ಚಿಮಾತ್ಯ ಸಂಗೀತದಲ್ಲಿ ರಿದಂ ಹಾಗೂ ಬೇಸ್ ಪ್ರಧಾನವಾಗಿರುತ್ತದೆ. ಭಾರತೀಯ ಸಂಗೀತದಲ್ಲಿ ಮಾಧುರ್ಯವಿದೆ ಎಂದರು. ಮುಂದುವರೆದು ನಾನು ಸಿನಿಮಾ ಸಂಗೀತ ಇನ್ನೂ ಮಾಧುರ್ಯವಾಗಿದೆಯಲ್ಲಾ, ಈ ಬಗ್ಗೆ ಉಲ್ಲೇಖಿಸುವಿರಾ ಎಂದು ಪ್ರಶ್ನಿಸಿದೆ. ಆಗ ಅವರು ಸಂಗೀತದ ಬಗ್ಗೆ ಅಧ್ಯಯನ ಮಾಡಿದರೆ ಎಲ್ಲವೂ ತಿಳಿಯುತ್ತದೆ ಎಂದು ನಯವಾಗಿ ಉತ್ತರಿಸಿದ್ದರು ಎಂದು ಸ್ಮರಿಸಿಕೊಂಡ ಕೆ.ಬಿ.ಗಣಪತಿ ಅವರು, ಸಂಗೀತಕ್ಕೆ ಯಾವುದೇ ಗಡಿಯಿಲ್ಲ. ಅದು ಎಲ್ಲೆ ಮೀರಿ ಪಸರಿಸುತ್ತದೆ. ಎಲ್ಲಾ ಸಂಗೀತವೂ ಅತ್ಯಮೂಲ್ಯ, ಆಸ್ವಾದಿಸಿ ಸಂಭ್ರಮಿಸೋಣ ಎಂದರು.

ಇನ್ನೆರಡು ದಿನ: ಶನಿವಾರ ಸಂಜೆ 6.30ಕ್ಕೆ ಮ್ಯಾಂಡೋಲಿನ್ ಯು.ರಾಜೇಶ್ ಮತ್ತು ತಂಡದ ಕಲಾವಿದರು 'ಧ್ರುವ– ದಿ ಬ್ಯಾಂಡ್' ಪ್ರಸ್ತುಪಡಿಸಲಿದ್ದಾರೆ. ಭಾನುವಾರ ಸಂಜೆ 6.30ಕ್ಕೆ ಡಾ.ಮೈಸೂರು ಎಂ.ಮಂಜುನಾಥ್ ಮತ್ತು ತಂಡದಿಂದ 'ಜಂಕ್ಷನ್ ಇನ್ ಕನ್ಸರ್ಟ್' ಸಂಗೀತ ಕಾರ್ಯಕ್ರಮವಿದೆ.

ಇಂದಿನಿಂದ ಪಡುವಾರಹಳ್ಳಿ ಜೋಡಿ ಮಾರಮ್ಮ ಜಾತ್ರೆ

ಮೈಸೂರು, ಫೆ.24– ಮೈಸೂರಿನ ಪಡುವಾರಹಳ್ಳಿ(ವಿನಾಯಕನಗರ) ಜೋಡಿ ಮಾರಮ್ಮ ಜಾತ್ರಾ ಮಹೋತ್ಸವ ಶನಿವಾರ(ಫೆ25)ದಿಂದ ಆರಂಭವಾಗಲಿದೆ.



ಅಂದು ಮಧ್ಯರಾತ್ರಿ 2ಕ್ಕೆ ಮಾರಿಗುಡಿ ದೇವಸ್ಥಾನದ ಎದುರು ಪೂಜಾ ಕೈಂಕರ್ಯ ನೆರವೇರಲಿದೆ. ಫೆ.26ರಂದು ಮಧ್ಯಾಹ್ನ 3ಕ್ಕೆ 25 ಜೊತೆ ನಾಡಕುಸ್ತಿ ಪಂದ್ಯಾವಳಿ, ರಾತ್ರಿ 9ರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮಧ್ಯರಾತ್ರಿ 2ರಿಂದ ಬೆಳಗಿನ ಜಾವದವರೆಗೆ ದೇವಸ್ಥಾನದ ಆವರಣದಿಂದ ತಂಪಿನ ಮೆರವಣಿಗೆ(ತಂಬಿಟ್ಟು ಆರತಿ) ಜರುಗಲಿದ್ದು, ಮಹಿಳೆಯರು ಹಾಗೂ ಹೆಣ್ಣು ಮಕ್ಕಳು ತಂಬಿಟ್ಟಿನಾರತಿ ಹೊತ್ತು ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ದೇವಸ್ಥಾನ ತಲುಪಿ ಜೋಡಿ ಮಾರಮ್ಮನಿಗೆ ನಮಿಸಲಿದ್ದಾರೆ. ಫೆ.27ರಂದು ಮಧ್ಯಾಹ್ನ 3ರಿಂದ ಸಂಜೆ 7ರವರೆಗೆ ಹರಕೆ ಕಟ್ಟಿಕೊಂಡ ಸಾವಿರಾರು ಜನರ ಬಾಯಿ ಬೀಗದ ಮೆರವಣಿಗೆ, ಅಂದು ರಾತ್ರಿ 9ಕ್ಕೆ ಮಾರುಗುಡಿ ಆವರಣದಲ್ಲಿ 'ಕೃಷ್ಣಲೀಲೆ ಅಥವಾ ರುಕ್ಮಿಣಿ ಸ್ವಯಂವರ' ಪೌರಾಣಿಕ ನಾಟಕ ನಡೆಯಲಿದೆ ಎಂದು ಪಡುವಾರಹಳ್ಳಿ (ವಿನಾಯಕನಗರ) ಗ್ರಾಮಾಭ್ಯುದಯ ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ


ಮೈಸೂರು,ಫೆ.24– ವಿ.ವಿ ಮೊಹಲ್ಲಾ ವಿಭಾಗದ ಗೋಕುಲ್‌ದಾಸ್ ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕೆಲಸದ ನಿಮಿತ್ತ ಫೆ. 26 ರ ಭಾನುವಾರದಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಜಯಪುರ ಗ್ರಾಮ ಪಂಚಾಯಿತಿ, ಮಾರ್ಬಳ್ಳಿ ಗ್ರಾಮ ಪಂಚಾಯಿತಿ, ಗೋಪಾಲಪುರ ಗ್ರಾಮ ಪಂಚಾಯಿತಿ, ಉದ್ಬೂರು ಗ್ರಾಮ ಪಂಚಾಯಿತಿ, ಧನಗಳ್ಳಿ ಗ್ರಾಮ ಪಂಚಾಯಿತಿ, ಹಾರೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳು, ಹೂಟಗಳ್ಳಿ ಮತ್ತು ಬೆಳವಾಡಿ ಕೈಗಾರಿಕಾ ಪ್ರದೇಶ, ಲಿಂಗದೇವರ ಕೊಪ್ಪಲು, ಜಾಕಿ ಫ್ಯಾಕ್ಟರಿ, ಪಿರಮಿಡ್ ಟಿಂಬರ್, ಆರ್.ಕೆ.ಬಿ. ಬ್ರಿಕ್ಸ್, ಕೆಆರ್‌ಎಸ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜಗತ್ತಲ್ಲಿ ಅನೇಕ ಮತಗಳಿದ್ದರೂ ಧರ್ಮ ಒಂದೇ

ಮೈಸೂರು, ಫೆ.24(ಜಿಎ)–ಜಗತ್ತಿನಲ್ಲಿ ಅನೇಕ ಮತಗಳಿವೆ. ಆದರೆ, ಧರ್ಮ ಒಂದೇ ಎಂದು ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಶ್ರೀರಾಮಕೃಷ್ಣ ಪರಮಹಂಸರ 188ನೇ ಜನ್ಮದಿನೋತ್ಸವದ ಅಂಗವಾಗಿ ನಗರದ ಯಾದವಗಿರಿಯ ರಾಮಕೃಷ್ಣ ಆಶ್ರಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀರಾಮಕೃಷ್ಣರ ಮತ್ತು ಬಸವೇಶ್ವರರ ದೃಷ್ಟಿಕೋನದಲ್ಲಿ 'ಧರ್ಮ ಮತು ಆಧ್ಯಾತ್ಮ' ಕುರಿತು ಅವರು ಪ್ರವಚನ ನೀಡಿದರು. ದಿವ್ಯತ್ರಯರ ಸಂಕಲ್ಪದಂತೆ ಈ ದಿನ ವಿಶೇಷವಾದ ಅನುಭಾವ ಗೋಷ್ಠಿ ನಡೆಯುತ್ತಿದ್ದು, ರಾಮಕೃಷ್ಣ ಪರಮಹಂಸರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಆಧ್ಯಾತ್ಮದ ನೆಲೆಯನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಅನೇಕ ಸಾಧಕರು, ಆಧ್ಯಾತ್ಮ ಜೀವಿಗಳಿಗೆ ಅದ್ಭುತವಾಗಿ ಮಾರ್ಗದರ್ಶನ ನೀಡಿರುವ ಸ್ಥಳದಲ್ಲಿ ನಾವು ಸೇರಿದ್ದೇವೆ ಎಂದರು.

ಜಾತಿ, ಮತ ಮತ್ತು ಧರ್ಮ ನಮ್ಮನ್ನು ಸಂಪೂರ್ಣವಾಗಿ ಗೊಂದಲಕ್ಕೀಡು ಮಾಡಿರುವ ಶಬ್ದಗಳಾಗಿವೆ. ನಾವು ಜಾತ್ಯಾತೀತ



ಎಂಬ ಮಾತುಗಳನ್ನು ಹೇಳುವಾಗ ಅರ್ಥ ರಹಿತವಾಗಿ ಹೇಳುತ್ತೇವೆ. ಭಗವಂತ ಪಶು, ಪಕ್ಷಿ, ಮನುಷ್ಯ ಜಾತಿಯನ್ನು ಸೃಷ್ಟಿಸಿದ್ದಾನೆ. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಮನುಷ್ಯ ಮನುಷ್ಯನೇ ಆಗಿರುತ್ತಾನೆ. ಮನುಷ್ಯ ಮನುಷ್ಯತ್ವವನ್ನು ಮರೆತು ಮೃಗದಂತೆ ನಡೆದುಕೊಂಡಾಗ ಅವನು ಭಗವಂತನ ಜಾತಿಯಿಂದ ಹೊರ ಬಂದು ತಾನೆ ಎಂದು ತಿಳಿಸಿದರು.

ಮತವನ್ನು ವಾಸ್ತವವಾಗಿ ಮನುಷ್ಯರು ತಮ್ಮ ತಮ್ಮ ಆಲೋಚನೆಗೆ ತಕ್ಕಂತೆ ರೂಪಿಸಿಕೊಂಡಿದ್ದಾರೆ ಎಂಬುದನ್ನು ರಾಮಕೃಷ್ಣ ಪರಮಹಂಸರು ಬಹಳ ಸರಳವಾಗಿ ಹೇಳಿದ್ದಾರೆ. ಮತ ಎಂದರೆ ತಾನು ಕಂಡುಕೊಂಡ ಮಾರ್ಗ, ನನ್ನ ಚಿಂತನೆ–ಆಲೋಚನೆ ಎಂಬುದಷ್ಟೇ. ಅದರಂತೆ ಯೇಸು ತನ್ನ ಆಲೋಚನೆಯನ್ನು ಕಂಡುಕೊಂಡು ಅವರ ಸುತ್ತಲಿನ ಜನತೆಗೆ ತಿಳಿಸಿದ. ಅದನ್ನು ಅಲ್ಲಿನ ಜನತೆ ಒಪ್ಪಿಕೊಂಡು ಅವನ ಮತವನ್ನು ಹಿಂಬಾಲಿಸಿದರು.

ಹಾಗೇ ಬುದ್ಧ ತನ್ನ ಬೋಧನೆಯನ್ನು ಮಾಡಿದ ಅವನ ಮಾತಿನಲ್ಲಿ ಸತ್ಯವಿದೆ ಎಂದು ಸಹಸ್ರಾರು ಮಂದಿ ಬುದ್ಧನ ಅನುಯಾಯಿಗಳಾದರು. ಅದರಿಂದ ಬೌದ್ಧ ಮತವಾಯಿತು. ಅದರಂತೆ ಜೈನ, ಇಸ್ಲಾಂ ಮತಗಳು ಸೃಷ್ಟಿಯಾಯಿತು. ಮತ ಎಂಬುದು ಒಂದು ಚೌಕಟ್ಟಿನಲ್ಲಿ ಒಳಗೊಂಡ ವ್ಯವಸ್ಥೆಯಾಗಿ ಉಳಿದುಕೊಂಡಿತು. ಆದರೆ, ಭಾರತೀಯ ಸನಾತನ ಪರಂಪರೆಯಲ್ಲಿ ದಾರ್ಶನಿಕರು ಎಂದು ಗುರುತಿಸಿದರು. ದಾರ್ಶನಿಕರು ಎಂದರೆ, ಭಗವಂತನ ಸೃಷ್ಟಿಯ ಅಂತರಂಗ ಬಹಿರಂಗ ಹೇಗಿದೆ ಹಾಗೇ, ಅದರಲ್ಲಿ ಯಾವುದೇ ಕಲಬೆರಕೆ ಇಲ್ಲದೆ ನೋಡುವವರು ದಾರ್ಶನಿಕರು ಎಂದು ಗುರುತಿಸಿದ್ದಾರೆ ಎಂದು ತಿಳಿಸುತ್ತಾ ಮತಗಳು ಹೇಗೆ ರೂಪುಗೊಂಡಿತ್ತು ಎಂಬುದನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಜೀ ಅವರು ಉಪಸ್ಥಿತರಿದ್ದರು.

ಕೆರೆಯಲ್ಲಿ ಸಿಕ್ಕ ಹುಲಿ ಕಳೇಬರ ರಹಸ್ಯ ಬಯಲು

ಬೆಳೆ ರಕ್ಷಣೆಗೆ ವಿದ್ಯುತ್ ಹರಿಸಿದ ಬೇಲಿಗೆ ಬಲಿ; ಒಬ್ಬನ ಬಂಧನ

ತಲೆಮರೆಸಿಕೊಂಡಿರುವ ಐವರಿಗಾಗಿ ಶೋಧ





ಬಂಡೀಪುರ,ಫೆ.24(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮದ ಕೆರೆಯೊಂದರಲ್ಲಿ ಫೆ.7ರಂದು ಹುಲಿಯೊಂದರ ಕಳೇಬರ ಪತ್ತೆಯಾಗಿದ್ದ ಪ್ರಕರಣವನ್ನು ಅರಣ್ಯ ಸಿಬ್ಬಂದಿ ಭೇದಿಸಿದ್ದು, ಹುಲಿ ಸಾವಿಗೆ ಕಾರಣನಾಗಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿ, ನಾಪತ್ತೆಯಾಗಿರುವ ಐವರಿಗಾಗಿ ಬಲೆ ಬೀಸಿದ್ದಾರೆ. ಗುಂಡ್ಲುಪೇಟೆ ತಾಲೂಕಿನ ಕೆಬ್ಬೇಪುರ ಗ್ರಾಮದ ರೇಚಪ್ಪ ಬಿನ್ ಶಿವಬಸಪ್ಪ ಬಂಧನ ಕೊಳಗಾಗಿದ್ದು, ಅದೇ ಗ್ರಾಮದ ಐವರು ತಲೆ ಮರೆಸಿಕೊಂಡಿದ್ದಾರೆ. ಕೆರೆಯಲ್ಲಿ ಸಿಕ್ಕ ಹುಲಿ ಕಳೇಬರ ಪರಿಶೀಲಿಸಿ, ತನಿಖೆಗಿಳಿದ ಅರಣ್ಯ ಸಿಬ್ಬಂದಿ ಸುತ್ತಮುತ್ತಲಿನ ಗ್ರಾಮ ಗಳಲ್ಲಿ ಅನುಮಾನ ಬಂದ ಕೆಲವರನ್ನು ವಿಚಾರಣೆಗೊಳಪಡಿಸಿದಾಗ ಹುಲಿ ಸಾವಿನ ನಿಗೂಢತೆ ಬಯಲಾಗಿದೆ.

ಇದೇ ಹುಲಿ ಸಾವಿಗೆ ಕಾರಣ: ರೇಚಪ್ಪ ತನ್ನ ಜಮೀನಿನ ಬೆಳೆ ರಕ್ಷಣೆಗಾಗಿ ಅಳವಡಿಸಿರುವ ತಂತಿ ಬೇಲಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ನೀಡಿದ್ದ. ಫೆ.6ರ ರಾತ್ರಿ ಈ ಗಂಡು ಹುಲಿ ಬೇಲಿಗೆ ಹರಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಸ್ಥಳದಲ್ಲೇ ಮೃತಪಟ್ಟಿದೆ. ಮುಂಜಾನೆ ಹುಲಿ ಸತ್ತು ಬಿದ್ದಿರುವುದನ್ನು ಕಂಡ ರೇಚಪ್ಪ, ಪ್ರಕರಣವನ್ನು ಮುಚ್ಚಿಹಾಕಲು, ಐವರು ಸ್ನೇಹಿತರೊಂದಿಗೆ ಸೇರಿ ಹುಲಿ ಕಳೇಬರವನ್ನು ಮಲ್ಲಯ್ಯನಕಟ್ಟೆ ಕೆರೆ ಬಳಿ ತಂದು, ಅದಕ್ಕೆ ತಂತಿಯಿಂದ ಎರಡು ದೊಡ್ಡ ಕಲ್ಲನ್ನು ಕಟ್ಟಿ ನೀರಿನಲ್ಲಿ ಮುಳುಗಿಸಿದ್ದಾರೆ. ತಪ್ಪೊಪ್ಪಿಕೊಂಡ ರೇಚಪ್ಪ ಈಗ ನ್ಯಾಯಾಂಗ ಬಂಧನದಲ್ಲಿದ್ದಾನೆ. ತಲೆಮರೆಸಿಕೊಂಡಿರುವ ಐವರು ಆರೋಪಿಗಳಿಗಾಗಿ ಶೋಧ ನಡೆಸುತ್ತಿದ್ದಾರೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆ ಯಲ್ಲಿ ಗುಂಡ್ಲುಪೇಟೆ ಉಪ ವಿಭಾಗದ ಎಸಿಎಫ್ ಜಿ.ರವೀಂದ್ರ, ಕುಂದಕೆರೆ ವಲಯದ ಆರ್‌ಎಫ್‌ಓ ಡಿ.ಶ್ರೀನಿವಾಸ್, ವಿಶೇಷ ಹುಲಿ ಸಂರಕ್ಷಣಾ ದಳದ ಪ್ಲಟೂನ್1 ಆರ್‌ಎಫ್‌ಓ ಎನ್.ವಿ.ನವೀನ್ ಕುಮಾರ್, ಮದ್ದೂರು ವಲಯದ ಆರ್‌ಎಫ್‌ಓ ಬಿ.ಎಂ.ಮಲ್ಲೇಶ್, ವಿಶೇಷ ಹುಲಿ ಸಂರಕ್ಷಣಾ ದಳದ ಎಸಿಎಫ್ ಕೆ.ಪರಮೇಶ್, ಬಂಡೀಪುರದ ಎಸಿಎಫ್ ಎನ್.ನವೀನ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಣಹದ್ದು ಸಮೀಕ್ಷೆ



ಬಂಡೀಪುರ, ಫೆ.24(ಎಂಟಿವೈ)–ಅಳಿವಿನಂಚಿನಲ್ಲಿರುವ ರಣಹದ್ದುಗಳ ಸಂತತಿ ಸಂರಕ್ಷಣೆಗೆ ಅರಣ್ಯ ಇಲಾಖೆ ಮುಂದಾಗಿದ್ದು, ಫೆ.25 ಮತ್ತು 26ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 70 ಸಿಬ್ಬಂದಿ ಸೇರಿದಂತೆ 110 ಮಂದಿ ಸಮೀಕ್ಷೆ ನಡೆಸಲಿದ್ದಾರೆ.

ಅಳಿವಿನಂಚಿಗೆ ರಣಹದ್ದು ಸಂತತಿ ದೂಡಲ್ಪಟ್ಟಿದೆ. ಈ ಹಿಂದೆ ಸಾವಿರಾರು ಸಂಖ್ಯೆಯಲ್ಲಿದ್ದ ರಣಹದ್ದುಗಳ ಸಂಖ್ಯೆ ಈಗ ಬೆರಳೆಣಿಕೆಯಷ್ಟಿದೆ. ಏಕಕಾಲದಲ್ಲಿ ಫೆ.25 ಮತ್ತು 26ರಂದು ಕರ್ನಾಟಕದ ಬಂಡೀಪುರ, ಕೇರಳದ ವೈಯ್ನಾಡು ಹಾಗೂ ತಮಿಳುನಾಡಿನ ಮಧುಮಲೈ ರಾಷ್ಟ್ರೀಯ ಉದ್ಯಾನವನ ಹಾಗೂ ವನ್ಯಜೀವಿಧಾಮದಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ. ಈ ಸಮೀಕ್ಷೆಗಾಗಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ವಿವಿಧ ವಲಯಗಳಲ್ಲಿ 40 ಪಾಯಿಂಟ್‌ಗಳನ್ನು ಗುರುತಿಸಲಾಗಿದೆ. ರಣಹದ್ದುಗಳ ಸ್ಥಿತಿಗತಿ ಬಗ್ಗೆ ಸ್ಥೂಲ ಚಿತ್ರಣ ದಾಖಲೀಕರಿಸಲು ಸಮೀಕ್ಷೆ ಸಹಕಾರಿಯಾಗಲಿದೆ. 2–3 ದಶಕದ ಹಿಂದೆ ಬಂಡೀಪುರ, ತಮಿಳುನಾಡಿನ ಮಧುಮಲೈ ಹಾಗೂ ಕೇರಳದ ವೈಯ್ನಾಡು ಪ್ರದೇಶ ವ್ಯಾಪ್ತಿ ಅರಣ್ಯದಲ್ಲಿ 2 ಸಾವಿರಕ್ಕೂ ಹೆಚ್ಚು ರಣಹದ್ದುಗಳಿದ್ದವು ಎಂಬ ದಾಖಲೆ ಇದೆ. ಆದರೆ, ಇದೀಗ ಬೆರಳೆಣಿಕೆಯಷ್ಟಿವೆ.

ನಗರಸಭಾ ಕಾರ್ಯಾಲಯ, ಚಾಮರಾಜನಗರ

Office: 08226-222035 Fax: 08226-222566, Commissoner: 08226-222566
Helpline: 08226-224239 & 223300,
Email:itstaff_ulb_chamarajanagar@yahoo.co.in, website: www.chamarajanagarcity.gov.in

ಸಂಖ್ಯೆ: ನ.ಸ.ಚಾ./ತಾಂ.ವಿ/ಕಿ.ಅ/ಪಿ.ಆರ್/ /2022–23 ದಿನಾಂಕ: 21.02.2023

ಟೆಂಡರ್ ಪ್ರಕಟಣೆ

ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯ್ದೆ 1999ರಂತೆ ಅರ್ಹತೆ ಹೊಂದಿರುವ ಸಿವಿಲ್/ ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಸೀಲ್ ಮಾಡಿದ ಏಕ ಲಕೋಟೆ (ಇ.ಎಂ.ಡಿ ಯೊಂದಿಗೆ) ಟೆಂಡರ್‌ನ್ನು ಸಲ್ಲಿಸಬಹುದಾಗಿದೆ.

ವೇಳಾ ಪಟ್ಟಿ :

1. ಖಾಲಿ ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ: 27.02.2023 ಸಂಜೆ 5.30ರವರೆಗೆ
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.02.2023 ಸಂಜೆ 4.00 ಗಂಟೆಯವರೆಗೆ
3. ಟೆಂಡರ್ ತೆರೆಯುವ ದಿನಾಂಕ 01.03.2023 ಬೆಳಗ್ಗೆ 11.00 ಗಂಟೆಗೆ

ಕ್ರಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ	ಕಾಲಾವಾಧಿ
1.	2022ನೇ ಇಸವಿಯಲ್ಲಿ ಬಿದ್ದಿ ಭಾರಿ ಮಳೆಯಿಂದ ಹಾನಿಗೊಳಗಾದ ಎಸ್.ಟಿ.ಪಿ ಲ್ಯಾಂಡ್‌ಗೆ ಹೋಗುವ ರಸ್ತೆ ಮತ್ತು ವಾರ್ಡ್ ನಂ 10 ರಲ್ಲಿರುವ ಚಿಕ್ಕಲಿಂಗಯ್ಯ ಮನೆ ಹತ್ತಿರ ರಸ್ತೆಗಳ ದುರಸ್ಥಿ ಕಾಮಗಾರಿ	4.99	12475.00	30 ದಿನಗಳು

ಷರಾ: 1. ಷರತ್ತುಗಳು ಟೆಂಡರ್ ದಸ್ತಾವೇಜಿನಲ್ಲಿ ಲಭ್ಯವಿರುತ್ತದೆ.

2. ಕಾಮಗಾರಿಗೆ ತಗುಲುವ ವೆಚ್ಚವನ್ನು ನಗರಸಭಾ ನಿಧಿಯಡಿ ಹಣದ ಲಭ್ಯತೆಯ ಮೇರೆಗೆ ಪಾವತಿಸಲಾಗುವುದು.

ಸಹಿ/– (ಶ್ರೀಮತಿ ಸಿ.ಎಂ.ಆಶಾ) ಅಧ್ಯಕ್ಷರು, ನಗರಸಭೆ, ಚಾಮರಾಜನಗರ
ಸಹಿ/– (ಶ್ರೀಮತಿ ಪಿ.ಸುಧಾ) ಉಪಾಧ್ಯಕ್ಷರು, ನಗರಸಭೆ, ಚಾಮರಾಜನಗರ
ಸಹಿ/– (ಶ್ರೀ ಎಸ್.ವಿ.ರಾಮದಾಸ್) ಪೌರಾಯುಕ್ತರು, ನಗರಸಭೆ, ಚಾಮರಾಜನಗರ

ವಾ.ಸಾ.ಸಂ.ಇ/ಚಾ.ನಗರ.593/2022–23

ಕರ್ನಾಟಕ ಸರ್ಕಾರ

ತಹಸೀಲ್ದಾರ್ ರವರ ಕಾರ್ಯಾಲಯ, ಮೈಸೂರು ತಾಲ್ಲೂಕು, ಮೈಸೂರು

ದೂರವಾಣಿ: 0821–2414811, ಫ್ಯಾಕ್ಸ್ : 0821–2414811, ಇಮೇಲ್: mysoretah@yahoo.com

ಸಂಖ್ಯೆ: ಎಂ.ಎಸ್.ಸಿ. (ಆರ್–12)11/2022–23 ದಿನಾಂಕ: 20.02.2023

ಪ್ರಕಟಣೆ

ಮೆ॥ ಚಾಣಕ್ಯ ಫೈನಾನ್ಸ್ ಲಿ., ಸಂಸ್ಥೆಯು ಸಾರ್ವಜನಿಕರಿಂದ ಠೇವಣಿ ಸ್ವೀಕರಿಸಿ ಠೇವಣಿ ಹಣವನ್ನು ಹಿಂದಿರುಗಿಸದ ಕಾರಣ ಸಂಸ್ಥೆಗೆ ಸೇರಿದ ಈ ಕೆಳಗಿನ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಮಾಡಲು ಮಾನ್ಯ ಜಿಲ್ಲಾ ಗ್ರಾಹಕರ ಪರಿಹಾರ ಆಯೋಗದಿಂದ ಎಕ್ಸಿಕ್ಯೂಷನ್ ಆದೇಶದ ಮೇರೆಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 190 ಸಿ ಮತ್ತು ಕರ್ನಾಟಕ ಪಬ್ಲಿಕ್ ಮನಿ (Recovery of Dues) ಕಾಯ್ದೆ 1979ರ ಕಲಂ 3(2) ಮೇರೆಗೆ ಭೂ ಕಂದಾಯ ಬಾಕಿಯಂತೆ ವಸೂಲಾತಿ ಮಾಡಿ ಬಂದ ಮೊಬಲಗನ್ನು ಮಾನ್ಯ ನ್ಯಾಯಾಲಯಕ್ಕೆ ಜಮಾ ಮಾಡಲು ಆದೇಶಿಸಿದ್ದು, ಜಿಲ್ಲಾಧಿಕಾರಿಗಳು, ಮೈಸೂರು ರವರ ನಿರ್ದೇಶನದ ಮೇರೆಗೆ ಈ ಕೆಳಕಂಡ ಸ್ವತ್ತನ್ನು ದಿನಾಂಕ: **28.02.2023ರಂದು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ** ಬಹಿರಂಗ ಹರಾಜು ನಡೆಸಲಾಗುವುದು. ಸ್ವತ್ತಿನ ಮೀಸಲು ಮೌಲ್ಯ **ರೂ. 45,00,000/–**. ನಿವೇಶನ ಹಾಗೂ ಕಟ್ಟಡ ಒಳಗೊಂಡಿರುತ್ತದೆ. ಹರಾಜಿನ ದಿನದಂದು ಮುಂಗಡ ಹಣ (ಇ.ಎಂ.ಡಿ.): **ರೂ. 45,000/–ಗಳನ್ನು** ಅಡಿಷನಲ್ ತಹಸೀಲ್ದಾರ್, ಮೈಸೂರು ಇವರ ಪದನಾಮದಲ್ಲಿ ಡಿ.ಡಿ.ಯನ್ನು ಪಡೆದು ಹರಾಜಿನ ದಿನದಂದು ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆ ಒಳಗೆ ಸ್ವತ್ತು ಇರುವ ಸ್ಥಳದಲ್ಲೇ ನೋಂದಾಯಿಸಿಕೊಂಡು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಅತಿ ಹೆಚ್ಚಿನ ಬಿಡ್‌ದಾರರು ಬಿಡ್ ಮೊಬಲಗಿನ ಶೇ. 25ರಷ್ಟನ್ನು ಬಿಡ್ ದಿನವೇ ಕಛೇರಿ ವೇಳೆಯೊಳಗೆ ಕ್ರಾಸ್ ಮಾಡಿದ ಚೆಕ್ ಅಥವಾ ಡಿ.ಡಿ. ಮೂಲಕ ಪಾವತಿಸಬೇಕಾಗುತ್ತದೆ. ಹರಾಜು ಇಸ್ತಿಹಾರ್‌ನಲ್ಲಿ ಸೂಚಿಸಿರುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ.

ಹರಾಜು ಮಾಡುವ ಷೆಡ್ಯೂಲ್ ಸ್ವತ್ತಿನ ವಿವರ:

ಮನೆ ನಂ. 264, ಚಾಣಾಕ್ಯ 4ನೇ ಕ್ರಾಸ್, ನವಿಲು ರಸ್ತೆ, ಎ ಮತ್ತು ಬಿ ಬ್ಲಾಕ್ ಮುಖ್ಯರಸ್ತೆ, ಕುವೆಂಪುನಗರ, ಮೈಸೂರು
ವಿಸ್ತೀರ್ಣ: 35*20 ಅಡಿಗಳು (ಕಟ್ಟಡ ಒಳಗೊಂಡಂತೆ ನಿವೇಶನ)

ಸ್ಥಳ	ಸ್ವತ್ತಿನ ವಿವರ	ಚಕ್ಕುಬಂದಿ				ಹಾಲಿ ಮಾಲೀಕರು	ಹರಾಜು ದಿನಾಂಕ
		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
ಮೈಸೂರು	ಮನೆ ನಂ. 264, ಚಾಣಾಕ್ಯ 4ನೇ ಕ್ರಾಸ್, ನವಿಲು ರಸ್ತೆ, ಎ ಮತ್ತು ಬಿ ಬ್ಲಾಕ್ ಮುಖ್ಯರಸ್ತೆ, ಕುವೆಂಪುನಗರ, ಮೈಸೂರು (35*20 ಅಡಿ)	ಮನೆ ನಂ. 263	ಮನೆ ನಂ. 265	ಮನೆ ನಂ. 293	ರಸ್ತೆ	ಚಾಣಾಕ್ಯ ಫೈನಾನ್ಸ್ ಕಾರ್ಪೊರೇಷನ್	28.02.2023

ಮೇಲ್ಕಂಡ ಸ್ವತ್ತಿನ ಸ್ಥಳದಲ್ಲಿಯೇ ಬಹಿರಂಗ ಹರಾಜು ಪ್ರಕ್ರಿಯೆ ನಡೆಸಲಾಗುವುದು. ಆಸಕ್ತರು ಭಾಗವಹಿಸುವಂತೆ ಕೋರಲಾಗಿದೆ.

ಸಹಿ/– ಹೆಚ್ಚುವರಿ ತಹಸೀಲ್ದಾರ್ & ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಮೈಸೂರು ತಾಲ್ಲೂಕು.

ವಾಸಾಸಂಇ/ಮೈಸೂರು/ಶಿರಡಿಸಾಯಿ/1069/2022–23

ಮೈಸೂರು ಮಿತ್ರ ಶನಿವಾರ 25 ಫೆಬ್ರವರಿ 2023

ವಿಜೃಂಭಣೆಯ ಸಿದ್ದಲಿಂಗೇಶ್ವರ– ಮಹದೇಶ್ವರಸ್ವಾಮಿ ರಥೋತ್ಸವ



ಚಿನಕುರಳಿ: ಸಾಮೂಹಿಕ ವಿವಾಹಕ್ಕೂ ಮೊದಲು ಬೇಬಿಬೆಟ್ಟದಲ್ಲಿ ಸಿದ್ದಲಿಂಗೇಶ್ವರ–ಮಹದೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಬೆಳಗ್ಗೆ 7.35ಕ್ಕೆ ರಥೋತ್ಸವಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು, ಡಾ.ಶ್ರೀ ತ್ರಿನೇತ್ರ ಸ್ವಾಮೀಜಿ, ಶಿವಬಸವಸ್ವಾಮೀಜಿ ಚಾಲನೆ ನೀಡಿದರು. ಮಠದ ಆವರಣದಿಂದ ಹೊರಟ ರಥೋತ್ಸವಕ್ಕೆ ಭಕ್ತರು ಉಘೇ ಮಾದಪ್ಪ ಉಘೇ ಉಘೇ ಎಂದು ಜಯಘೋಷ ಕೂಗಿ ಹಣ್ಣು ಜವನ ಎಸೆದು ಭಕ್ತಿ ಪರವಶರಾದರು. ಮಹದೇಶ್ವರ ದೇವಸ್ಥಾನದ ಸುತ್ತ 3 ಸುತ್ತು ಪ್ರದಕ್ಷಿಣೆ ಹಾಕಿ ರಥ ಸ್ವಸ್ಥಾನ ಸೇರಿತು.

ಬೇಬಿಬೆಟ್ಟದ ದನಗಳ ಜಾತ್ರಾ ಮಹೋತ್ಸವ: ಉಚಿತ ಸಾಮೂಹಿಕ ವಿವಾಹ

ದಾಂಪತ್ಯ ಜೀವನಕ್ಕೆ ಕಾಲಿಟ್ಟ 19 ಜೋಡಿಗಳು

ಚಿನಕುರಳಿ, ಫೆ.24– ಇಲ್ಲಿನ ಪುರಾಣ ಪ್ರಸಿದ್ಧ ಬೇಬಿಬೆಟ್ಟದ ದನಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಶುಕ್ರವಾರ ನಡೆದ ಉಚಿತ ಸರಳ ಸಾಮೂಹಿಕ ವಿವಾಹದಲ್ಲಿ 19 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಬೇಬಿ ಗ್ರಾಮದ ಶ್ರೀದುರ್ದಂಡೇಶ್ವರ ಮಹಾಂತ ಶಿವಯೋಗಿ ಮಠದ ಪೀಠಾಧ್ಯಕ್ಷ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಶ್ರೀಶಿವಬಸವಸ್ವಾಮೀಜಿ, ಶಾಸಕ ಸಿ.ಎಸ್. ಪುಟ್ಟರಾಜು, ಅವರ ಪತ್ನಿ ನಾಗಮ್ಮ ನೂತನ ವಧು–ವರರಿಗೆ ಮಾಂಗಲ್ಯ ವಿತರಣೆ ಮಾಡಿದರು. ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಂತ್ರ ಮಾಂಗಲ್ಯ ವಾಚಿಸಿದರು. ಬೆಳಗ್ಗೆ 9ರಿಂದ 9.25ರಲ್ಲಿ ಸಲ್ಲುವ ಮೀನಾ ಲಗ್ನದಲ್ಲಿ ಮಾಂಗಲ್ಯ ಧಾರಣೆ ನಡೆಯಿತು.

ಈ ವೇಳೆ ಶಾಸಕ ಸಿ.ಎಸ್.ಪುಟ್ಟರಾಜು, ಅವರ ಪತ್ನಿ ನಾಗಮ್ಮ ಅವರು ನೂತನ ಜೀವನಕ್ಕೆ ಕಾಲಿಟ್ಟ ನವಜೋಡಿಗಳನ್ನು ಆಶೀರ್ವದಿಸಿದರು. ಬಳಿಕ ಮಾತನಾಡಿದ ಪುಟ್ಟರಾಜು, ರಾಸುಗಳಲ್ಲಿ ಕಂಡು ಬರುತ್ತಿರುವ ಚರ್ಮಗಂಟು ರೋಗ ಕಾಯಿಲೆ ಹಿನ್ನೆಲೆಯಲ್ಲಿ ಈ ಬಾರಿ ರಾಜ್ಯಾದ್ಯಂತ ದನಗಳ ಜಾತ್ರೆ ನಡೆಸಲು ಅವಕಾಶ ನೀಡಿರಲಿಲ್ಲ. ಆದರೆ ರೈತರ ಒತ್ತಾಯದ ಮೇರೆಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಬೇಬಿಬೆಟ್ಟದ ದನಗಳ ಜಾತ್ರೆ ನಡೆಸಲು ವಿಶೇಷ ಅನುಮತಿ ಪಡೆದು ವಿಜೃಂಭಣೆಯಿಂದ ಜಾತ್ರೆ ನಡೆಸಲಾಗಿದೆ. ಜಾತ್ರೆಗೆ ಅನುಮತಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಜಿಲ್ಲಾಧಿಕಾರಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಕ್ಷೇತ್ರದ ಅಭಿವೃದ್ಧಿಗೆ 10 ಕೋಟಿ ಅನುದಾನದಲ್ಲಿ ಏತ ನೀರಾವರಿ ಯೋಜನೆಗೆ ಚಾಲನೆ ನೀಡಲಾಗಿದೆ. 2 ಕೋಟಿ ವೆಚ್ಚದಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಇಂದು ಚಾಲನೆ ನೀಡಲಾಗಿದೆ. ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಮಾದರಿ ಅದಕ್ಕಿಂತ ಚಿಕ್ಕದಾಗಿ ದೇವಸ್ಥಾನ ನಿರ್ಮಿಸಲಾಗುವುದು. ಮುಂದಿನ ದಿನಗಳಲ್ಲಿ ಬೇಬಿಬೆಟ್ಟದ ಜಾತ್ರೆಯಲ್ಲಿ ರಾಜ್ಯಮಟ್ಟದ ಹತ್ತಾರು ಕಾರ್ಯಕ್ರಮ ಆಯೋಜಿಸುವ ಮೂಲಕ ಮತ್ತಷ್ಟು ವೈಭವದಿಂದ ಜಾತ್ರೆ ಆಚರಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

> “ಬೇಬಿಬೆಟ್ಟದ ಜಾತ್ರೆ ನಶಿಸಿ ಹೋಗುವ ಹಂತದಲ್ಲಿತ್ತು. 2006ರಲ್ಲಿ ನಾನು ಶಾಸಕನಾದಾಗ ಜಾತ್ರೆ ನಡೆಸಬೇಕೆಂದು ತೀರ್ಮಾನಿಸಿ ನನ್ನ ಮಗಳು, ನನ್ನ ಅಣ್ಣನ ಮಗ ಸೇರಿದಂತೆ ನನ್ನ ಕುಟುಂಬದ 13 ಜೋಡಿ ಸೇರಿದಂತೆ ಒಟ್ಟು 156 ಜೋಡಿಗಳ ಉಚಿತ ಸಾಮೂಹಿಕ ವಿವಾಹ ನಡೆಸುವ ಮೂಲಕ ಜಾತ್ರೆ ಆರಂಭಿಸಲಾಯಿತು. ಅಲ್ಲಿಂದ ಇಲ್ಲಿಯವರೆಗೆ ಸಾವಿರಾರು ಮದುವೆಗಳು ಈ ಪವಿತ್ರ ಕ್ಷೇತ್ರದಲ್ಲಿ ನಡೆದಿದೆ.
> -ಸಿ.ಎಸ್.ಪುಟ್ಟರಾಜು, ಶಾಸಕ.



ಜಾತ್ರೆಯಲ್ಲಿ ಭಾಗವಹಿಸಿರುವ ರಾಸುಗಳನ್ನು ಚಿನ್ನದ ಬಹುಮಾನಕ್ಕೆ ಆಯ್ಕೆ ಮಾಡುವ ವಿಚಾರದಲ್ಲಿ ಯಾವುದೇ ತಾರತಮ್ಯ ನಡೆಯಲ್ಲ. ರಾಸುಗಳ ಆಯ್ಕೆಗಾಗಿ ವೈದ್ಯಾಧಿಕಾರಿಗಳು ತುಮಕೂರಿನಿಂದ ಪಶುವೈದ್ಯರನ್ನು ಕರೆಸಿಕೊಂಡಿದ್ದಾರೆ. ಪಶುವೈದ್ಯರು ಆಯ್ಕೆ ಮಾಡಿದ ಪಟ್ಟಿಯನ್ನು ವೇದಿಕೆ ಮೇಲೆಯೇ ಸಾರ್ವಜನಿಕವಾಗಿ ಬಿಡುಗಡೆ ಮಾಡಿ ರೈತರಿಗೆ ಚಿನ್ನದ ಬಹುಮಾನ ನೀಡಲಾಗುವುದು ಎಲ್ಲಾ ರೈತರು ಸಹಕರಿಸಬೇಕೆಂದು ಮನವಿ ಮಾಡಿದರು.

ಡಾ.ಶ್ರೀತ್ರಿನೇತ್ರ ಮಹಾಂತ ಶಿವ ಯೋಗಿ ಸ್ವಾಮೀಜಿ ಮಾತನಾಡಿ, ಬೇಬಿ ಬೆಟ್ಟದ ರಥೋತ್ಸವ ಮತ್ತು ಸರಳ ಸಾಮೂಹಿಕ ವಿವಾಹ ಎರಡೂ ಒಂದೇ ದಿನ ನಡೆದಿರುವುದು ವಿಶೇಷ. ದನಗಳ ಜಾತ್ರೆಯನ್ನು ಇಷ್ಟೊಂದು ಅದ್ಧೂರಿಯಾಗಿ ನಡೆಸಿ ರಾಸುಗಳಿಗೆ ಚಿನ್ನದ ಬಹುಮಾನ ನೀಡುವ ರಾಜ್ಯದ ಏಕೈಕ ಜಾತ್ರೆ ಎಂದರೆ ಬೇಬಿಬೆಟ್ಟದ ದನಗಳ ಜಾತ್ರೆ ಎಂದು ಬಣ್ಣಿಸಿದರು.

ದೇಶದಲ್ಲಿ ಹೆಣ್ಣಿಗೆ ವಿಶೇಷ ಸ್ಥಾನಮಾನ ನೀಡಲಾಗಿದೆ. ಜಗತ್ತಿನಲ್ಲಿ ಪ್ರೀತಿ, ನಂಬಿಕೆಗಿಂತ ದೊಡ್ಡದು ಮತ್ತೊಂದಿಲ್ಲ. ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವಜೋಡಿಗಳು ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ಸಂಸಾರ ಮಾಡಬೇಕು. ಜೀವನದಲ್ಲಿ ಬರುವ ಕಷ್ಟ–ಸುಖಗಳನ್ನು ಇಬ್ಬರು ಸಮಾನವಾಗಿ ಹಂಚಿಕೊಂಡು ಬದುಕಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಸಂಸಾರದಲ್ಲಿ ಸಣ್ಣ ಬಿರುಕುಗಳು ಉಂಟಾಗಿ ವಿಚ್ಛೇದನದಂತಹ ಪ್ರಕರಣ ಹೆಚ್ಚಾಗುತ್ತಿವೆ. ಇದಕ್ಕೆ ಕಾರಣ ಕೋಪ. ಹೀಗಾಗಿ ಕೋಪದ ಕೈಗೆ ಬುದ್ಧಿಕೊಟ್ಟು ಸಂಸಾರ ಹಾಳುಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಶ್ರೀಶಿವಬಸವಸ್ವಾಮೀಜಿ ಮಾತನಾಡಿದರು.

ಇದೇ ವೇಳೆ 2 ಕೋಟಿ ವೆಚ್ಚದಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಶ್ರೀಗಳು ಭೂಮಿಪೂಜೆ ನೆರವೇರಿಸಿದರು. ವಿವಾಹ ಮಹೋತ್ಸವದಲ್ಲಿ ಭಾಗವಹಿಸಿದ 10 ಸಾವಿರಕ್ಕೂ ಹೆಚ್ಚು ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಈ ವೇಳೆ ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ನಾಗಮ್ಮ ಪುಟ್ಟರಾಜು, ಶಾಂತಲ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶ್ವಂತ್ ಕುಮಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಪುರಸಭಾಧ್ಯಕ್ಷೆ ಅರ್ಚನ ಚಂದ್ರು, ಉಪಾಧ್ಯಕ್ಷೆ ಶ್ವೇತ, ಗ್ರಾಪಂ ಅಧ್ಯಕ್ಷ ಪಾಪಣ್ಣ, ಚಂದ್ರಶೇಖರಯ್ಯ, ಆರ್.ಎನ್.ಭವಾನಿ, ಕೆ.ಎಂ.ಶ್ರುತಿ, ಪವಿತ್ರ, ಭಾಗ್ಯಮ್ಮ, ತಾಪಂ ಮಾಜಿ ಸದಸ್ಯ ವಿ.ಎಸ್.ನಿಂಗೇಗೌಡ, ಯೋಗೇಶ್, ತಹಸೀಲ್ದಾರ್ ಸೌಮ್ಯ, ಇಓ ಲೋಕೇಶ್ ಮೂರ್ತಿ, ಸಿಪಿಐ ಲವ, ಜಾತ್ರಾ ಸಮಿತಿ ಮುಖ್ಯಸ್ಥ ನಾಗಣ್ಣ ಸೇರಿದಂತೆ ಇತರರಿದ್ದರು.

ದಾಂಪತ್ಯಕ್ಕೆ ಕಾಲಿಟ್ಟ ಅವಳಿ–ಜವಳಿ



ಸರಳ ಸಾಮೂಹಿಕ ವಿವಾಹದಲ್ಲಿ ಅವಳಿ–ಜವಳಿ ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದು ವಿಶೇಷವಾಗಿತ್ತು. ತಾಲೂಕಿನ ಚಲುವರಸನಕೊಪ್ಪಲು ಗ್ರಾಮದ ಅವಳಿ ಜವಳಿ ಅಕ್ಕತಂಗಿ, ಲಕ್ಷ್ಮೀಸಾಗರ ಗ್ರಾಮದ ಅವಳಿ ಜವಳಿ ಅಣ್ಣತಮ್ಮಂದಿರನ್ನು ವಿವಾಹವಾದರು. ಚಲುವರಸನಕೊಪ್ಪಲು ಗ್ರಾಮದ ಅಕ್ಕತಂಗಿಯರಾದ ಮೋನಿಕ ಮತ್ತು ಮೇಘನ ಲಕ್ಷ್ಮೀಸಾಗರ ಗ್ರಾಮದ ರಮೇಶ್ ಮತ್ತು ರಾಜೇಶ್ ಅವರನ್ನು ವಿವಾಹವಾಗಿ ನವಜೀವನಕ್ಕೆ ಕಾಲಿಟ್ಟರು.

ಕೃಷ್ಣೇಗೌಡ ನಿಧನ

ಕಿಕ್ಕೇರಿ, ಫೆ.24– ಇಲ್ಲಿನ ಅಂಕನಹಳ್ಳಿ ಗ್ರಾಮದ ನಿವಾಸಿ



ಕೃಷ್ಣೇಗೌಡ (70) ಗುರುವಾರ ನಿಧನರಾದರು.

ಮೃತರು ಕೆ.ಆರ್.ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನೌಕರ ಶಿವಕುಮಾರ್, ಸಾರಿಗೆ ನೌಕರ ಜಯರಾಂ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ಶುಕ್ರವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

7ನೇ ವೇತನ ಪರಿಷ್ಕರಣೆ, ಹಳೆ ಪಿಂಚಣಿ ಯೋಜನೆ ಜಾರಿಗೆ ಆಗ್ರಹಿಸಿ

ಮಾ.1ರಿಂದ ಸರ್ಕಾರಿ ನೌಕರರ ಅನಿರ್ದಿಷ್ಟಾವಧಿ ಧರಣಿ



ಶ್ರೀರಂಗಪಟ್ಟಣ, ಫೆ.24– ರಾಜ್ಯ ಸರ್ಕಾರಿ ನೌಕರರ 7ನೇ ವೇತನ ಭತ್ಯೆ ಪರಿಷ್ಕರಣೆ ಹಾಗೂ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸಲು ಆಗ್ರಹಿಸಿ ಮಾ.1 ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದು, ಎಲ್ಲಾ ನೌಕರರು ಭಾಗವಹಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಸಿ.ಜೆ.ಶ್ರೀನಿವಾಸ್ ತಿಳಿಸಿದರು.

ಪಟ್ಟಣದಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಪದಾಧಿಕಾರಿಗಳು ಹಾಗೂ ನೌಕರರ ಸಭೆಯಲ್ಲಿ ಅವರು ಮಾತನಾಡಿ, ಫೆ.21ರಂದು ನಡೆದ ತುರ್ತು ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ರಾಜ್ಯ ಸರ್ಕಾರಿ ನೌಕರರ ವೇತನ ಭತ್ಯೆಗಳ ಪರಿಷ್ಕರಣೆ ಮತ್ತು ಹಳೆ ಪಿಂಚಣಿ ಯೋಜನೆ ಜಾರಿಗೊಳಿಸುವಂತೆ ಸರ್ಕಾರಕ್ಕೆ ಆಗ್ರಹ ಪಡಿಸಿ ರಾಜ್ಯದ ಎಲ್ಲ ಸರ್ಕಾರಿ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಮಾ.1ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಲು ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿದೆ. ಹಾಗಾಗಿ ಮಾ.1ರೊಳಗೆ ನಮ್ಮ ಬೇಡಿಕೆ ಈಡೇರದಿದ್ದಲ್ಲಿ ಪ್ರತಿಯೊಬ್ಬರು ತಮ್ಮ ಕರ್ತವ್ಯಗಳಿಗೆ ಗೈರಾಗಿ ಬೆಂಬಲ ಸೂಚಿಸುವಂತೆ ಮನವಿ ಮಾಡಿದರು.

ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ, ಸಾರ್ವಜನಿಕ ಆಸ್ಪತ್ರೆ ತಾಲೂಕು ಆಡಳಿತಾಧಿಕಾರಿ ಡಾ.ಎನ್.ಕೆ ವೆಂಕಟೇಶ್ ಮಾತನಾಡಿದರು. ಈ ವೇಳೆ ಸಂಘದ ತಾಲೂಕು ಖಜಾಂಚಿ ಜೆಲುಮೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಎನ್ ಲೋಕೇಶ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರು, ಚನ್ನಕೇಶವ, ರೇವಣ್ಣ, ರಾಜು, ಮಂಗಳ, ಸೌಮ್ಯ, ನಾಗರಾಜು, ಪ್ರಕಾಶ್ ಸೇರಿದಂತೆ ಇತರರಿದ್ದರು.

ಜೈನಹಳ್ಳಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ

ಕೆ.ಆರ್.ಪೇಟೆ, ಫೆ.24– ತಾಲೂಕಿನಲ್ಲಿ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಆರಂಭವಾದ ಬಳಿಕ ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿದೆ. ಮಹಿಳೆಯರು ಸ್ವಉದ್ಯೋಗ ಆರಂಭಿಸಿ ಸಬಲರಾಗಿದ್ದಾರೆ ಎಂದು ತಾಲೂಕು ಆರೋಗ್ಯ ಮೇಲ್ವಿಚಾರಕ ಅಧಿಕಾರಿ ಧರ್ಮೇಂದ್ರ ತಿಳಿಸಿದರು.



ತಾಲೂಕಿನ ಜೈನಹಳ್ಳಿ ಕಾರ್ಯ ಕ್ಷೇತ್ರದಲ್ಲಿ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಜ್ಞಾನವಿಕಾಸ ಯೋಜನೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಜನತೆ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವುದು ಸರಿಯಲ್ಲ. ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಅನಾರೋಗ್ಯ ಕಂಡು ಬಂದ ಕೂಡಲೇ ಆಸ್ಪತ್ರೆಗೆ ಹೋಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಉತ್ತಮ ಆರೋಗ್ಯಕ್ಕಾಗಿ ಶುದ್ಧ ಕುಡಿಯುವ ನೀರು ಹಾಗೂ ಗುಣಮಟ್ಟದ ಆಹಾರ ಸೇವಿಸಬೇಕು. ಸೊಪ್ಪು, ತರಕಾರಿ ಸೇವನೆ ಆರೋಗ್ಯಕ್ಕೆ ಒಳ್ಳೆಯದು. ಆಗಾಗ್ಗೆ ತಮ್ಮ ಬಿಪಿ, ಶುಗರ್, ತಪಾಸಣೆ ಮಾಡಿಸಿಕೊಳ್ಳಬೇಕು. ಆ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾಲೂಕು ಯೋಜನಾಧಿಕಾರಿ ಮಮತಾ ಶೆಟ್ಟಿ ಮಾತನಾಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಜೈನಹಳ್ಳಿ ಚಂದ್ರೇಗೌಡ, ಗ್ರಾಪಂ ಸದಸ್ಯರಾದ ನಾಗಮ್ಮ, ರಾಜೇಗೌಡ, ರಾಮಕೃಷ್ಣೇಗೌಡ, ಆರೋಗ್ಯ ಸಹಾಯಕಿ ಲತಾ, ಯತೀಶ್, ಆರೋಗ್ಯ ಸಹಾಯಕಿ ಅಶ್ವಿನಿ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಶಿಕ್ಷಕ ಕುಮಾರಸ್ವಾಮಿ, ಕ್ಷಯ ರೋಗ ಮೇಲ್ವಿಚಾರಕ ನಾಗೇಶ್, ವಲಯದ ಮೇಲ್ವಿಚಾರಕಿ ಶಿಲ್ಪ, ಜ್ಞಾನ ವಿಕಾಸ ಸಮನ್ವಯಧಿಕಾರಿ ಕಾವ್ಯ ಸೇರಿದಂತೆ ಸೇವಾಪ್ರತಿನಿಧಿಗಳು ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ವೈದ್ಯರು ಸಿದ್ಧರಿಲ್ಲ

ಸದನದಲ್ಲಿ ಪಕ್ಷಾತೀತವಾಗಿ ಶಾಸಕರ ಬೇಸರ

ಬೆಂಗಳೂರು, ಫೆ.24– ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದಿರುವ ಬಗ್ಗೆ ಪಕ್ಷಾತೀತವಾಗಿ ಶಾಸಕರು ಪ್ರಸ್ತಾಪಿಸಿದರು. ವೈದ್ಯರ ವೇತನವನ್ನು ಹೆಚ್ಚಿಸಬೇಕು ಮತ್ತು ಅವರ ಕೆಲಸದ ಸ್ಥಳದಲ್ಲಿ ಭದ್ರತೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಸಭಾಪತಿ ವಿಶ್ವೇಶ್ವರ ಹೆಗಡೆ ಕಾಗೇರಿ, ಹೊಸ ವೈದ್ಯರು ನಗರ ಪ್ರದೇಶದಲ್ಲಿ ಕೆಲಸ ಮಾಡಲು ಬಯಸುತ್ತಾರೆಯೇ ಹೊರತು ಹಳ್ಳಿಗಳಲ್ಲಿರುವ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಲ್ಲ ಎಂದರು.

ಮುಂದುವರಿದು, ಈ ವೈದ್ಯರು ಪ್ರತಿಷ್ಠಿತ ಸಂಸ್ಥೆಗಳಿಂದ ಪದವೀಧರರು, ಅವರು ಜವಾಬ್ದಾರಿಯುತ ವ್ಯಕ್ತಿಗಳು. ವೈದ್ಯರ ಕೊರತೆಯಿಂದ ಹಲವು ಶಾಸಕರು ಸಮಸ್ಯೆ ಎದುರಿಸುತ್ತಿದ್ದಾರೆ. ವೈದ್ಯರ ಮನಸ್ಥಿತಿ ಬದಲಾಗಬೇಕು. ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಪ್ರೇರೇಪಿಸಬೇಕು. ಸರ್ಕಾರ ಕೂಡ ಅವರಿಗಾಗಿ ಮತ್ತು ಅವರ ಶಿಕ್ಷಣಕ್ಕಾಗಿ ಹಣವನ್ನು ಖರ್ಚು ಮಾಡುತ್ತದೆ. ಅವರಿಗೂ ಸೇವಾ ಮನೋಭಾವನೆ ಇರಬೇಕು ಎಂದು ಹೇಳಿದರು. ಸದನಕ್ಕೆ ಉತ್ತರಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ರತಿ 1000 ಜನಸಂಖ್ಯೆಗೆ ಒಬ್ಬ ವೈದ್ಯರು ಇರಬೇಕು. ಆದರೆ, ಭಾರತದಲ್ಲಿ ಇದು 1,400 ಜನರಿದ್ದಾರೆ. ಪದವಿ ಮತ್ತು ಸ್ನಾತಕೋತ್ತರ ಪದವಿಗಾಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಹೆಚ್ಚುತ್ತಿರುವಂತೆ ವಿಷಯಗಳು ಬದಲಾಗುತ್ತಿವೆ. ಕರ್ನಾಟಕದಲ್ಲಿ ಪಿಎಚ್‌ಸಿಗಳಿಗೆ ವೈದ್ಯರನ್ನು ನೇಮಕ ಮಾಡಿದ್ದೇವೆ. ಆದರೆ, ವೈದ್ಯರು ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ಹೋಗುತ್ತಿಲ್ಲ. ಶಿಕ್ಷಕರ ನಿಯೋಜನೆಯಂತೆಯೇ ವೈದ್ಯರ ನಿಯೋಜನೆಗೂ ಕೌನ್ಸೆಲಿಂಗ್ ನಡೆಸಬೇಕು' ಎಂದು ಹೇಳಿದರು.

ಆಂಧ್ರಪ್ರದೇಶದ ರಾಜ್ಯಪಾಲರಾಗಿ ಕನ್ನಡಿಗ ನಜೀರ್ ಪ್ರಮಾಣ ವಚನ ಸ್ವೀಕಾರ

ವಿಜಯವಾಡ, ಫೆ.24– ಆಂಧ್ರಪ್ರದೇಶದ ನೂತನ ರಾಜ್ಯಪಾಲರಾಗಿ ಸುಪ್ರೀಂಕೋರ್ಟ್‌ನ



ನಿವೃತ್ತ ನ್ಯಾಯಮೂರ್ತಿ ಕನ್ನಡಿಗ ಎಸ್. ಅಬ್ದುಲ್‌ನಜೀರ್ ಅವರು ಶುಕ್ರವಾರ ಪ್ರಮಾಣ ವಚನ ಸ್ವೀಕಾರ ಮಾಡಿದರು. ರಾಜಭವನದಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಆಂಧ್ರಪ್ರದೇಶ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಪ್ರಶಾಂತ್‌ಕುಮಾರ್‌ಮಿಶ್ರಾ ಅವರು, ನಜೀರ್‌ಅವರಿಗೆ ಪ್ರಮಾಣ ವಚನ ಬೋಧಿಸಿದರು. ಮುಖ್ಯಮಂತ್ರಿ ಜಗನ್‌ಮೋಹನ್‌ರೆಡ್ಡಿ, ಅವರ ಪತ್ನಿ ವೈ.ಎಸ್‌ಭಾರತಿ, ರಾಜ್ಯದ ಮಂತ್ರಿಗಳು ಹಾಗೂ ಹೈಕೋರ್ಟ್‌ನ ನ್ಯಾಯಮೂರ್ತಿಗಳು ಸಮಾರಂಭದಲ್ಲಿ ಹಾಜರಿದ್ದರು. ಈ ಹಿಂದೆ ಆಂಧ್ರಪ್ರದೇಶ ರಾಜ್ಯಪಾಲರಾಗಿದ್ದ ಬಿಸ್ವಾ ಭೂಷನ್‌ಹರಿಚಂದ್ರನ್‌ಅವರನ್ನು ಚತ್ತೀಸ್‌ಗಢ ವರ್ಗಾವಣೆ ಮಾಡಲಾಗಿದೆ.

ಒಂದನೇ ಪುಟದಿಂದ

ಇನ್ನು ಕೆಲವರದು ಮೌನ ನಡೆ!

ಅಧಿವೇಶನ ಮುಗಿದಿರುವ ಹಿನ್ನೆಲೆಯಲ್ಲಿ ಪಕ್ಷಾಂತರ ಅನಿವಾರ್ಯವಾಗಲಿದೆ ಎಂಬುದನ್ನು ಹಲವರು ತಮ್ಮ ತಮ್ಮ ಮಿತ್ರರ ಬಳಿ ಹೇಳಿಕೊಂಡು, ಸಮಾಧಾನಪಟ್ಟುಕೊಂಡರು.ಮುಂದಿನ ವಿಧಾನಸಭೆಗೆ ಯಾರ್‍ಯಾರು ಮತ್ತೆ ಪ್ರವೇಶ ಪಡೆಯುತ್ತೇವೋ ಇಲ್ಲವೋ ಎಂಬ ಚರ್ಚೆ ಕಳೆದ ಕೆಲವು ದಿನಗಳಿಂದ ಸದನದ ಒಳಗೆ, ಹೊರಗೆ ನಡೆಯುತ್ತಲೇ ಇತ್ತು. ತಮ್ಮ ತಮ್ಮ ಕ್ಷೇತ್ರಗಳ ವಿಚಾರಕ್ಕಿಂತ ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಹಲವರು ಚಿಂತನೆ ನಡೆಸುತ್ತಿದ್ದದ್ದು ಕಂಡುಬಂತು. ಇಂತಹ ಸನ್ನಿವೇಶದಲ್ಲಿ ಇದುವರೆಗೆ ಕಾಪಾಡಿಕೊಂಡು ಬಂದಿದ್ದ ಸಿದ್ಧಾಂತ, ತತ್ವ ಹಾಗೂ ವೈರತ್ವ ಮರೆತು ತಮ್ಮ ರಾಜಕೀಯ ಭವಿಷ್ಯದ ಬಗ್ಗೆ ಒಬ್ಬರಿಗೊಬ್ಬರು ಸಲಹೆ–ಸೂಚನೆಗಳನ್ನು ಹಂಚಿಕೊಳ್ಳುತ್ತಿದ್ದರೆ, ಈ ಎಲ್ಲಾ ವಿಚಾರಕ್ಕೆ ವೇದಿಕೆ ಎಂಬಂತೆ ಸಭಾಧ್ಯಕ್ಷರು ವಿದಾಯ ಭಾಷಣಕ್ಕೆ ಅವಕಾಶ ಮಾಡಿಕೊಟ್ಟಾಗ ತಮ್ಮನ್ನು ಆಯ್ಕೆ ಮಾಡಿದ ಕ್ಷೇತ್ರದ ಜನರಿಗೆ ಕೃತಜ್ಞತೆ ಸಲ್ಲಿಸಿದರು. ರಾಜಕೀಯವಾಗಿ ಕೈಹಿಡಿದ ನಾಯಕರ ಗುಣಗಾನ ಮಾಡಿದರು. ಅಲ್ಲದೆ, ಇದುವರೆಗೆ ವಿಧಾನಸಭೆಯ ಸದಸ್ಯರಾಗಿ ತಮ್ಮ ತಮ್ಮ ಅನುಭವಗಳು, ಕೆಲವು ಘಟನಾವಳಿಗಳ ಸರಮಾಲೆಯನ್ನು ಬಿಚ್ಚಿಟ್ಟು, ನೆನಪಿನ ಅಂಗಳದಲ್ಲಿ ತೇಲಿದರು. ಇಂತಹ ವಿಚಾರಗಳನ್ನು ಒಬ್ಬರಾದ ಮೇಲೊಬ್ಬರು ಎಂಬಂತೆ ಸದನದಲ್ಲಿ ಮೆಲುಕು ಹಾಕುತ್ತಿದ್ದಂತೆ ಉತ್ತೇಜಿತರಾದ ಇನ್ನು ಹಲವು ಸದಸ್ಯರು ಮನದಾಳ ಮಾತುಗಳನ್ನು ಹೇಳುವ ಮೂಲಕ ವಿಧಾನಸಭೆ ಇತಿಹಾಸದಲ್ಲಿ ದಾಖಲಿಸಿದರು.

ಬಿಜೆಪಿ ಪ್ರಗತಿ ರಥ ಯಾತ್ರೆಗೆ ಚಾಲನೆ; ಬಿಜೆಪಿಯೇ ಜನರ ಭರವಸೆ ಎಂದ ಸಿಎಂ

ಬೆಂಗಳೂರು, ಫೆ.24– ಬಿಜೆಪಿಗೆ ಸಮರ್ಥ ನಾಯಕತ್ವವಿದ್ದು, ಜನರು ಬಿಜೆಪಿಯೇ ಭರವಸೆ ಎಂದು ನಂಬಿದ್ದಾರೆ. ಭರವಸೆ ವಾಹನಗಳು ರಾಜ್ಯ ಸುತ್ತಿ ಬರುವಷ್ಟರಲ್ಲಿ ರಾಜ್ಯದಲ್ಲಿ ಬಿಜೆಪಿ ಸುನಾಮಿ ಏಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಬಿಜೆಪಿ ವತಿಯಿಂದ ಆಯೋಜಿಸಿದ್ದ ಪ್ರಗತಿ ರಥ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಡಿ ರುವ ಸಾಧನೆಗಳನ್ನು ಜನರಿಗೆ ತಲುಪಿಸಲು ರಾಜ್ಯಾದ್ಯಂತ 130 ರಥಗಳ ಯಾತ್ರೆ ಆರಂಭವಾಗಿದೆ. ಹೆಣ್ಣುಮಕ್ಕಳು ಬಡವರು, ಶಾಲಾ ಮಕ್ಕಳು ಎಲ್ಲರಿಗೂ ಮಾಹಿತಿ ತಲುಪಿಸಿ ಜಾಗೃತಿ ಮೂಡಿಸಲಾಗುವುದು. ನವ ಕರ್ನಾಟಕದ ಮೂಲಕ ನವ ಭಾರತ ಕಟ್ಟುವ ಕೆಲಸ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದರು. ನಮ್ಮ ಪ್ರಧಾನಿಯವರು ಹೇಳಿರುವಂತೆ ಸಂಕಲ್ಪವೇ ಸಿದ್ಧಿ. ಅದನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತವೆ. ರಾಜ್ಯದ ಹಳ್ಳಿ ಹಳ್ಳಿಗಳಿಗೆ ತಲುಪುವ ಈ ವಾಹನ ಎಲ್ಲರಿಗೂ ಸಂಕಲ್ಪ ಸಿದ್ಧಿ ಮಾಡುವಂತಾಗಲಿ ಎಂದು ಸಿಎಂ ಹೇಳಿದರು. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಕೋವಿಡ್ ಸಂಕಷ್ಟದ ನಂತರ ಜನ ಕಲ್ಯಾಣ ಕೆಲಸ ಮಾಡಿದೆ. ಬೆಂಗಳೂರಿನ 75 ಶಾಲೆ, ಕೆರೆಗಳ ಅಭಿವೃದ್ಧಿ,



ಎಲ್ಲ ವಾರ್ಡ್‌ಗಳಲ್ಲಿ ನಮ್ಮ ಕ್ಲಿನಿಕ್ ಸ್ಥಾಪನೆ, ಬೆಂಗಳೂರು ಅಭಿವೃದ್ಧಿಗೆ 6000 ಕೋಟಿ, ಸಬ್ ಅರ್ಬನ್ ರೈಲಿಗೆ ಕೇಂದ್ರದಿಂದ ಹಣ, ಸ್ಮಾರ್ಟ್ ಸಿಟಿ ಅಭಿವೃದ್ಧಿಗೆ ಕೇಂದ್ರದಿಂದ ಹಣ ತಂದಿದ್ದೇವೆ. ಕೇಂದ್ರದಿಂದ ಹಣ ತರಲು ರಾಜ್ಯದ ಸಂಸದರ ಪಾತ್ರ ಮುಖ್ಯವಾಗಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ, ಸಬ್ ಅರ್ಬನ್ ಸೇರಿದಂತೆ ಎಲ್ಲ ಯೋಜನೆಗಳಿಗೆ ಕೇಂದ್ರದಿಂದ ಹಣ ಬಂದಿದೆ. ಈ ವಿಶ್ವದಲ್ಲಿ ಅಗ್ರನಾಯಕತ್ವ ನೀಡುವ ಕೆಲಸ ಮೋದಿ ನೇತೃತ್ವದಲ್ಲಿ ನಡೆಯುತ್ತಿದೆ. ರಾಜ್ಯ ಸರ್ಕಾರದಿಂದ ರೈತ ವಿದ್ಯಾನಿಧಿ, ಜೊತೆಗೆ ರೈತ ಕೂಲಿ ಕಾರ್ಮಿಕರು, ಮೀನುಗಾರರು, ನೇಕಾರರ ಮಕ್ಕಳಿಗೂ ನೀಡುತ್ತಿದ್ದೇವೆ. ಸ್ವನಿಧಿ ಯೋಜನೆ ಅಡಿ ಮಹಿಳೆಯರಿಗೆ ಸಾಲ, ಯುವಕರಿಗೆ ಸ್ವಯಂ ಉದ್ಯೋಗ ನೀಡಲು ಯೋಜನೆ, ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್, ಮಹಿಳೆಯರಿಗೆ ಉಚಿತ ಬಸ್ ಪಾಸ್, ಕೃಷಿ ಕಾರ್ಮಿಕರಿಗೆ ಪ್ರತಿ ತಿಂಗಳು ಒಂದು ಸಾವಿರ ರೂ. ನೀಡುತ್ತಿದ್ದು, ಇವೆಲ್ಲವೂ ರಾಜ್ಯವನ್ನು ಪ್ರಗತಿಯತ್ತ ಮುನ್ನಡೆಸಲಿದೆ ಎಂದರು.

ಅಕ್ರಮ ಆಸ್ತಿ ಗಳಿಕೆ ಕೇಸ್: CBIನಿಂದ ಡಿಕೆಶಿಗೆ ಇನ್ನೂ ಒಂದು ವಾರ ರಿಲೀಫ್

ಬೆಂಗಳೂರು, ಫೆ.24– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಕೋರ್ಟ್ ತಡೆಯಾಜ್ಞೆ ನೀಡಿದ್ದು, ಇನ್ನೂ ಒಂದು ವಾರ ರಿಲೀಫ್ ಕೊಟ್ಟಿದೆ.



ಡಿಕೆಶಿ ವಿರುದ್ಧ ಸಿಬಿಐ ನಡೆಸುತ್ತಿದ್ದ ತನಿಖೆಗೆ ಈ ಹಿಂದೆ ಕೋರ್ಟ್ ತಡೆ ನೀಡಿತ್ತು. ಅಲ್ಲದೇ ಫೆಬ್ರವರಿ 24ಕ್ಕೆ ಸಿಬಿಐಗೆ ತನಿಖಾ ಪ್ರಗತಿ ವರದಿ ನೀಡುವಂತೆ ಸೂಚಿಸಿತ್ತು. ಈ ಸಂಬಂಧ ಶುಕ್ರವಾರ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಡಿಕೆಶಿಗೆ ಇನ್ನೂ ಒಂದು ವಾರ ಬಿಡುವು ನೀಡಿದೆ.

ಸಿಬಿಐ ಪರ ವಕೀಲರು ತನಿಖಾ ಪ್ರಗತಿ ವರದಿ ಸಲ್ಲಿಸಿದ ಬಳಿಕ ಮಾರ್ಚ್ 3ಕ್ಕೆ ವಿಚಾರಣೆ ಮುಂದೂಡಿತು. ಈ ವೇಳೆ ಮಧ್ಯಂತರ ತಡೆ ಆದೇಶದಲ್ಲಿ ಮಾರ್ಪಾಡು ಮಾಡುವಂತೆ ಸಿಬಿಐ ಮನವಿ ಮಾಡಿತು. ಅದಕ್ಕೆ ಅನುಮತಿ ಕೊಡದ ಹೈಕೋರ್ಟ್ ಮುಂದಿನ ವಿಚಾರಣೆ (ಮಾ.3) ತನಕ ಯಥಾಸ್ಥಿತಿಯಲ್ಲಿ ಮುಂದುವರಿಯುವಂತೆ ಸೂಚಿಸಿತು. ಈ ಹಿಂದೆ ಡಿಕೆಶಿ 'ತಾನೊಬ್ಬ ಕೃಷಿಕ, ಕೃಷಿಯಿಂದಲೇ ನನಗೆ ಆದಾಯ ಬರುತ್ತಿದೆ ಎಂಬ ಹೇಳಿಕೆ ನೀಡಿದ ಬಳಿಕ ಆಸ್ತಿಯನ್ನು ಸಿಬಿಐ ಮೌಲ್ಯಮಾಪನ ಮಾಡಿತ್ತು. ಡಿಕೆಶಿಯ ಆದಾಯದ ಮೂಲವನ್ನು ಬೆನ್ನತ್ತಿದ್ದ ಸಿಬಿಐ, ಯಾವ ಬೆಳೆ ಬೆಳೆಯುತ್ತಾರೆ ತೋಟದಿಂದ ಎಷ್ಟು ವರ್ಷದಿಂದ ಫಲ ಬರುತ್ತಿದೆ ಎಷ್ಟು ಲಾಭ ಬರುತ್ತಿದೆ ಎಷ್ಟು ವರ್ಷದಿಂದ ವಾಣಿಜ್ಯ ಬೆಳೆ ಬೆಳೆಯುತ್ತಿದ್ದಾರೆ ಜಮೀನು ಖರೀದಿಸಿದ್ದು ಯಾವಾಗ ಎಂಬ ಬಗ್ಗೆ ದಾಖಲೆಗಳನ್ನು ವಶಕ್ಕೆ ಪಡೆದಿತ್ತು. ಅಷ್ಟೇ ಅಲ್ಲದೇ ಕೃಷಿ ಭೂಮಿಗೆ ಸಂಬಂಧಿಸಿದ ಕಳೆದ 10 ವರ್ಷದ ಪಹಣಿಯನ್ನು ಪಡೆಯಲಾಗಿತ್ತು.

ಆಸ್ತಿ ವಿವಾದ: ಭಟ್ಕಳದಲ್ಲಿ ಒಂದೇ ಕುಟುಂಬದ ನಾಲ್ವರ ಬರ್ಬರ ಹತ್ಯೆ

ಉತ್ತರ ಕನ್ನಡ, ಫೆ.24– ಆಸ್ತಿ ವಿವಾದ ಹಿನ್ನೆಲೆಯಲ್ಲಿ ಒಂದೇ ಕುಟುಂಬದ ನಾಲ್ವರನ್ನು ಬರ್ಬರವಾಗಿ ಹತ್ಯೆ ಮಾಡಿರುವ ಅಮಾನವೀಯ ಘಟನೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಹಾಡವಳ್ಳಿಯಲ್ಲಿ ನಡೆದಿದೆ.

ಹತ್ಯೆಯಾದವರನ್ನು ಹಾಡವಳ್ಳಿ ನಿವಾಸಿ ಶಂಭು ಭಟ್(65), ಪತ್ನಿ ಮಾದೇವಿ ಭಟ್ (40) ಮಗ ರಾಜೀವ್ ಭಟ್(34) ಸೊಸೆ ಕುಸುಮಾ ಭಟ್(30) ಎಂದು ಗುರುತಿಸಲಾಗಿದೆ. ಒಂದೇ ಕುಟುಂಬದ ಈ ನಾಲ್ವರನ್ನು ಕತ್ತಿಯಲ್ಲಿ ಕಡಿದು ಭೀಕರವಾಗಿ ಕೊಲೆ ಮಾಡಲಾಗಿದೆ. ಶವಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ಸ್ಥಳೀಯರು ಬೆಚ್ಚಿಬಿದ್ದಿದ್ದಾರೆ.

ಆಸ್ತಿ ವಿಚಾರಕ್ಕೆ ಈ ಸಾಮೂಹಿಕ ಹತ್ಯೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಆದರೆ ಕೊಲೆ ಮಾಡಿದವರು ಯಾರು, ಹತ್ಯೆಗೆ ನಿಖರ ಕಾರಣ ಏನು ಎನ್ನುವುದು ಇನ್ನೂ ತಿಳಿದು ಬಂದಿಲ್ಲ. ವಿಷಯ ತಿಳಿದು ಸ್ಥಳಕ್ಕೆ ಭಟ್ಕಳ ಗ್ರಾಮೀಣ ಠಾಣಾ ಪೊಲೀಸರು ದೌಡಾಯಿಸಿದ್ದು, ತನಿಖೆ ನಡೆಸಿದ್ದಾರೆ.

ಯಡಿಯೂರಪ್ಪ ನಿರ್ಧಾರಕ್ಕೆ ಎಸ್.ಎಂ.ಕೃಷ್ಣ ಸ್ವಾಗತ

ಬೆಂಗಳೂರು, ಫೆ.24– ಯಾವುದೇ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ





ಎಂದು ಘೋಷಣೆ ಮಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನಿರ್ಧಾರವನ್ನು ಸ್ವಾಗತಿಸಿದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ನಿಮ್ಮ ನಡೆ ಕರ್ನಾಟಕದ ಯುವ ಜನಾಂಗಕ್ಕೆ ದಾರಿದೀಪವಾಗಲಿ ಎಂದು ಹೇಳಿದ್ದಾರೆ.

ಯಡಿಯೂರಪ್ಪ ಅವರಿಗೆ ಪತ್ರ ಬರೆದ ಎಸ್.ಎಂ.ಕೃಷ್ಣ, ನಾಲ್ಕು ದಶಕಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಹಲವು ಏಳುಬೀಳುಗಳನ್ನು ಕಂಡು ರೈತಾಪಿ ವರ್ಗದ ಪರವಾಗಿ ಅಹರ್ನಿಶಿ ಹೋರಾಟ ನಡೆಸಿದ ತಾವು ಚುನಾವಣಾ ರಾಜಕೀಯದಿಂದ ದೂರ ಸರಿದು ಯುವ ಸಮೂಹಕ್ಕೆ ಮಾರ್ಗದರ್ಶಕರಾಗಲು ನಿಶ್ಚಯಿಸಿರುವ ತಮ್ಮ ನಿರ್ಧಾರವನ್ನು ಸ್ವಾಗತಿಸುತ್ತೇನೆ. ರಾಜ್ಯದ ಜನರಿಗೆ ನಿಮ್ಮ ಸೇವೆ ಬೇರೆ ರೂಪದಲ್ಲಿ ದೊರೆಯಲಿ. ನಿಮ್ಮ ನಡೆ ಕರ್ನಾಟಕದ ಯುವ ಜನಾಂಗಕ್ಕೆ ದಾರಿದೀಪವಾಗಲಿ ಎಂದು ಹೇಳಿದ್ದಾರೆ. 1983ರಿಂದ ಶಾಸನ ಸಭೆಯ ಸದಸ್ಯರಾಗಿ ಆಯ್ಕೆಯಾಗಿರುವ ತಮ್ಮ ಸಿದ್ಧಾಂತಕ್ಕೆ ಬದ್ಧರಾಗಿ ಹಗಲಿರುಳು ಹೋರಾಡಿ ಬಿಜೆಪಿ ಪಕ್ಷವನ್ನು ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ತರುವಲ್ಲಿ ತಮ್ಮ ಪಾತ್ರ ಹಿರಿದಾದ್ದು. ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ ಪ್ರತಿ ಹಂತದಲ್ಲೂ ಹೋರಾಟವೇ ನಿಮ್ಮ ಜೀವನದ ಮಂತ್ರವಾಗಿಸಿಕೊಂಡು ರಾಜ್ಯದ ಎಲ್ಲಾ ಸಮುದಾಯಗಳ ಏಳಿಗೆಗೆ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದು ಜನಮಾನಸದಲ್ಲಿ ಅಜರಾಮರಾಗಿದ್ದೀರಿ. ಇಂದು ಚುನಾವಣಾ ರಾಜಕೀಯದಿಂದ ವಿರಮಿಸುತ್ತಿರುವ ತಮಗೆ ಭಗವಂತ ಆಯಸ್ಸು ಆರೋಗ್ಯ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ನಿಮ್ಮ ಸೇವೆ ಬೇರೆ ರೂಪದಲ್ಲಿ ರಾಜ್ಯದ ಜನರಿಗೆ ದೊರೆತು ಸಮಾಜದ ಶ್ರೇಯೋಭಿವೃದ್ಧಿಗೆ ಅನುವಾಗಲಿ, ತಮ್ಮ ಮುಂದಿನ ನಡೆ ಯುವಜನಾಂಗಕ್ಕೆ ದಾರಿದೀಪವಾಗಲಿ ಎಂದು ಎಸ್.ಎಂ.ಕೃಷ್ಣ ಅವರು ಹಾರೈಸಿದ್ದಾರೆ.

ಉಪೇಂದ್ರ 'ಪ್ರಜಾಕೀಯ' ಪಕ್ಷದ ಅಧಿಕೃತ ಚಿಹ್ನೆ 'ಆಟೋ'

ಬೆಂಗಳೂರು, ಫೆ.24– ಕರ್ನಾಟಕ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದು,



ಎಲ್ಲ ರಾಜಕೀಯ ಪಕ್ಷಗಳು ಅಬ್ಬರದ ಪ್ರಚಾರವನ್ನು ನಡೆಸುತ್ತಿವೆ. ಈ ನಡುವೆ ಕನ್ನಡದ ರಿಯಲ್ ಸ್ಟಾರ್ ಉಪೇಂದ್ರ ಅವರ ಉತ್ತಮ ಪ್ರಜಾಕೀಯ ಪಕ್ಷಕ್ಕೆ ಆಟೋ ರಿಕ್ಷಾ ಚಿಹ್ನೆ ಲಭಿಸಿದೆ. ಈ ಕುರಿತು ಚುನಾವಣಾ ಆಯೋಗ ಆದೇಶ ಹೊರಡಿಸಿದ್ದು, ಚುನಾವಣಾ ಆಯೋಗದ ಆದೇಶವನ್ನು ನಟ ಹಾಗೂ ರಾಜ ಕಾರಣಿ ಉಪೇಂದ್ರ ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಉತ್ತಮ ಪ್ರಜಾಕೀಯ ಪಕ್ಷಕ್ಕೆ ಈ ಬಾರಿಯ 2023ರ ವಿಧಾನಸಭಾ ಚುನಾವಣೆಗೆ ಕಾಮನ್ ಸಿಂಬಲ್ "ಆಟೋ ರಿಕ್ಷಾ" ಚಿಹ್ನೆ ಲಭಿಸಿದೆ. ಎಲ್ಲರಿಗೂ ಶುಭಾಶಯಗಳು ಎಂದು ಉಪೇಂದ್ರ ಟ್ವೀಟ್ ಮೂಲಕ ಹೇಳಿದ್ದಾರೆ. ಇದುವರೆಗೂ ಉತ್ತಮ ಪ್ರಜಾಕೀಯ ಪಕ್ಷಕ್ಕೆ ಯಾವುದೇ ಅಧಿಕೃತವಾದ ಚಿಹ್ನೆ ಇರಲಿಲ್ಲ. ಇದೀಗ ಕೇಂದ್ರ ಚುನಾವಣೆ ಆಯೋಗ ಪಕ್ಷಕ್ಕೆ ಅಧಿಕೃತವಾಗಿ ಚಿಹ್ನೆ ನೀಡಿದೆ.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ: ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು, ಫೆ.24– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದ ಎಸ್‌ಸಿ/ಎಸ್‌ಟಿ ಕಾಯ್ದೆ 2023ರ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್)ಯ ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್, ಈ ಸಂಬಂಧ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ನಗರದ ಕೆಎಲ್‌ಇ ಕಾನೂನು ಕಾಲೇಜಿನ ವಿದ್ಯಾರ್ಥಿ ಮಹೇಶ್ ಎಂಬುವರು ಸಲ್ಲಿಸಿದ್ದ ಪಿಐಎಲ್ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ಪೀಠ, ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿದೆ. ಮೀಸಲಾತಿ ಹೆಚ್ಚಳ ಮಾಡಿರುವ ಕ್ರಮ ಸಂವಿಧಾನದ ಪರಿಚ್ಛೇದ 14, 15 ಮತ್ತು 16 ಅನ್ನು ಉಲ್ಲಂಘಿಸಿದೆ. ಅಲ್ಲದೇ ಇಂದಿರಾ ಸಹಾನಿ ಪ್ರಕರಣದಲ್ಲಿ ಶೇ. 50ರಷ್ಟು ಮೀಸಲಾತಿ ಮೀರಬಾರದು ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ತದ್ವಿರುದ್ಧವಾಗಿದೆ ಎಂದು ಅರ್ಜಿದಾರರ ಪರ ವಕೀಲರು ವಾದಿಸಿದ್ದಾರೆ. ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿರುವ ಕ್ರಮ ಸಂವಿಧಾನ ಬಾಹಿರ ಎಂದು ಘೋಷಿಸಬೇಕು ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಅಶ್ವಿನಿ ಕಲ್ಯಾಣ ಮಂಟಪ
ಶ್ರೀರಾಂಪುರ 2ನೇ ಹಂತ, ಮಾನಂದವಾಡಿ ರಸ್ತೆ, ಮೈಸೂರು
ಛತ್ರ ಬಾಡಿಗೆಗೆ ದೊರೆಯುತ್ತದೆ
ಅತ್ಯಾಕರ್ಷಕವಾದ ಕಲ್ಯಾಣ ಮಂಟಪ, ವಿಶಾಲವಾದ ಕಾರ್ ಪಾರ್ಕಿಂಗ್, ಎಲ್ಲಾ ಸೌಲಭ್ಯಗಳೊಂದಿಗೆ ಮದುವೆ, ರಿಸೆಪ್ಷನ್, ಉಪನಯನ, ಹಸೆಮಣೆ ಶಾಸ್ತ್ರ ಹಾಗೂ ಇತರೆ ಶುಭ ಸಮಾರಂಭಗಳಿಗೆ ರಿಯಾತಿ ದರದಲ್ಲಿ ದೊರೆಯುತ್ತದೆ. ಇಂದೇ ಬೇಟಿ ಕೊಡಿ.. ರೂಂಗಳು ಬಾಡಿಗೆಗೆ ದೊರೆಯುತ್ತದೆ.
9902647554, 9448500601

ಬಾಡಿಗೆಗೆ
40x60 ವಿಸ್ತೀರ್ಣ ಇರುವ ನೆಲ ಮತ್ತು 1st Floor ಒಳಗೊಂಡಂತೆ ಇರುವ 4 Bed room ಉಳ್ಳ, East Facing ಇರುವ ಮನೆಯು ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ.
9740155644

ಬೇಕಾಗಿದ್ದಾರೆ
ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕಲ್ ಎರಡು ಕೆಲಸಗಳನ್ನು ಗೊತ್ತಿರುವ, ಕನಿಷ್ಠ ಮೂರು ವರ್ಷಗಳ ಅನುಭವವಿರುವ ವ್ಯಕ್ತಿಯು ಬೇಕಾಗಿದ್ದಾರೆ. ವಿವರಗಳಿಗೆ ಸಂಪರ್ಕಿಸಿ: ಶ್ರೀ ವಾಸವಿ ಶಾಂತಿಧಾಮ, ಆಲನಹಳ್ಳಿ, ಮೈಸೂರು.
9845843637

ಮನೆ ಭೋಗ್ಯಕ್ಕೆ / ಮಾರಾಟಕ್ಕಿದೆ
25x30 ಅಳತೆಯ ಪೂರ್ವ ದಿಕ್ಕಿನ ಕಾರ್ನರ್, ಇಂಡಿಪೆಂಡೆಂಟ್ ಮನೆ ಡೂಪ್ಲೆಕ್ಸ್ 3+1=4, ಬೆಡ್ ರೂಂವುಳ್ಳ ಮನೆ. # 86, 'ಎ' ಬ್ಲಾಕ್, 3ನೇ ಕ್ರಾಸ್, 3ನೇ ಹಂತ, ಕನಕದಾಸನಗರ, (ದಟ್ಟಗಳ್ಳಿ) ಮೈಸೂರು.
9611881603

ನಿಮ್ಮ ಹೊಲಿಗೆ ಯಂತ್ರ ಕೆಟ್ಟಿದೆಯೇ?

ನಮ್ಮಲ್ಲಿ ಎಲ್ಲಾ ತರಹದ ಹೊಲಿಗೆ ಯಂತ್ರಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. Home Service also available ಇಂದೇ ಸಂಪರ್ಕಿಸಿ:
ಗಗನದಿ ಇಂಟರ್ ನ್ಯಾಷನಲ್: #22/2, ಚಂದ್ರಗುಪ್ತ ರಸ್ತೆ, ಸಬರ್ಬ್ ಬಸ್ ಸ್ಟಾಂಡ್ ಹತ್ತಿರ, ಮೈಸೂರು
6360737581 / 9620486665
0821-2591111

BOOKING START
ಕೇಶವಮೂರ್ತಿ ಲೇಔಟ್
ಶ್ರೀನಗರ ರೈಲ್ವೆ ಗೇಟ್ ಹಿಂಭಾಗದ ದಡದಹಳ್ಳಿ ರಸ್ತೆ, ವಿಮಾನ ನಗರ (ಸರ್ಕಾರಿ ನೌಕರರ ಗೃಹ ನಿರ್ಮಾಣ) ಹತ್ತಿರ, ಗೂರೂರು, ಕಸಬಾ ಹೋಬಳಿ, ಮೈಸೂರು ತಾಲ್ಲೂಕು.
just 3.5 KM jp nagar ringroad
30x40, 30x50
MUDA APPROVED
SK DEVELOPER & PROPERTIES
Office: Teachers layout opp. JP nagar Ringroad, Mysore.
8453531221

SITES FOR SALE
* 40x60 site for sale in Karle Habitat, near Dattagalli.
* 20x30, 30x40 sites available. *Contact:*
Mob: 9740088990

ಬೇಕಾಗಿದ್ದಾರೆ
ವಿಂಟೇಜ್ ಇನ್ ಫ್ಯಾಮಿಲಿ ರೆಸ್ಟೋರೆಂಟ್ ಮೂಗೂರು ಕ್ರಾಸ್‌ನಲ್ಲಿ ಇರುವ ಹೋಟೆಲ್‌ಗೆ ಸಪ್ಲೈಯರ್‌ಗಳು ಕ್ಯಾಪ್ಟನ್ ಬೇಕಾಗಿದ್ದಾರೆ. ಸಂಪರ್ಕಿಸಿ.
7019084482

WANTED
Sales boy and Womens
Raveena fancy Store
1063/11, 1st Main
3rd Cross,
Vidyaranyapuram,
Mysore
9964664993

ಬೇಕಾಗಿದ್ದಾರೆ
ಮಂಡ್ಯ ಜಿಲ್ಲೆಯ ಪ್ರತಿಷ್ಠಿತ ಶಾಲಾ / ಕಾಲೇಜಿನ ವಿದ್ಯಾರ್ಥಿ ನಿಲಯಕ್ಕೆ ಪುರುಷ ಹಾಗೂ ಮಹಿಳಾ ನಿಲಯಪಾಲಕರು (HOSTEL WARDEN) ಬೇಕಾಗಿದ್ದಾರೆ.
ವಿದ್ಯಾರ್ಹತೆ: ಯಾವುದೇ ಪದವಿ ಶಿಕ್ಷಣ ಪಡೆದಿರಬೇಕು ಅಥವಾ ನಿಲಯಪಾಲಕರಾಗಿ 2-3 ವರುಷ ಅನುಭವ ಹೊಂದಿರಬೇಕು.
ಸಂಪರ್ಕಿಸಿ: 9108481695
kindly email your resume within 10th MARCH 2023
recruitmentninteen@gmail.com

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಗಾಂಧಿ ಸರ್ಕಲ್ ಸಿಟಿ ಬಸ್ ಸ್ಟಾಂಡ್ ಹತ್ತಿರ
9686667762
9986731199

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸೈಟುಗಳು ಮಾರಾಟಕ್ಕಿವೆ
ವರುಣ ಹತ್ತಿರ 30X40 ಅಳತೆಯ ನಿವೇಶನಗಳು ಮಾರಾಟಕ್ಕಿವೆ.
80% ಬ್ಯಾಂಕ್ ಲೋನ್ ದೊರೆಯುತ್ತದೆ.
Rs. 18 Lakh Onwards
Contact: 9945111044

HOUSE FOR SALE
45x60, S/F, G/F, 2BHK, 1st Floor 3BHK with Car Parking & Solar, Alanahalli Extension, T.Narasipura Main Road, Mysore. Brokers Excuse.
9538756306

ಬೇಕಾಗಿದ್ದಾರೆ
Ecom Express Courier ನಲ್ಲಿ Delivery ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ಥಳ: ಮೈಸೂರು ಗುಂಡ್ಲುಪೇಟೆಯಲ್ಲಿ, ಆಕರ್ಷಕ ಸಂಬಳ ಹಾಗೂ EPF + ESI ದೊರೆಯುತ್ತದೆ. ಕೂಡಲೇ ಸಂಪರ್ಕಿಸಿ:
9686844533 / 6362399823
7022739849

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಬೇಕಾಗಿದ್ದಾರೆ
ಶ್ರೀ ರಾಯಲ್ ವಾರಿಯರ್ ಬೇಕರಿ ಕೌಂಟರ್‌ಗೆ ಸೇಲ್ಸ್‌ಮ್ಯಾನ್‌ಗಳು ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ಊಟ, ವಸತಿ ಉಚಿತವಾಗಿ ದೊರಕುತ್ತದೆ ಈಗಲೇ ಸಂಪರ್ಕಿಸಿ:
9019876412
8431458760

ಸೈಟುಗಳು ಮಾರಾಟಕ್ಕಿವೆ
20x30, 30x40, 40x60
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್
8050345574

ತಕ್ಷಣ ಬೇಕಾಗಿದ್ದಾರೆ
ಕಡಕೊಳ, ನಂಜನಗೂಡು ಟಿವಿಎಸ್ ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಬಳ: 15,500/- 8hour, 26 days, ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ: 45 ವರ್ಷದೊಳಗೆ, ESI, PF ಮತ್ತು ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819
9538567819

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED TVs
Doorstep Service
Mob: 9886226672

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಸೀರೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವ ಹೊಂದಿರುವ ಹುಡುಗ / ಹುಡುಗಿ ಬೇಕಾಗಿದ್ದಾರೆ.
8296695765
7996193952

ಬೇಕಾಗಿದೆ
ಮೈಸೂರಿನಲ್ಲಿ ಪೆಟ್ರೋಲ್ ಬಂಕ್ ಮಾಡಲು 10,000 Sq.ft ನಿವೇಶನ ಬಾಡಿಗೆಗೆ ಬೇಕಾಗಿದೆ.
9902754149

ಓಂ ಶ್ರೀ ಪ್ರತ್ಯಂಗಿರ ದೇವಿ ಜ್ಯೋತಿಷ್ಯ ಮಂದಿರ
ದೈವಜ್ಞ ಪಂಡಿತ್ ಶ್ರೀ ಚಂದ್ರಪ್ಪ ಗುರೂಜಿ
ನಿಮ್ಮ ಸಮಸ್ಯೆಗಳಾದ:- ವಿದ್ಯೆ, ಉದ್ಯೋಗ, ಮದುವೆ ಯೋಗ, ಸಂತಾನ ಭಾಗ್ಯ, ವ್ಯಾಪಾರದಲ್ಲಿ ತೊಂದರೆ, ಹಣಕಾಸಿನ ಸಮಸ್ಯೆ, ಪ್ರೀತಿ ಪ್ರೇಮ ವಿಚಾರ, ವಾಮಚಾರ ದೋಷ, ಶತ್ರುನಾಶ, ಭೂಮಿ ವಿಚಾರ, ಇನ್ನೂ ಯಾವುದೇ ಸಮಸ್ಯೆ ಇದ್ದರೂ ಇವರನ್ನೊಮ್ಮೆ ಸಂಪರ್ಕಿಸಿ. ವಿಳಾಸ: ಕ್ಯಾತನಹಳ್ಳಿ ರಸ್ತೆ, ಅಹಲ್ಯಾದೇವಿ ದೇವಸ್ಥಾನದ ಪಕ್ಕ ಆರತಿ ಉಕ್ಕಡ
9686648422

ಬೋಳು ತಲೆಯ ಸಮಸ್ಯೆಯೇ?


ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಲಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:- ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

AMAZE


SUNZONE SOLAR SYSTEM
VM Double Road, Kuvempunagar, Mysuru
9845175443

26–02–23 ಭಾನುವಾರ
ಉಚಿತ ಆರೋಗ್ಯ ತಪಾಸಣಾ ಶಿಬಿರ
ಸ್ಥಳ: ಶ್ರೀ ಲಕ್ಷ್ಮೀದೇವಿ ಪಾಲಿಕ್ಲಿನಿಕ್, ಕೆ.ಜಿ.ಕೊಪ್ಪಲು ಸರ್ಕಲ್, ರೈಲ್ವೆ ಅಂಡರ್ ಬ್ರಿಡ್ಜ್, ಮೈಸೂರು. ಸಮಯ : ಬೆಳಿಗ್ಗೆ 10 ರಿಂದ 3 ಗಂಟೆಯವರೆಗೆ.
ಕನ್ಸಲ್ಟ್ : ಡಾ|| ಸ್ನೇಹ.ಹೆಚ್
8296086753

ಬೇಕಾಗಿದ್ದಾರೆ
ಮಿನರಲ್ ವಾಟರ್ ಸಪ್ಲೈಗೆ 3-W ಆಟೋ ಡ್ರೈವರ್, ಉತ್ತಮ ಸಂಬಳ ಹಾಗೂ ಕಮಿಷನ್ ಇರುತ್ತದೆ. ಆಸಕ್ತಿಉಳ್ಳವರು ಸಂಪರ್ಕಿಸಿ:
9611073939

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ ಕರೆಮಾಡಿ ಬನ್ನಿ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟಾಂಡ್, ಮೈಸೂರು.

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ.
9611072812
6361276795

ಪ್ರವಾಸ
11–3–23 ರಿಂದ ಅಸ್ಸಾಂ, ಮೇಘಾಲಯ ರೂ. 38,500/–.
30–4–23 ರಿಂದ ಪುರಿ ಜಗನ್ನಾಥ್ ಜಾರ್ಖಂಡ್, ವೈದ್ಯನಾಥ, ನೇಪಾಳ, ಮುಕ್ತಿನಾಥ, ಜನಕಪುರ.
ಶ್ರೀ ರಾಮ್ ಟೂರ್, ಬೆಂಗಳೂರು
Mob: 9108933383

SITES FOR SALE
Near MIT College, BMICAPA Approval Good Appreciation Prospect. Contact:
8197392458
6381779015

ಮನೆ ಮಾರಾಟಕ್ಕಿದೆ
ಅಳತೆ 30x40 ಎರಡನೇ ಮಹಡಿ (2nd Floor) ಯಲ್ಲಿ ಶಾರದಾದೇವಿನಗರ, ಮೈಸೂರು. MUDA Apartments. ಸಂಪರ್ಕಿಸಿ.
9844439507

IMMEDIATE JOB OPPORTUNITIES
in Mysore and Bangalore for 10th, 12th and Graduate students. No night shift ! Lunch provided. Interested call
8660999072, 6364117606

ಜಮೀನು ಬೇಕಾಗಿದೆ
ಮೈಸೂರಿನ ಸುತ್ತ 25 ರಿಂದ 30 ಕಿ.ಮೀ ಒಳಗೆ ತೋಟ ಮಾಡಲು 1 ರಿಂದ 4 ಎಕರೆ ಜಮೀನು ಪತ್ರ ಪಕ್ಕಾ ಇರುವವರು ಸಂಪರ್ಕಿಸಿ:

1) 1 ಎಕರೆ ಆದರೂ	ಬೇರೆ ಬೇರೆ
2) 2 ಎಕರೆ ಆದರೂ	ಆದರೂ
3) 3 ಎಕರೆ ಆದರೂ	ಎಲ್ಲಾ ಒಟ್ಟಿಗೆ
4) 4 ಎಕರೆ ಆದರೂ	ಇದ್ದರು ಆಗುತ್ತೆ.

Mob: 9591327746

ಕಳೆದಿದೆ
ಮೈಸೂರು ನಗರದ ವಿಜಯನಗರ 1ನೇ ಹಂತದ ಬಡಾವಣೆಯ 2ನೇ ಮುಖ್ಯ ರಸ್ತೆ, 7ನೇ ಅಡ್ಡರಸ್ತೆಯಲ್ಲಿರುವ ಮನೆ ನಂಬರ್ 164 ಮಂಜೂರಾತಿ ಪತ್ರ ಕಳೆದಿದೆ. ಯಾರಿಗಾದರೂ ಸಿಕ್ಕಿದಲ್ಲಿ ಈ ಕೆಳಕಂಡ ನಂಬರ್‌ನ್ನು ಸಂಪರ್ಕಿಸಿ:
Mob: 9480289005

WANTED
Need candidates for different positions who have experienced in Auto Cad, Tally, MS Office, Site Supervisors with Diploma. Freshers can also apply.
Access2 Future Signal & Telecom
acess2future2019@gmail.com
Mob: 6300033913

ಬಂಧನ ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಡಾಕ್ಟರ್, ಇಂಜಿನಿಯರ್ ಮತ್ತು ಎಲ್ಲಾ ವಿದ್ಯಾವಂತ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ:
ಡಾ. ಗುರೂಜಿ, ಮೈಸೂರು
9448229184, 7899625268
www.bhandhana.com

ಮುಡಾ ಸೈಟ್ ಮಾರಾಟಕ್ಕಿದೆ
ಜ್ಞಾನಭಾರತಿ ಲೇಔಟ್ 2ನೇ ಹಂತ, ದಡದಹಳ್ಳಿ, ಈಸ್ಟ್ ಫೇಸಿಂಗ್, 24 ಲಕ್ಷ
30x40
9342123373

ರನ್ನಿಂಗ್‌ನಲ್ಲಿ ಇರುವ ಹೋಟೆಲ್ ಮಾರಾಟಕ್ಕಿದೆ
ಹೋಟೆಲ್ ಅಡುಗೆಗೆ ಬೇಕಾಗಿರುವ ಪದಾರ್ಥಗಳು ಹಾಗೂ ಸ್ಟೀಲ್ ದೋಸೆ ಕಲ್ಲು ಇತರೆ ಸಾಮಾಗ್ರಿಗಳು ಇವೆ. ಕುವೆಂಪುನಗರ ಬುಲೆಟ್ ಶೋರೂಂ ಹತ್ತಿರ. ಸಂಪರ್ಕಿಸಿ:
9620137532 / 9632192779

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ). ಸಂಬಳ 12000 ದಿಂದ 18000. (ESI, PF ಸೌಲಭ್ಯ ಇರುತ್ತದೆ).
7760043596, 7892480649

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ವಿವಿಧ ಕೆಲಸಗಳಿಗೆ ಜನ ಬೇಕಾಗಿದ್ದಾರೆ.
Mob: 8951265521, 7349557406, 8951824227

SITES FOR SALE
Rs. 10 Lakh onwards
DTCP approved, ready for registration.
Mob: 9972033339

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹೆಂಗಸರು / ಪುರುಷರು ಬೇಕಾಗಿದ್ದಾರೆ. ಸಂಬಳ: ರೂ.12,000/–
9886430901

ದರ್ಶನ್ ಮ್ಯಾಟ್ರಿಮೋನಿಯಲ್
ಒಕ್ಕಲಿಗ, ಮೊದಲಿಯಾರ್, ವಿಶ್ವಕರ್ಮ ಆಚಾರಿ, ಮರಾಠಿ, ನಾಯಕ ಹಾಗೂ 2ನೇ ಮದುವೆಗೆ ಸಂಪರ್ಕಿಸಿ.
9972355161
9740797851
ವಿನಾಯಕನಗರ, ಮೈಸೂರು

ಮಾರಾಟಕ್ಕಿದೆ
ಮುಡಾ ನಿವೇಶನ ಮತ್ತು ಅಪಾರ್ಟ್‌ಮೆಂಟ್ ಮಾರಾಟಕ್ಕಿದೆ
20x30, 30x40
ದಲ್ಲಾಳಿಗಳೇ ಕ್ಷಮಿಸಿ. ಡೈರೆಕ್ಟ್ ಡೆವಲಪ್ಪರ್ಸ್
9060507585, 7795081234

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಣ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

FOR SALE
1) 30x40, 13 Lakhs sites in Defence Apartment, Near Kote Road.
2) 28 guntas land in Varkodu.
3) Bannur Road commercial 50x80.
4) 17x60, 3 BHK Kamakshi Hospital, near Saraswathipuram.
5) 30x40 Duplex house, Srirampura.
6) 40x60, N/E Corner Aravind Nagar.
9035990359, 9538690359

Cellar for Rent
A/C (1500 sq.ft. Ground Floor) with all mirror wall also table chair & changing room for all yoga class / studio / Gym available for rent. (At Gokulam 3rd Stage).
Mob: 9945419648

ಬೇಕಾಗಿದ್ದಾರೆ
ಕೆಲಸ ಹುಡುಕುತ್ತಿರುವಿರೇ....?
ಮನೆಯಿಂದಲೇ ಕೆಲಸ ಮಾಡಿ ಉತ್ತಮ ಸಂಪಾದನೆ ಗಳಿಸಿ ಪಾರ್ಟ್ / ಫುಲ್‌ಟೈಮ್. ನೀವು ಮಾಡುತ್ತಿರುವ ಕೆಲಸಕ್ಕೆ ತೊಂದರೆ ಆಗದಂತೆ ಮಾಡಬಹುದು.
* ವ್ಯವಸ್ಥಾಪಕರು, * ವೃತ್ತಿ ನಿರತರು / ನಿವೃತ್ತರು, * ಗೃಹಿಣಿಯರು, * ಖಾಸಗಿ / ಸರ್ಕಾರಿ ನೌಕರರು, * ವಿದ್ಯಾರ್ಥಿಗಳು / ನಿರುದ್ಯೋಗಿಗಳು. ಒಂದು ಕರೆ ನಿಮ್ಮ ಜೀವನ ಶೈಲಿಯನ್ನು ಬದಲಿಸಬಹುದು. ಯೋಚಿಸಿ.
9108908688 / 9742600540

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಅಕೌಂಟೆಂಟ್ ಬೇಕಾಗಿದ್ದಾರೆ. B.Com / M.Com ಹುಡುಗಿಯರಿಗೆ ಮಾತ್ರ
7899754149

ಟೆಲಿಕಾಮ್ ಲೇಔಟ್ 30x40 ಸೈಟು N/F @ Rs. 25 ಲಕ್ಷ
ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು
9538583377

ಬೇಕಾಗಿದ್ದಾರೆ
ಹೆಬ್ಬಾಳ್, ಮೇಟಗಳ್ಳಿ, ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು, ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: 8th to 2nd PUC ವರೆಗೆ, ESI & PF, ವಸತಿ ಸೌಲಭ್ಯವಿರುತ್ತದೆ. ಸಂಬಳ: 11,400 ರಿಂದ 16,000 ರವರೆಗೆ. Driver ಬೇಕಾಗಿದ್ದಾರೆ.
8951869646
9902645646

SITES AVAILABLE

20 x 30	26.20 within Ring Road
30 X 40	E/F - 18 Lakhs, Hunsur Road
40 X 60	N/F - 36 Lakhs, Hunsur Road
40 X 60	N/F - 48 Lakhs, Shanthaveri Gopal Gowda Nagar

98800 65122 / 77956 09173

HOUSE FOR SALE
20x30 Triplex Architectural House for Sale in Dattagalli 3rd Stage, Mysuru. Ground Floor, Spacious room with attached Bathroom, Gas Point, UPS Point CCTV points and Car Parking. 1st, 2nd and 3rd Floors- Spacious 3BHK Triplex House with 3 attached Bathrooms, Open Kitchen Utensil wash area. Contact:
9663506909

ಸೈಟುಗಳು ಮಾರಾಟಕ್ಕಿವೆ
* MUDA Approved 25 Sites Bogadi Road, Rs. 2,500/ Sq.ft.
* DTCP Approved Yelawala (Hunsur) Road Rs. 1200/ Sq.Ft.
9980771029

ಬೇಕಾಗಿದ್ದಾರೆ
Ladies PG ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. (ಅಡುಗೆ ಹೆಲ್ಪರ್) ಕಡ್ಡಾಯವಾಗಿ PG ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ ದೊರೆಯುತ್ತದೆ.
9972567537 / 9035004605

30x40 E/F ಸೈಟು @ Rs. 23 ಲಕ್ಷ
MUDA Approved Layout
90% ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ. ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ,
9538583377

ಬೇಕಾಗಿದ್ದಾರೆ
ಕೊಡಗಿನ ಗೋಣಿಕೊಪ್ಪಲಿನಲ್ಲಿ JCB Hitachi ವೆಲ್ಡಿಂಗ್ ಕೆಲಸಕ್ಕೆ ನುರಿತ Co2, MIG ವೆಲ್ಡಿಂಗ್ ಕೆಲಸದವರು ಬೇಕಾಗಿದ್ದಾರೆ. 45,000 ವೇತನ ಹಾಗೂ ಉಚಿತ ವಸತಿ ವ್ಯವಸ್ಥೆ ಇದೆ. ಆಸಕ್ತರು ಕೂಡಲೇ ಸಂಪರ್ಕಿಸಿ. ಕಾವೇರಿ ಇಂಜಿನಿಯರಿಂಗ್ ವರ್ಕ್, ಗೋಣಿಕೊಪ್ಪ
9535534306
9902251355

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ ಬಿ.ಕಾಂ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ:
8073393505

ಬೇಕಾಗಿದ್ದಾರೆ
ಹೋಟೆಲ್ ಹೌಸ್ ಕೀಪಿಂಗ್ ಹಾಗೂ ರೂಂ ಬಾಯ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ಮೈಸೂರು. ವಸತಿ ಊಟ ಉಚಿತ. ಸಂಬಳ: 12,000/– ಹೊರ ಊರಿನವರಿಗೆ ಆದ್ಯತೆ.
9886758911

ಮೂಲ ದಾಖಲೆ ಕಳೆದಿದೆ
ಚಾಮರಾಜನಗರ ಟೌನ್ ನಗರಸಭೆ ವ್ಯಾಪ್ತಿಯ ಸುಧಾಮನಗರ ಡಿ ವಿಭಾಗದ ಅಸೆಸ್ಮೆಂಟ್ ನಂಬರ್ 1363/8 ನಿವೇಶನ ಸಂಖ್ಯೆ 9 ನ್ನು ಶ್ರೀ ಶಿವರಾತ್ರೀಶ್ವರ ನಗರ ಮೈಸೂರಿನಲ್ಲಿ ವಾಸವಾಗಿರುವ ಎಸ್.ಬಸವಯ್ಯರವರಿಗೆ ಶ್ರೀಮತಿ ನಿರ್ಮಲರವರು ದಿನಾಂಕ: 20–11–2010 ರಲ್ಲಿ ಒಪ್ಪಿ ಬರೆದುಕೊಟ್ಟ ದಾನಪತ್ರದ ಮೂಲ ದಾಖಲೆ ದಾನಪತ್ರ ಕಳೆದು ಹೋಗಿರುತ್ತದೆ. ಈ ದಾಖಲೆ ಯಾರಿಗಾದರೂ ಸಿಕ್ಕಿದಲ್ಲಿ ಸದರಿ ಆಸ್ತಿಯ ಪುಸ್ತುತ ಮಾಲೀಕರಾದ ಎಂ.ಶಿವಪ್ರಕಾಶ್ ನಂಜೇದೇವನಪುರ ಗ್ರಾಮ ಮೊಬೈಲ್ ಸಂಖ್ಯೆ 9686758546 ಚಾಮರಾಜನಗರ ತಾಲ್ಲೂಕು ಇವರಿಗೆ ತಲುಪಿಸಲು ಕೋರಿದೆ.

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ – ನೀಮ್
ನಂ.203, ಬನ್ನಿಮಂಟಪ ಬಡಾವಣೆ, ಮೈಸೂರು – 570015
8088887802

HOUSE FOR RENT
30x40, Newly constructed G/F N/F Srinagara, (Sarada layout), After JP Nagara Mahadevapura, Mysuru Rent 8000/-, Advance 10 Months, Brokers Excuse. Contact Number
9141915294
9379366388

SITE FOR SALE
30x40 MUDA Site For Sale Vinayaka Enclave Kuppalur, J P Nagar
7026901111

A to Z
We Buy Old Furnitures, Old Vessel's, Electric Items, Old UPS Battery's and other Scrap Items. Call Anand:
9900945675
9620461090

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ ಮತ್ತು ಗದ್ದಿಗೆ ಮುಖ್ಯರಸ್ತೆಯಲ್ಲಿ ವಿಲ್ಲಾಗಳನ್ನು ವಸತಿ ಬಡಾವಣೆ ಮಾಡಲು ಹಾಗೂ ವ್ಯವಸಾಯದ ಜಮೀನುಗಳು, ತೋಟಗಳು ಮಾರಾಟಕ್ಕಿವೆ. ಸಂಪರ್ಕಿಸಿ
9945661696
9663793666

ಬೇಕಾಗಿದ್ದಾರೆ
ನ್ಯೂಟ್ರಿಸುಕನ್ ಬಯೋಟೆಕ್ ಪ್ರೈವೈಟ್ ಲಿಮಿಟೆಡ್, ಸಂಸ್ಥೆಯಲ್ಲಿ ಮಾರ್ಕೆಟಿಂಗ್ ಕೆಲಸ ಮಾಡಲು PUC ಮೇಲ್ಪಟ್ಟು ವಿದ್ಯಾಭ್ಯಾಸ ಮಾಡಿರುವ ಯುವಕರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಉಳ್ಳವರಿಗೆ ಆದ್ಯತೆ)
9916633859
8217479973

ಸೈಟು ಮಾರಾಟಕ್ಕಿದೆ
30x40 - E/F, 30x40-W/F
40x60 -W/F, 40x60- N/F
30x60 - N/E/F Corner
ಯುನಿವರ್ಸಿಟಿ ಬಡಾವಣೆ ಎದುರು
30x50 - E/F ವರಕೋಡ್ ಹತ್ತಿರ
40x60 - W/F ವರುಣ ಹತ್ತಿರ
9900372792

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರಿನ ಓರ್ವ ಸೇರಿ 8 ಮಂದಿ ಗಾಂಜಾ ಪೆಡ್ಲರ್‌ಗಳ ಬಂಧನ

ಒಡಿಸ್ಸಾದಿಂದ ಗಾಂಜಾ ತರಿಸಿಕೊಳ್ಳುತ್ತಿದ್ದ ತಂಡ

• ಐದು ಕೆಜಿಗೂ ಹೆಚ್ಚು ಗಾಂಜಾ ವಶ • ಗಾಂಜಾ ಮಾರಾಟದ ಬಗ್ಗೆ ಮಾಹಿತಿ ನೀಡಲು ಮನವಿ

ಮಡಿಕೇರಿ, ಫೆ.24– ಕೊಡಗು ಪೊಲೀಸರ ವಿಶೇಷ ತಂಡ ಎರಡು ಕಡೆ ದಾಳಿ ನಡೆಸಿ ಮೈಸೂರಿನ ಓರ್ವ ಗಾಂಜಾ ಪೆಡ್ಲರ್ ಸೇರಿದಂತೆ 8 ಮಂದಿ ಪ್ರಮುಖ ಗಾಂಜಾ ಪೆಡ್ಲರ್‌ಗಳನ್ನು ಬಂಧಿಸಿದ್ದು, ಅವರಿಂದ 5 ಕೆ.ಜಿಗೂ ಹೆಚ್ಚು ಗಾಂಜಾವನ್ನು ವಶ ಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿಗಳು ಕೊಡಗು ಸೇರಿದಂತೆ ನೆರೆಯ ಕೇರಳ ರಾಜ್ಯಕ್ಕೂ ಗಾಂಜಾ ಪೂರೈಕೆ ಮಾಡುತ್ತಿದ್ದುದು ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಮ್ಮ ಕಚೇರಿಯಲ್ಲಿ ಕರೆದಿದ್ದ ತುರ್ತು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿರಾಜಪೇಟೆ ನಗರ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ವಿರಾಜಪೇಟೆಯ ಶಾಂತಿನಗರದ ಲೇಟ್ ಏಜಾಜ್ ಅವರ ಪುತ್ರ ಸಾದಿಕ್(33), ಲೇಟ್ ಇದ್ರೀಸ್ ಅವರ ಪುತ್ರ ಇಲಿಯಾಸ್(44), ಮೊಗರ ಗಲ್ಲಿ ನಿವಾಸಿ ಏಜಾಸ್ ಅವರ ಪುತ್ರ ಖಲೀಲ್ (37), ಮೈಸೂರಿನ ಹೆಬ್ಬಾಳು ಬಡಾವಣೆಯ ನಿವಾಸಿ ಗೋಪಾಲ ಅವರ ಪುತ್ರ ದರ್ಶನ್(27), ಮಡಿಕೇರಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಹಾಕತ್ತೂರು ನಿವಾಸಿ ಕರಣ್ ಕುಮಾರ್ (27), ಮೂರ್ನಾಡು ವಾಸಿ ಗಗನ್ (26), ಕುಶಾಲನಗರದ ನಿರೂಪ್ (27) ಹಾಗೂ ವಿನಯ್ ಎಂಬುವವರನ್ನು ಬಂಧಿಸಿರುವುದಾಗಿ ಎಸ್ಪಿ ರಾಮರಾಜನ್ ವಿವರಿಸಿದರು.



"ಇದೀಗ ಪೆಡ್ಲರ್‌ಗಳನ್ನು ಟಾರ್ಗೆಟ್ ಮಾಡಿ ಬಂಧಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗಾಂಜಾ ಸೇವಿಸುವವರ ಮೇಲೂ ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಗುತ್ತದೆ. ಒಂದು ತಿಂಗಳ ಒಳಗೆ ಕೊಡಗು ಜಿಲ್ಲೆಯನ್ನು ಗಾಂಜಾ ಮುಕ್ತ ಜಿಲ್ಲೆಯನ್ನಾಗಿ ಮಾಡಲಾಗುವುದು."
-ಕೆ.ರಾಮರಾಜನ್, ಕೊಡಗು ಎಸ್ಪಿ



ವಿ.ಪೇಟೆಯಲ್ಲಿ ಬಂಧಿತ ಪೆಡ್ಲರ್‌ಗಳು

ಎರಡು ಪ್ರಕರಣಗಳಲ್ಲಿ ಒಟ್ಟು 5 ಕೆಜಿಗೂ ಹೆಚ್ಚು ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಮಡಿಕೇರಿಯಲ್ಲಿ ಬಂಧಿತರಾದ ಆರೋಪಿಗಳು ಮೈಸೂರು ಮಂಡಿಮೊಹಲ್ಲಾದಿಂದ ಗಾಂಜಾ ತಂದು ಬೈಕ್‌ಗಳ ಮೂಲಕ ಮಾರಾಟ ಮಾಡುತ್ತಿದ್ದರು ಎಂದು ವಿವರಿಸಿದರು.

ಒಡಿಸ್ಸಾದಿಂದ ಆಮದು: ವಿರಾಜಪೇಟೆಯಲ್ಲಿ ಬಂಧಿತ ಆರೋಪಿಗಳು ವಿಚಾರಣೆ ವೇಳೆ ಮಾಹಿತಿ ನೀಡಿದಂತೆ ಒಡಿಸ್ಸಾದಿಂದ ರೈಲಿನ ಮೂಲಕ ಗಾಂಜಾ ಆಮದು ಮಾಡಿಕೊಳ್ಳುತ್ತಿದ್ದರು. ಒಡಿಸ್ಸಾ ಮೂಲದ ವ್ಯಕ್ತಿಗಳ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿ ಬಳಿಕ ರೈಲುಗಳ ಮೂಲಕ ಗಾಂಜಾ ಆಮದು ಮಾಡಿಕೊಳ್ಳುತ್ತಿದ್ದರು. ಸ್ವಲ್ಪ ಪ್ರಮಾಣದ ಗಾಂಜಾವನ್ನು ಮಾರಾಟ ಮಾಡಿರುವುದು ಕಂಡು ಬಂದಿದೆ ಎಂದು ಮಾಹಿತಿ ನೀಡಿದರು.

ಕಳೆದ 20 ದಿನಗಳ ಅವಧಿಯಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ದಾಳಿ ನಡೆಸಿ 5 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಗಾಂಜಾ ಮಾರಾಟದ ಮಾಹಿತಿ ಇದ್ದಲ್ಲಿ ಸಾರ್ವಜನಿಕರು ಪೊಲೀಸ್ ಇಲಾಖೆಗೆ ತಿಳಿಸುವಂತೆ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಅಡಿಷನಲ್ ಎಸ್.ಪಿ. ಸುಂದರ್ ರಾಜ್ ಉಪಸ್ಥಿತರಿದ್ದರು.

ನಾಪೋಕ್ಲುವಿನಲ್ಲಿ ಬಟ್ಟೆ ವ್ಯಾಪಾರಿ ಆತ್ಮಹತ್ಯೆ

ನಾಪೋಕ್ಲು, ಫೆ.24– ಪಟ್ಟಣದ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಹೆಚ್.ಕೆ. ಸಂದೀಪ್ (40) ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ.



ಸಕಲೇಶಪುರ ತಾಲೂಕಿನ ಹೆತ್ತೂರು ಹೋಬಳಿ ಹಡ್ಲಹಳ್ಳಿ ಗ್ರಾಮದ ನಿವಾಸಿ ಸಂದೀಪ್ ಕಳೆದ 20 ವರ್ಷಗಳಿಂದ ಪಟ್ಟಣದಲ್ಲಿ ಆರ್ ಹೆಚ್ ಬಟ್ಟೆ ಮಳಿಗೆ ನಡೆಸುತ್ತಿದ್ದರು. ವ್ಯಾಪಾರದಲ್ಲಿನ ನಷ್ಟ ದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿರ ಬಹುದು ಎಂದು ಶಂಕಿಸಲಾಗಿದೆ. ಶುಕ್ರವಾರ ಬೆಳಿಗ್ಗೆ 7.30 ರ ವೇಳೆಗೆ ಸ್ನೇಹಿತ ಸಂದೇಶ ಅವರಿಗೆ ಕರೆ ಮಾಡಿ 9 ಗಂಟೆಗೆ ಮನೆಗೆ ಬರುವಂತೆ ತಿಳಿಸಿದ್ದು, ಸಂದೇಶ ಮನೆಗೆ ಬಂದಾಗ ಸಂದೀಪ್ ವೇಲಿನಿಂದ ಕುತ್ತಿಗೆ ಬಿಗಿದುಕೊಂಡು ಆತ್ಮಹತ್ಯೆ ಮಾಡಿ ಕೊಂಡಿರುವುದು ಗೊತ್ತಾಗಿದೆ.

ಮೃತ ಸಂದೀಪ್‌ಗೆ ತಾಯಿ ಮತ್ತು ಒಬ್ಬ ಸಹೋದರನಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮಡಿಕೇರಿಗೆ ಕೊಂಡೊಯ್ಯಲಾಗಿದೆ. ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮಕೈಗೊಂಡಿದ್ದಾರೆ.

ವಿಕಲಚೇತನ ಫಲಾನುಭವಿಗಳಿಗೆ ಚೆಕ್ ವಿತರಣೆ



ವಿರಾಜಪೇಟೆ, ಫೆ.24– ತಾಲೂಕಿನ ಸೌಲಭ್ಯ ವಿಕಲಚೇತನರ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ವಿಶೇಷ ಸಭೆಯಲ್ಲಿ ವಿಕಲಚೇತನ ಪಲಾನುಭವಿಗಳಿಗೆ ಚೆಕ್ ವಿತರಿಸಲಾಯಿತು.

ಚೆಕ್ ವಿತರಿಸಿದ ಪ್ರಧಾನ ಕಛೇರಿಯ ಉಪಾಧ್ಯಕ್ಷೆ ಆಯಿಷಾ ಅವರು ಮಾತನಾಡಿ, ವಿರಾಜಪೇಟೆ ತಾಲೂಕಿನ ಹಾಲುಗುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಂಡ ಗೇರಿ ಗ್ರಾಮದ ವಿಕಲಚೇತನ ಸ್ವ ಸಹಾಯ ಗುಂಪುಗಳಲ್ಲಿ 11 ಮಂದಿ ವಿಕಲಚೇತನ ಸದಸ್ಯರಿದ್ದು, ಅದರಲ್ಲಿ ಗುಂಪಿನ ಅಧ್ಯಕ್ಷ ಕಾಶಿಂ, ಕಾರ್ಯದರ್ಶಿ ಪಾಜೀಯ, ಅಬ್ದುಲ್ ರೆಹಮನ್, ಮುನಾವೀರ್, ಸುಬೈದ ಅವರುಗಳಿಗೆ ತಲಾ 10 ಸಾವಿರದಂತೆ ಒಟ್ಟು 50 ಸಾವಿರ ರೂ. ಸಾಲ ನೀಡಲಾಗಿದ್ದು, ಸಾಲ ಪಡೆದ ವಿಕಲಚೇತನ ಸದಸ್ಯರು ಸ್ವ ಉದ್ಯೋಗಗಳಿಗೆ ಬಳಸಿಕೊಂಡು ಅಭಿವೃದ್ಧಿ ಹೊಂದುವಂತಾಗಬೇಕು ಎಂದರು. ಈ ಸಂದರ್ಭ ವಿರಾಜಪೇಟೆ ಕಛೇರಿಯ ಸಲಹಾ ಸಮಿತಿ ಅಧ್ಯಕ್ಷ ಬಿ.ಜಿ.ಸಾಯಿನಾಥ್ ನಾಯ್ಕ್, ಸದಸ್ಯರಾದ ಬಿ.ಬಿ.ವಸಂತ, ಕಚೇರಿ ವ್ಯವಸ್ಥಾಪಕರಾದ ವಿ.ಕೆ.ಚೈತ್ರ, ಯೋಜನಾಧಿಕಾರಿ ಟಿ.ಯು.ವಿದ್ಯಾಶ್ರೀ, ಸಂಘದ ಸದಸ್ಯರುಗಳು ಉಪಸ್ಥಿತರಿದ್ದರು.

ಫೆ.26 ರಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಫೆ.24– ಮಡಿಕೇರಿ 66/11 ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರ ಹೋಗುವ ಎಫ್1 ಕೋಟೆ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯವನ್ನು ನಿರ್ವಹಿಸ ಬೇಕಿರುವುದರಿಂದ ಫೆ.26 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ರೇಸ್‌ಕೋರ್ಸ್ ಕಾಲೇಜು ರಸ್ತೆ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿ.ಪೇಟೆಯಲ್ಲಿ ಜೆಡಿಎಸ್‌ನಿಂದ ಪ್ರಬಲ ಅಭ್ಯರ್ಥಿ ಕಣಕ್ಕೆ

ತಾಲೂಕಿನಲ್ಲಿ 180 ಬೂತ್ ಕಮಿಟಿ, 24 ಘಟಕಗಳ ರಚನೆ

ವಿರಾಜಪೇಟೆ, ಫೆ.24– ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದಿಂದ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಲಿದ್ದು, ತ್ರಿಕೋನ ಸ್ಪರ್ಧೆ ನೀಡಲಿದ್ದೇವೆ. ಪಕ್ಷದ ವರಿಷ್ಠರ ಸೂಚನೆಯಂತೆ ತಾಲೂಕಿನಲ್ಲಿ 180 ಬೂತ್ ಕಮಿಟಿ ಮತ್ತು 24 ಘಟಕಗಳನ್ನು ರಚಿಸಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಪಿ.ಎ.ಮಂಜುನಾಥ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಪಕ್ಷಕ್ಕೆ ತನ್ನದೆ ಆದ ವರ್ಚಸ್ಸಿದೆ. ಈ ಹಿಂದೆ ಜಿಲ್ಲಾ ಅಧ್ಯಕ್ಷರಾಗಿ, ರಾಜ್ಯ ವಕ್ತಾರರಾಗಿದ್ದ ಸಂಕೇತ್ ಪೂವಯ್ಯ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಿಂದ ಜೆಡಿಎಸ್ ಪಕ್ಷಕ್ಕೆ ಯಾವ ನಷ್ಟ ಇಲ್ಲ ಮತ್ತು ಯಾವ ಕಾರ್ಯಕರ್ತರು ಅವರನ್ನು ಹಿಂಬಾಲಿಸುವುದಿಲ್ಲ ಎಂದರು. ಹಿಂದೆ ಅರುಣ್ ಮಾಚಯ್ಯ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಮೂವತ್ತು ಸಾವಿರ ಮತ ಗಳಿಸಿದ್ದರು, ಸಂಕೇತ್ ಪೂವಯ್ಯ ಅವರ ಸೋಲು ನಿಶ್ಚಿತವಾಗಿದ್ದರೂ ಕಳೆದ ಬಾರಿ 11,300 ಮತ ಗಳಿಸಿದ್ದರು. ಪಂಚರತ್ನ ಯೋಜನೆಯನ್ನು ಮನೆ ಮನೆಗೆ ತಲುಪಿಸಲು ರಾಜ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ನರಸಿಂಹಮೂರ್ತಿ ಅವರ ಸೂಚನೆಯಂತೆ ಕರಪತ್ರವನ್ನು ಮನೆ ಮನೆಗೆ ತಲುಪಿಸಲಿದ್ದೇವೆ. ಈ ಹಿಂದೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭ ರೈತರ ಸಾಲ ಮನ್ನವಾಗಿದ್ದ ಫಲಾನುಭವಿಗಳನ್ನು ಖುದ್ದು ಭೇಟಿಯಾಗಲಿದ್ದೇವೆ. ಪಕ್ಷದ ರಾಜ್ಯಾಧ್ಯಕ್ಷ ಮಾಜಿ ಸಿಎಂ ಕುಮಾರಸ್ವಾಮಿ ಕೊಡಗಿಗೆ ಭೇಟಿ ನೀಡಲಿದ್ದು, ವಿರಾಜಪೇಟೆಗೂ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ವಿರಾಜಪೇಟೆ ಪುರಸಭೆ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸದೆ ನಿಷ್ಕ್ರೀಯವಾಗಿದ್ದು, ಈ ಸಮಸ್ಯೆ ಬಗ್ಗೆ ಚರ್ಚಿಸಲು ಮಾಸಿಕ ಸಭೆಯನ್ನೇ ಕರೆಯದೆ ಜನರ ಹಿತವನ್ನು ಮರೆತಿದೆ. ಪ್ರಮುಖವಾಗಿ ಬೇಸಿಗೆ ಬರುತ್ತಿದ್ದು ಕುಡಿಯುವ ನೀರಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೆ ಹೋದರೆ ಪಕ್ಷದ ವತಿಯಿಂದ ಪುರಸಭೆ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ತಾಲೂಕು ಪ್ರಧಾನ ಕಾರ್ಯದರ್ಶಿ ಹರ್ಷ, ಖಜಾಂಚಿ ಸತ್ಯ, ಮಾನವ ಹಕ್ಕು ಮತ್ತು ಕಾರ್ಮಿಕರ ಕುಂದುಕೊರತೆ ಘಟಕದ ಅಧ್ಯಕ್ಷ ರಜಾಕ್, ಕ್ರೈಸ್ತ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಕ್ರಿಷ್ಟಿ, ರೈತ ಘಟಕದ ತಾಲೂಕು ಅಧ್ಯಕ್ಷ ಬಾಳೆಕುಟ್ಟಿರ ದಿನಿ ಬೋಪಯ್ಯ ಉಪಸ್ಥಿತರಿದ್ದರು.

ವಿ. ಬಾಡಗ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ

ಸೆಮಿಫೈನಲ್‌ಗೆ ಚೇಂದಿರ, ತೀತಿಮಾಡ, ನಾಮೆರ, ಕೊಂಗಂಡ ತಂಡ

ಪೊನ್ನಂಪೇಟೆ, ಫೆ.24– ಬಿಟ್ಟಂಗಾಲ ಸಮೀಪದ ವಿ. ಬಾಡಗದ ಹೈ ಫ್ಲೈಯರ್ಸ್ ಸಂಸ್ಥೆಯ ವತಿಯಿಂದ ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆಯುತ್ತಿರುವ ವಿರಾಜಪೇಟೆ ತಾಲೂಕಿನ ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ ಕ್ವಾರ್ಟರ್ ಫೈನಲ್‌ನಲ್ಲಿ ಸೆಣಸಾಡಿದ ಚೇಂದಿರ, ತೀತಿಮಾಡ, ನಾಮೆರ ಮತ್ತು ಕೊಂಗಂಡ ತಂಡಗಳು ಮುನ್ನಡೆ ಸಾಧಿಸಿ ಸೆಮಿ ಫೈನಲ್ ಪ್ರವೇಶಿಸುವಲ್ಲಿ ಯಶಸ್ವಿಯಾಗಿದೆ.

ದಿನದ ಪ್ರಥಮ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಚೇಂದಿರ ತಂಡವು ನಂಬುಡುಮಾಡ ತಂಡವನ್ನು 5–1 ಗೋಲುಗಳಿಂದ ಸೋಲಿಸಿತು. ವಿಜೇತ ತಂಡದ ಪರ ಅತಿಥಿ ಆಟಗಾರ ಪೂಣಚ್ಚ 9ನೇ ಮತ್ತು 23ನೇ ನಿಮಿಷದಲ್ಲಿ, ಪೊನ್ನಣ್ಣ 29ನೇ ನಿಮಿಷದಲ್ಲಿ, ಅತಿಥಿ ಆಟಗಾರ ಜಗತ್ 35ನೇ ನಿಮಿಷದಲ್ಲಿ ಹಾಗೂ ಮತ್ತೋರ್ವ ಅತಿಥಿ ಆಟಗಾರ ಅಯ್ಯಪ್ಪ 47ನೇ ನಿಮಿಷದಲ್ಲಿ ಗೋಲು ಬಾರಿಸಿದರೆ, ಪರಾಜಿತ ತಂಡದ ಪರ ಅತಿಥಿ ಆಟಗಾರ ನಿತಿನ್ 48ನೇ ನಿಮಿಷದಲ್ಲಿ ಏಕೈಕ ಗೋಲು ದಾಖಲಿಸಿದರು.



2ನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ತೀತಿಮಾಡ ತಂಡವು ಕಡೇಮಾಡ ತಂಡವನ್ನು 2–1 ಗೋಲುಗಳಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು. ತೀತಿಮಾಡ ತಂಡದ ಪರವಾಗಿ ಅತಿಥಿ ಆಟಗಾರ ನಾಚಪ್ಪ 6ನೇ ನಿಮಿಷದಲ್ಲಿ ಹಾಗೂ ಮತ್ತೋರ್ವ ಅತಿಥಿ ಆಟಗಾರ ಬೋಪಣ್ಣ 35ನೇ ನಿಮಿಷದಲ್ಲಿ ಗೋಲು ದಾಖಲಿಸಿದರೆ, ಪರಾಜಿತ ಕಡೇಮಾಡ ತಂಡದ ಪರವಾಗಿ ಸಚಿನ್ 12ನೇ ನಿಮಿಷದಲ್ಲಿ ಗೋಲು ಹೊಡೆದರು.

3ನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಾಮೆರ ತಂಡ ಕುಪ್ಪಂಡ ತಂಡವನ್ನು 1–0ಗೋಲುಗಳಿಂದ ಪರಾಭವಗೊಳಿಸಿತು. ವಿಜೇತ ನಾಮೆರ ತಂಡದ ಆರ್ಷ್ 24ನೇ ನಿಮಿಷದಲ್ಲಿ ಫೀಲ್ಡ್ ಗೋಲ್ ದಾಖಲಿಸಿ ತಂಡದ ವಿಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ರೋಚಕವಾಗಿ ನಡೆದ ಕೊನೆಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕೊಂಗಂಡ ತಂಡ ಚಂದೂರ ತಂಡದ ಎದುರು 6–5 ಗೋಲುಗಳ ಮೂಲಕ ಪ್ರಯಾಸದಾಯಕವಾಗಿ ಜಯ ಸಾಧಿಸಿತು. ಕೊಂಗಂಡ ತಂಡಕ್ಕೆ ದೊರೆತ ಪೆನಾಲ್ಟಿ ಕಾರ್ನರನ್ನು 24ನೇ ನಿಮಿಷದಲ್ಲಿ ಗೋಲಾಗಿ ಪರಿವರ್ತಿಸಿದ ಅತಿಥಿ ಆಟಗಾರ ಕಾರ್ಯಪ್ಪ ತಂಡದ ಖಾತೆ ತೆರೆದರು. ಇದಕ್ಕೆ ಸೇಡು ತೀರಿಸಿದ ಚಂದೂರ ತಂಡದ ಶ್ಯಾಮ್ 30ನೇ ನಿಮಿಷದಲ್ಲಿ ಫೀಲ್ಡ್ ಗೋಲ್ ಬಾರಿಸುವ ಮೂಲಕ ಗೋಲಿನ ಅಂತರವನ್ನು ಸಮನಾಗಿಸಿದರು. ದ್ವಿತೀಯಾರ್ಧದ ಸಮಯ ಕೊನೆಗೊಂಡಾಗ ಪಂದ್ಯ ಡ್ರಾ ಆದ ಹಿನ್ನೆಲೆಯಲ್ಲಿ ವಿಜಯ ನಿರ್ಣಯಕ್ಕಾಗಿ ಪೆನಾಲ್ಟಿ ಶೂಟ್ ಔಟ್ ಅನ್ನು ಅಳವಡಿಸಲಾಯಿತು.

ಈ ವೇಳೆಯೂ ಉಭಯ ತಂಡಗಳು ತಲಾ 3 ಗೋಲಿನ ಸಮನಾಂತರ ಕಾಯ್ದುಕೊಂಡ ಕಾರಣ ಸಡನ್ ಡೆತ್ ನಿಯಮಾವಳಿ ಅಳವಡಿಸುವುದು ಅನಿವಾರ್ಯವಾಯಿತು. ಸಡನ್ ಡೆತ್ತಿನ ಮೊದಲ ಸುತ್ತಿನಲ್ಲೂ ಕೊಂಗಂಡ ತಂಡದ ಕಾರ್ಯಪ್ಪ ಮತ್ತು ಚಂದೂರ ತಂಡದ ನಾಚಪ್ಪ ತಲಾ ಒಂದು ಗೋಲು ಬಾರಿಸಿದ್ದರಿಂದ ಎರಡೂ ತಂಡಗಳು ಮತ್ತೆ ಸಮಬಲ ಸಾಧಿಸಿಕೊಂಡಿತು. ಇದು ಪ್ರೇಕ್ಷಕರ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿತು. ಎರಡನೇ ಸುತ್ತಿನಲ್ಲಿ ಮಾತ್ರ ಕೊಂಗಂಡ ತಂಡದ ಧನುಷ್ ಗೋಲು ದಾಖಲಿಸುವ ಮೂಲಕ ತಂಡವನ್ನು ವಿಜಯದೆಡೆಗೆ ಕೊಂಡೊಯ್ದರು. ಪೆನಾಲ್ಟಿ ಶೂಟ್ ಔಟ್‌ನಲ್ಲಿ ಕೊಂಗಂಡ ತಂಡದ ಪರ ಧನುಷ್, ರಾಯಲ್ ಅಯ್ಯಣ್ಣ ಮತ್ತು ಕಾರ್ಯಪ್ಪ ಗೋಲು ಹೊಡೆದರೆ ಚಂದೂರ ತಂಡದ ಪರ ಪೊನ್ನಣ್ಣ ಅಚ್ಚಯ್ಯ ಮತ್ತು ಕಾರ್ಯಪ್ಪ ಗೋಲು ಗಳಿಸಿದರು.

ಬಗರ್‌ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯಿಸಿ ಬಿಎಸ್‌ಪಿ ಪ್ರತಿಭಟನೆ

ತಾಲೂಕಿನ ಅರಕಲವಾಡಿಯಿಂದ ಜಿಲ್ಲಾಡಳಿತ ಭವನದವರೆಗೆ ಪಾದಯಾತ್ರೆ



ಚಾಮರಾಜನಗರ, ಫೆ. 24– ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣಗೊಳಿಸಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಹುಜನ ಸಮಾಜ ಪಕ್ಷದ ಜಿಲ್ಲಾ ಸಮಿತಿ ಹಾಗೂ ಬಹುಜನ ವಾಲೆಂಟಿಯರ್ ಫೋರ್ಸ್ ಜಿಲ್ಲಾ ಘಟಕದ ವತಿಯಿಂದ ಪಾದಯಾತ್ರೆ ನಡೆಯಿತು.

ತಾಲೂಕಿನ ಅರಕಲವಾಡಿ ಗ್ರಾಮದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ನಗರದ ಜಿಲ್ಲಾಡಳಿತ ಭವನದವರೆಗೆ ಪಾದಯಾತ್ರೆ ನಡೆಸಿದರು. ನಂತರ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರಿಗೆ ಮನವಿ ಸಲ್ಲಿಸಲಾಯಿತು. ಸುಮಾರು ಜಿಲ್ಲೆಯಲ್ಲಿ 2–3 ದಶಕಗಳಿಂದ ಸಾಗುವಳಿ ಮಾಡುತ್ತಿರುವ ಎಲ್ಲಾ ರೈತರ ಜಮೀನುಗಳನ್ನು ಸಕ್ರಮಗೊಳಿಸಬೇಕು. ಜಿಲ್ಲೆಯಲ್ಲಿ ಸುಮಾರು ಜೀತ ವಿಮುಕ್ತರುಗಳಿದ್ದು, ಜೀತ ಮಾಡುತ್ತಿದ್ದವರಿಗೆ ಜೀತ ಬಿಡಿಸಿ ಜೀವನಕ್ಕಾಗಿ ತಲಾ 1ರಿಂದ 2 ಎಕರೆ ಭೂಮಿ ಮಂಜೂರು ಮಾಡಿ ಸರ್ಕಾರ ಆದೇಶ ಪತ್ರ ನೀಡಿದೆ. ಆದರೆ ಈವರೆವಿಗೂ ಭೂಮಿ ತೋರಿಸಿಲ್ಲ. ಭೂಮಿಗಾಗಿ ಕಾದು ಅನೇಕ ಜೀತವಿಮುಕ್ತರು ಪ್ರಾಣ ಕಳೆದುಕೊಂಡಿದ್ದಾರೆ. ಈಗಲಾದರೂ ಬದುಕಿರುವ ಫಲಾನುಭವಿಗಳಿಗೆ ಮತ್ತು ಕುಟುಂಬಗಳಿಗೆ ಭೂಮಿ ನೀಡಬೇಕು ಎಂದು ಪ್ರತಿಭಟನಾನಿತರತರು ಆಗ್ರಹಿಸಿದರು.

ದರಖಾಸ್ತು ಭೂಮಿಯನ್ನು ದುರಸ್ಥಿಗೊಳಿಸಬೇಕು. ತಕ್ಷಣವೇ ಭೂ ದಾಖಲೆ ನೀಡಬೇಕು. ಪ್ರತಿ ಗ್ರಾಮಗಳ ನಿವೇಶನಗಳಿಗೆ ಈ ಸ್ವತ್ತುಗಳನ್ನು ತ್ವರಿತಗತಿಯಲ್ಲಿ ನೀಡಬೇಕು. ಸ್ಮಶಾನವಿಲ್ಲದ ಗ್ರಾಮಗಳಿಗೆ ಕೂಡಲೇ ಸ್ಮಶಾನಕ್ಕಾಗಿ ಭೂಮಿ ನೀಡಬೇಕು. ಕಾಡಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳಿಂದ ರೈತರ ಬೆಳೆ ಹಾನಿಯಾಗುವುದರ ಜೊತೆಗೆ ರೈತರ ಪ್ರಾಣಹಾನಿಯಾಗಿರುತ್ತದೆ. ಕಾಡುಪ್ರಾಣಿಗಳ ಹಾವಳಿ ತಡೆಯಲು ವೈಜ್ಞಾನಿಕ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಪ್ರತಿಭಟನಾನಿರತರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಬಿಎಸ್‌ಪಿ ಜಿಲ್ಲಾ ಅಧ್ಯಕ್ಷ ನಾಗಯ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಹ.ರ.ಮಹೇಶ್, ಅರಕಲವಾಡಿ ನಾಗೇಂದ್ರ, ರಾಜ್ಯ ಕಾರ್ಯದರ್ಶಿ ಕಮಲ್, ಪ್ರಧಾನ ಕಾರ್ಯದರ್ಶಿ ಬ.ಮ.ಕೃಷ್ಣಮೂರ್ತಿ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಖಜಾಂಚಿ ರಾಜೇಂದ್ರ, ತಾಲೂಕು ಸಂಯೋಜಕ ಎಸ್.ಪಿ.ಮಹೇಶ್, ಅಧ್ಯಕ್ಷ ಅಮಚವಾಡಿ ಪ್ರಕಾಶ್, ಉಪಾಧ್ಯಕ್ಷ ರಾಜು, ಬಿವಿಎಫ್ ಜಿಲ್ಲಾ ಸಂಯೋಜಕ ರವಿಮೌರ್ಯ, ಅಧ್ಯಕ್ಷ ಚಂದ್ರಕಾಂತ್, ಗ್ರಾ.ಪಂ. ಸದಸ್ಯರಾದ ದೇವಾಲಪುರ ಶಿವಣ್ಣ, ಬಾಲು ಇತರರು ಭಾಗವಹಿಸಿದ್ದರು.

ಕಬ್ಬಿನ ಹೆಚ್ಚುವರಿ ಹಣ ಕೊಡಿಸುವಂತೆ ಆಗ್ರಹಿಸಿ ಫೆ.28 ರಂದು ಮೈಸೂರು ಡಿಸಿ ಕಚೇರಿ ಮುತ್ತಿಗೆ



ಚಾಮರಾಜನಗರ, ಫೆ.24– ಸಕ್ಕರೆ ಕಾರ್ಖಾನೆಗಳಿಂದ ಕಬ್ಬಿನ ಹೆಚ್ಚುವರಿ 150 ರೂ. ಕೊಡಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ ವತಿಯಿಂದ ಫೆ.28 ರಂದು ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲಾಗುತ್ತದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಬ್ಬಿನ ಹೆಚ್ಚುವರಿ 150 ರೂ.ಸಕ್ಕರೆ ಕಾರ್ಖಾನೆಗಳಿಂದ ಕೊಡಿಸುವಂತೆ ಸೇರಿ ರೈತರ ನಾನಾ ಹಕ್ಕೊತ್ತಾಯಗಳ ಈಡೇರಿಕೆಗೆ ಒತ್ತಾಯಿಸಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ನಿರ್ಧರಿಸಿದ್ದು, ಅಂದು ಮೈಸೂರು ಗನ್‌ಹೌಸ್ ವೃತ್ತದಿಂದ ಬೆಳಗ್ಗೆ 11ಕ್ಕೆ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮುತ್ತಿಗೆ ಹಾಕಲಾಗುವುದು. ಈ ಕಾರ್ಯಕ್ರಮಕ್ಕೆ ಚಾಮರಾಜನಗರ ಜಿಲ್ಲೆಯ ರೈತರು ಸ್ವಯಂ ಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮನವಿ ಮಾಡಿದರು.

ಅರಿಶಿನಕ್ಕೆ ಎಂಐಎಸ್ ಯೋಜನೆಯಡಿ ಸರ್ಕಾರ ಮಧ್ಯಪ್ರವೇಶ ಮಾಡಿ ಒಂದು ಕ್ವಿಂಟಾಲ್ 17500 ರೂ.ಗಳನ್ನು ಕೊಡಬೇಕು. ಕಾವೇರಿ–ಕಬಿನಿ ಅಚ್ಚುಕಟ್ಟು ನಾಲೆಗಳ ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ಕಬ್ಬು ಬಾಳೆ, ಇನ್ನಿತರ ಬೆಳೆಗಳ ರಕ್ಷಣೆಗಾಗಿ ಬೇಸಿಗೆಯಲ್ಲಿ ದನಕರುಗಳ ಕುಡಿಯುವ ನೀರಿಗಾಗಿ ಕೆರೆಕಟ್ಟೆಗಳನ್ನು ತುಂಬಿಸಬೇಕು. ನಾಲೆಗಳಿಗೆ ನೀರು ಹರಿಸಬೇಕು. ಕೃಷಿ ಪಂಪ್ ಸೆಟ್‌ಗಳಿಗೆ ಬೆಳಗ್ಗೆ 6 ರಿಂದ ಸಂಜೆ 6 ರವಗೆ ಹಗಲು ವೇಳೆ ಸಮರ್ಪಕ ವಿದ್ಯುತ್ ನೀಡಬೇಕು. ಪ್ರಧಾನಿ ಫಸಲ್ ಭೀಮಾ ಬೆಳೆ ವಿಮೆ ಪದ್ಧತಿ ರೈತರಿಗೆ ಸಹಕಾರಿಯಲ್ಲ. ರೈತರ ಅನುಕೂಲಕ್ಕೆ ತಕ್ಕಂತೆ ನಿಯಮಗಳನ್ನು ಬದಲಾಯಿಸಬೇಕು ಎಂದು ಆಗ್ರಹಿಸಿದರು.

ಸಭೆಯಲ್ಲಿ ಸಂಘದ ಜಿಲ್ಲಾ ಕಾರ್ಯದರ್ಶಿ ಎಚ್.ಮೂಕಳ್ಳಿ ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಮೂಡಲಪುರ ಪಟೇಲ್ ಶಿವಮೂರ್ತಿ, ತಾಲೂಕು ಉಪಾಧ್ಯಕ್ಷ ಮೂಡಲಪುರ ಹಾಲಿನ ನಾಗರಾಜು, ಹೆಗ್ಗೋಠಾರ ಶಿವಸ್ವಾಮಿ, ಕಿನಕಹಳ್ಳಿ ಬಸವಣ್ಣ, ಮಂಜುನಾಥ ಉಡಿಗಾಲ, ಗುರುಪ್ರಸಾದ್, ಛೇರ್ಮನ್ ಗುರು, ಗುರುಮಲ್ಲಪ್ಪ ಮಹೇಶ್, ಗುರುಸಿದ್ದಶೆಟ್ಟಿ, ಸುಧಾಕರ್, ಗ್ರಾಮ ಘಟಕ ವಾಲೆಯೂರು ಹರ್ಷ, ಪ್ರವೀಣ್ ಭಾಗವಹಿಸಿದ್ದರು.

ಕೆ.ಗುಡಿರಸ್ತೆ ದುರಸ್ತಿಪಡಿಸುವಂತೆ ಜಿಲ್ಲಾಧಿಕಾರಿಗೆ ಮನವಿ

ಚಾಮರಾಜನಗರ ಫೆ.24– ಜಿಲ್ಲೆಯ ಪ್ರಸಿದ್ದ ಯಾತ್ರಾಸ್ಥಳ ಬಿಳಿಗಿರಿರಂಗನಬೆಟ್ಟಕ್ಕೆ ಸಂಪರ್ಕಿಸುವ ಕ್ಯಾತೆ ದೇವರಗುಡಿ ರಸ್ತೆ ಗುಂಡಿ ಬಿದ್ದಿದ್ದು, ಪ್ರವಾಸಿಗರ ಹಿತದೃಷ್ಟಿಯಿಂದ ರಸ್ತೆ ದುರಸ್ತಿಗೆ ಜಿಲ್ಲಾಡಳಿತ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಆಗ್ರಹಿಸಿ ಕೋಡಿಮೋಳೆ ಭಗತ್‌ಸಿಂಗ್ ಯುವಸೇನೆ ಪದಾಧಿಕಾರಿಗಳು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರಿಗೆ ಮನವಿ ಸಲ್ಲಿಸಿದರು.

ಬಿಳಿಗಿರಿರಂಗನಾಥಸ್ವಾಮಿ ಬೆಟ್ಟ ಹುಲಿ ಸಂರಕ್ಷಿತ ಅರಣ್ಯ ಪ್ರದೇಶವಾಗಿದ್ದು, ಈಚಿನ ದಿನಗಳಲ್ಲಿ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ವಿಷಾಧದ ಸಂಗತಿ ಎಂದರೆ ಜವಾಹರ್ ನವೋದಯ ವಿದ್ಯಾಲಯದಿಂದ ಕೆ.ಗುಡಿವರೆಗಿನ ಆಯ್ದ ಕೆಲವು ಕಿರಿದಾದ ತಿರುವುಗಳಲ್ಲಿ ರಸ್ತೆ ಗುಂಡಿ ಬಿದ್ದಿದ್ದು, ಪ್ರವಾಸಿಗರ ಸಂಚಾರಕ್ಕೆ ತೊಂದರೆಯಾಗಿದ್ದು, ಕೂಡಲೇ ಗುಂಡಿಬಿದ್ದಿರುವ ರಸ್ತೆಯ ದುರಸ್ತಿಗೆ ಸಂಬಂಧಪಟ್ಟ ಇಲಾಖೆಯವರು ಮುಂದಾಗಬೇಕು, ಅಪಘಾತ ವಲಯದ ಸೂಚನಾಫಲಕ ಅಳವಡಿಸಬೇಕು, ತಿರುವುಗಳಲ್ಲಿ ತಡೆಗೋಡೆ ನಿರ್ಮಿಸಲು ಕ್ರಮವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಕೋಡಿಮೋಳೆ ಭಗತ್‌ಸಿಂಗ್ ಯುವಸೇನೆ ಅಧ್ಯಕ್ಷ ಕಾಂತರಾಜು, ಕಾರ್ಯದರ್ಶಿ ಮಲ್ಲೇಶ್, ಸದಸ್ಯ ಮಣಿಕಂಠ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಸಭಾಭವನ ಮದುವೆಗೆ ಸೀಮಿತವಾಗದೇ ಧಾರ್ಮಿಕ ಕೇಂದ್ರವಾಗಲಿ

ಹನೂರು, ಫೆ.24– ಸಭಾ ಭವನಗಳು ಕೇವಲ ಮದುವೆ ಮಂಟಪಗಳಾಗದೇ ಸಮುದಾಯದ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಚರ್ಚಿಸುವ ಧಾರ್ಮಿಕ ಕೇಂದ್ರಗಳಾಗಬೇಕು ಎಂದು ಮೈಸೂರಿನ ಸುತ್ತೂರು ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ತಿಳಿಸಿದರು.

ತಾಲೂಕಿನ ಒಡೆಯರ ಪಾಳ್ಯ ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ್ವರ ಸಭಾಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮುದಾಯದ ಜನರ ಸಹಕಾರಕ್ಕಾಗಿ ಸಭಾಭವನ ನಿರ್ಮಾಣ ಮಾಡುವುದು ಅನಿವಾರ್ಯ. ಆದರೆ ಅವುಗಳು ಕೇವಲ ಮದುವೆ ಸಮಾರಂಭಗಳಿಗೆ ಸೀಮಿತವಾಗಿರಬಾರದು. ವಾರಕ್ಕೆ, ತಿಂಗಳಿಗೆ ಸಭೆ, ಪ್ರಾರ್ಥನೆಗಳನ್ನು ಮಾಡುವ ಮೂಲಕ ಅವುಗಳನ್ನು ಧಾರ್ಮಿಕ ಕೇಂದ್ರಗಳನ್ನಾಗಿ ಮಾಡಬೇಕು. ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಮಹತ್ವದ ಸ್ಥಾನವಿದೆ. ಪ್ರತಿ ಮಕ್ಕಳು ತಾಯಿಯ ಮಹತ್ವ ಅರಿತು ಅವರ ಜೀವನಕ್ಕೆ ಊರುಗೋಲಾಗಬೇಕು. ಗ್ರಾಮೀಣ ಭಾಗದ ಪೋಷಕರು ಸಹ ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರಗಳನ್ನು ಕಲಿಸುವ ಮೂಲಕ ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬಾಳುವಂತೆ ತಯಾರು ಮಾಡಬೇಕು ಎಂದರು.

ಮಹದೇಶ್ವರ ಬೆಟ್ಟ ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಮಲೆ ಸೀಮೆಯ ಪ್ರಾಂತ್ಯ ಜಾತಿ ಧರ್ಮಗಳ ಭಾವೈಕ್ಯತೆ ಹೊಂದಿರುವ ಮತ್ತು



ಧಾರ್ಮಿಕ ಭಕ್ತಿಯಲ್ಲಿ ಶ್ರೀಮಂತಿಕೆ ಇರುವ ಗ್ರಾಮ ಒಡೆಯರ ಪಾಳ್ಯ. ಧಾರ್ಮಿಕ ಪರಂಪರೆಯ ಅಸ್ತಿತ್ವಕ್ಕೆ ನಮ್ಮೆಲ್ಲರ ಜವಾಬ್ದಾರಿ ಮುಖ್ಯ. ಕಾಯಕವೇ ಕೈಲಾಸ ಎನ್ನುವ ಬಸವ ತತ್ವದ ಅನುಯಾಯಿಗಳು ಈ ಭಾಗದವರಾಗಿದ್ದಾರೆ. ಇಂತಹ ನೆಲೆಯಲ್ಲಿ ಅಪೂರ್ಣಗೊಂಡಿರುವ ಗುರುಮಲ್ಲೇಶ್ವರ ಸಭಾ ಭವನವನ್ನು ಪೂರ್ಣಗೊಳಿಸಿದ ಕೀರ್ತಿ ನಿಶಾಂತ್ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಮುಖಂಡ ಪೊನ್ನಾಚಿ ಮಹದೇವಸ್ವಾಮಿ ಮಾತನಾಡಿ, ಸಮಾಜ ಸೇವಕ ನಿಶಾಂತ್ ಅವರ ಸಮಾಜ ಸೇವೆಯನ್ನು ವಿವರಿಸಿಕೊಂಡಾಡಿದರು. ಈ ಸಂದರ್ಭದಲ್ಲಿ ಮೈಸೂರು ಕುದೇರು ಮಠದ ಗುರುಶಾಂತಸ್ವಾಮಿ, ಕುಂದೂರು ಮಠದ ಶರತ್ ಚಂದ್ರಸ್ವಾಮಿ, ಹೊಂಡರಬಾಳು ಮಠದ ಪ್ರಸನ್ನಶಾಂತಮಲ್ಲಿಕಾರ್ಜುನ ಸ್ವಾಮಿ, ಗುಂಡೇಗಾಲ ಮಠದ ಮಲ್ಲಿಕಾರ್ಜುನಸ್ವಾಮಿ, ಗೌಡಳ್ಳಿ ವಿರಕ್ತ ಮಠದ ಮರಿ ತೋಂಟಧಾರ್ಯಸ್ವಾಮಿ ಇದ್ದರು.

ಹನೂರು ತಾಲೂಕಿನ ಒಡೆಯರ ಪಾಳ್ಯ ಗ್ರಾಮದಲ್ಲಿ ಶುಕ್ರವಾರ ನಡೆದ ಗುರುಮಲ್ಲೇಶ್ವರ ಸಭಾಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ಮಾತನಾಡಿದರು.

ಟಿಪ್ಪು ಮಸೀದಿಗೆ ವಾಟಾಳ್‌ನಾಗರಾಜ್ ಭೇಟಿ

2023ರ ಚುನಾವಣೆಯಲ್ಲಿ ಬೆಂಬಲಿಸಲು ಮನವಿ

ಚಾಮರಾಜನಗರ, ಫೆ24– ನಗರದ ಗಾಳೀಪುರ ಬೀಡಿ ಕಾಲೋನಿಯಲ್ಲಿರುವ ಟಿಪ್ಪು ಮಸೀದಿಗೆ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್‌ನಾಗರಾಜ್ ಭೇಟಿ ನೀಡಿದ್ದರು.


ನಾನು 2023ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿದ್ದೇನೆ. ನಿಮ್ಮ ಸಹಕಾರ, ಬೆಂಬಲ ನೀಡಬೇಕು ಎಂದು ಮುಸ್ಲಿಂ ಸಮುದಾಯದ ಮುಖಂಡರಲ್ಲಿ ವಾಟಾಳ್ ನಾಗರಾಜ್ ಮನವಿ ಮಾಡಿದರು. ಮನವಿ ಸ್ಪಂದಿಸಿದ ಮುಖಂಡರು ನಿಮಗೆ ಚುನಾವಣೆಯಲ್ಲಿ ಬೆಂಬಲ ನೀಡುವುದಾಗಿ ತಿಳಿಸಿದರು.

ಚಾಮರಾಜನಗರ ಜಿಲ್ಲೆ ಮಾಡಿದ್ದು, ಚಾಮರಾಜನಗರಕ್ಕೆ ಕಾವೇರಿ ಕುಡಿಯುವ ನೀರು ತಂದಿದ್ದು, ಜೋಡಿ ರಸ್ತೆ ಮಾಡಿದ್ದು, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಸಾವಿರಾರು ಜನರಿಗೆ ನಿವೇಶನ, ಮನೆ ಕೊಟ್ಟಿದ್ದು, ಈ ವಾಟಾಳ್‌ನಾಗರಾಜು, ಆದರೆ ಕಳೆದ ಚುನಾವಣೆಯಲ್ಲಿ ಜನತೆ ಜಾತಿ, ಹಣದ ಆಸೆಗಾಗಿ ನನಗೆ ಮೋಸ ಮಾಡಿದರು. ಚಾಮರಾಜನಗರ ಅಭಿವೃದ್ಧಿಗಾಗಿ



ಈ ಬಾರಿಯ ಚುನಾವಣೆಯಲ್ಲಿ ಬೆಂಬಲಿಸಿ ಗೆಲ್ಲಿಸಿ ವಿಧಾನಸೌಧಕ್ಕೆ ಕಳುಹಿಸಿಕೊಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಟಿಪ್ಪು ಮಸೀದಿ ಅಧ್ಯಕ್ಷ ಕಲೀಂಮುಲ್ಲಾ, ದಿಲ್‌ಧಾರ್, ಆಸೀಫ್, ಶಿವಲಿಂಗಮೂರ್ತಿ, ಕುಮಾರ್, ಮಹೇಶ್, ಪಾರ್ಥಸಾರಥಿ, ಸಂಜು ಇತರರು ಹಾಜರಿದ್ದರು.



ಕೊಳ್ಳೇಗಾಲ ದೇವಾಂಗ ಮಹಾಸಭಾದ ನೂತನ ಶೆಟ್ಟಿಗಾರರಾಗಿ ಪಿ.ಎನ್. ಶಿವಕುಮಾರ್ ಮತ್ತು ಸುರೇಶ್ ಶುಕ್ರವಾರ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಅಧಿಕಾರ ಸ್ವೀಕರಿಸಿದರು.

ಅರಿಶಿಣಕ್ಕೆ ಬೆಂಬಲ ಬೆಲೆಗೆ ಶಾಸಕ ನಿರಂಜನಕುಮಾರ್ ಒತ್ತಾಯ

ಗುಂಡ್ಲುಪೇಟೆ, ಫೆ24– ಕುಸಿದಿರುವ ಅರಿಶಿಣ ಬೆಳೆಗೆ ಬೆಂಬಲ ಬೆಲೆ ಕೊಡಿಸುವಂತೆ ಶಾಸಕ ಸಿ.ಎಸ್.ನಿರಂಜನಕುಮಾರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ. ವಿಧಾನ ಮಂಡದಲ ಅಧಿವೇಶನದಲ್ಲಿ ಅವರು ಮಾತನಾಡಿ ಜಿಲ್ಲಾ ಬೆಳೆಯಾಗಿ ಅರಿಶಿಣವನ್ನು ಘೋಷಿಸಿದ್ದರೂ ಬೆಲೆ ಕುಸಿತದಿಂದ ಬೆಳೆಗಾರರು ಕಂಗಾಲಾಗಿದ್ದಾರೆ. ಜಿಲ್ಲೆಯಲ್ಲಿ ಬೆಳೆಯುವ ಅರಿಶಿಣ ಅತ್ಯಂತ ಉತ್ಕೃಷ್ಟವಾಗಿದ್ದು ನೆರೆ ರಾಜ್ಯಗಳಲ್ಲಿ ತುಂಬಾ ಬೇಡಿಕೆಯಿದೆ. ಆದರೂ ಇದನ್ನು ತಮಿಳುನಾಡಿನ ಈರೋಡಿಗೆ ಕೊಂಡೊಯ್ದು ಮಾರಾಟ ಮಾಡಬೇಕಾಗಿದ್ದು ಸೂಕ್ತ ಬೆಲೆ ಸಿಗುತ್ತಿಲ್ಲ. ಪ್ರತಿ ಎಕರೆ ಬೆಳೆಯಲು 2 ಲಕ್ಷ ಖರ್ಚಾಗುತ್ತಿದ್ದರೂ ಮಾರುಕಟ್ಟೆಯಲ್ಲಿ ಕೇವಲ ಕ್ವಿಂಟಾಲ್‌ಗೆ 5 ಸಾವಿರಕ್ಕೆ ಇಳಿದಿದೆ. ಇದರಿಂದ ರೈತರು ತುಂಬಾ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ಸರ್ಕಾರ ಕನಿಷ್ಟ ಬೆಂಬಲ ನೀಡಬೇಕು ಎಂದು ಒತ್ತಾಯಿಸಿದರು.



ಸರ್ಕಾರದ ಪರವಾಗಿ ಗೋವಿಂದ ಕಾರಜೋಳ ಉತ್ತರಿಸಿ ಈಗಾಗಲೇ ಕೇಂದ್ರ ಸರ್ಕಾರ ಘೋಷಿಸಿದ ಬೆಲೆಯನ್ನು ಕೊಡಲಾಗುತ್ತಿದ್ದು ರಾಜ್ಯಸರ್ಕಾರದಿಂದ ಈ ಬಗ್ಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

ಒಂದನೇ ಪುಟದಿಂದ

ಬಂದು ಬಿತ್ತು ರಾಶಿ ರಾಶಿ ಕಸ

ಬೆಳೆದಿರುವ ಕಳೆಗಿಡ, ಹುಲ್ಲನ್ನು ತೆರವು ಗೊಳಿಸುವಂತೆ ಸೂಚನೆ ನೀಡಿದರು.

ಸ್ವಚ್ಛತಾ ಅಭಿಯಾನ: ಸಭೆ ಬಳಿಕ ಸಂಸದ ಪ್ರತಾಪ ಸಿಂಹ ಮಾತನಾಡಿ, ರಿಂಗ್ ರಸ್ತೆಯ ಇಕ್ಕೆಲಗಳಲ್ಲಿ ಕಸಕ್ಕೆ ಬೆಂಕಿ ಹಾಕಿದ್ದರಿಂದ ಆರು ವರ್ಷಗಳಿಂದ ಶ್ರಮವಹಿಸಿ ಬೆಳೆಸಿದ್ದ ಮರಗಳು ನಾಶವಾಗಿವೆ. ಇದೀಗ ಮತ್ತೆ ಕಸ ಹೆಚ್ಚಾಗಿದೆ. ಹಾಗಾಗಿ ರಿಂಗ್ ರಸ್ತೆಯಲ್ಲಿ ಸಂಗ್ರಹವಾಗುವ ಕಸವನ್ನು ಒಂದೆಡೆ ಸಾಗಿಸಿ ಅಲ್ಲಿ ವಿಲೇವಾರಿ ಮಾಡಬೇಕು. ಕತ್ತಲು ಆವರಿಸಿದಾಗ ಕಸ ಸುರಿದು ಪರಾರಿಯಾಗುತ್ತಿದ್ದರು. ರಸ್ತೆಯುದ್ದಕ್ಕೂ ದೀಪ ಅಳವಡಿಸಿದ ನಂತರ ನಾನಾ ಕಸ, ತ್ಯಾಜ್ಯ ಸುರಿಯುವವರ ಸಂಖ್ಯೆ ಕ್ಷೀಣಿಸಿತ್ತು. ಆದರೆ ಇದೀಗ ಮತ್ತೆ ಕಸ, ಕಟ್ಟಡದ ತ್ಯಾಜ್ಯದ ಜೊತೆಗೆ ಮಾಂಸ ದಂಗಡಿಗಳ ತ್ಯಾಜ್ಯ ಸುರಿದು ರಿಂಗ್ ರಸ್ತೆಯಲ್ಲಿ ಅನೈರ್ಮಲ್ಯತೆ ಸೃಷ್ಟಿಸುತ್ತಿದ್ದಾರೆ. ಇದರಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮುಜು ಗರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಿಂಗ್ ರಸ್ತೆಯನ್ನು ಸ್ವಚ್ಛ ಗೊಳಿಸುವ ಅಭಿಯಾನ ಆರಂಭಿಸಲಾಗುತ್ತಿದೆ. ಮೈಸೂರು ಮಹಾ ನಗರ ಪಾಲಿಕೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿ ಒಳಗೊಂಡು ನಾಲ್ಕು ದಿನ ಸಚ್ಛತಾ ಅಭಿಯಾನ ನಡೆಸಲಾಗುವುದು ಎಂದು ತಿಳಿಸಿದರು.

ರಿಂಗ್ ರಸ್ತೆಗೆ ಬೆಳಕು ಬಂದ ನಂತರ ಈ ರೀತಿ ಕಸ ಹಾಕುವುದು ನಿಯಂತ್ರಣಕ್ಕೆ ಬರುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಸಾಕಷ್ಟು ಮಂದಿ ಮಧ್ಯರಾತ್ರಿಯಲ್ಲಿ ಬಂದು ಕಸ ಸುರಿದು ಹೋಗುತ್ತಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಿಂಗ್ ರಸ್ತೆಯ ದೀಪದ ವಿದ್ಯುತ್ ಬಿಲ್ ಕಟ್ಟುವ ಜವಾಬ್ದಾರಿ ವಹಿಸಿಕೊಂಡಿದೆ. ಅದೇ ಮಾದರಿಯಲ್ಲಿ ಪಾಲಿಕೆ, ನಗರಸಭೆ, ಪಟ್ಟಣ ಪಂಚಾಯಿತಿ ರಿಂಗ್ ರಸ್ತೆಯ ಕಸ ವಿಲೇವಾರಿ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದರು.

ಹಸ್ತಾಂತರದ ಸಮಸ್ಯೆ: ಮೈಸೂರಿನ ವಿಜಯನಗರದ ನಾಲ್ಕನೇ ಹಂತದಲ್ಲಿರುವ 35ಕ್ಕೂ ಹೆಚ್ಚು ಖಾಸಗಿ ಬಡಾವಣೆಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಿಲ್ಲ. ಇದರಿಂದ ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ಸೇರಿಸಿ ಕೊಳ್ಳಲು ಕಾನೂನು ತೊಡಕು ಇದೆ. ಆ ಬಡಾವಣೆಗಳಿಗೆ ಇಂದಿಗೂ ಕುಡಿಯುವ ನೀರು, ಚರಂಡಿ, ರಸ್ತೆ ಸೌಲಭ್ಯವಿಲ್ಲ. ಮೂಲ ಭೂತ ಸೌಲಭ್ಯ ಕಲ್ಪಿಸಿದ್ದರೆ ಬಡಾವಣೆ ಹಸ್ತಾಂತರ ಮಾಡಿಕೊಳ್ಳಬಹುದಾಗಿತ್ತು. ಹಾಗಾಗಿ ಕಸ ಸಂಗ್ರಹಿಸಲು ಮುಡಾ ವತಿಯಿಂದ ಯಾವುದೇ ವ್ಯವಸ್ಥೆ ಮಾಡಿಲ್ಲ. ಅದಕ್ಕಾಗಿ ರಿಂಗ್ ರಸ್ತೆಗೆ ಕಸ ತಂದು ಎಸೆದು ಹೋಗುತ್ತಿದ್ದಾರೆ ಎಂದು ಹೂಟಗಳ್ಳಿ ನಗರಸಭೆ ಆಯುಕ್ತ ನರಸಿಂಹಸ್ವಾಮಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ ಸಿಂಹ, ನಿಯಮಾವಳಿಯಂತೆ ಮೂಲಭೂತ ಸೌಲಭ್ಯ ಕಲ್ಪಿಸದೇ ಬಡಾವಣೆ ನಿರ್ಮಿಸಿರುವ ಡೆವಲಪರ್ಸ್ ಕಪ್ಪುಪಟ್ಟಿಗೆ ಸೇರಿಸಬೇಕು. ಈ ಸಂಬಂಧ ಮುಡಾ, ಪಾಲಿಕೆ ಹಾಗೂ ಹೂಟಗಳ್ಳಿ ನಗರಸಭೆ ಅಧಿಕಾರಿಗಳ ಸಭೆ ಕರೆದು ಅತಂತ್ರ ಸ್ಥಿತಿಯಲ್ಲಿರುವ 35 ಖಾಸಗಿ ಬಡಾವಣೆಗಳ ಸೇರಿಸಿಕೊಳ್ಳಲು ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ತ್ಯಾಜ್ಯ ಹಾಕುವುದನ್ನು ನಿಯಂತ್ರಿಸಿ: ರಿಂಗ್ ರಸ್ತೆಯ ಸರ್ವಿಸ್ ರಸ್ತೆಯಲ್ಲಿ ಪೆಟ್ಟಿಗೆ ಅಂಗಡಿ ಇಡಲು ಅವಕಾಶವಿಲ್ಲ. ಬೀದಿ ನಾಯಿಗಳಿಂದ ಆಗುತ್ತಿರುವ ತೊಂದರೆ ನಿಯಂತ್ರಿಸಬೇಕು. ಕ್ಷೌರ ಮಾಡಿದ ಕೂದಲು, ಕುರಿ, ಕೋಳಿ ಮಾಂಸದ ತ್ಯಾಜ್ಯ, ಕಟ್ಟಡ ತ್ಯಾಜ್ಯ ಹಾಕುವುದನ್ನು ತಪ್ಪಿಸಬೇಕು. ಕಸ ಹೆಚ್ಚಾಗಿ ಹಾಕುತ್ತಿರುವ ಕಡೆಗಳಲ್ಲಿ ಕಂಟೇನರ್ ಇಡಬೇಕು ಎಂದರು.

ಆಸ್ಫಾಲ್ಟಿಂಗ್ ವರ್ಕ್: ಮೇಯರ್ ಶಿವಕುಮಾರ್ ಮಾತನಾಡಿ, ಪಾಲಿಕೆ ರಿಂಗ್ ರಸ್ತೆಯಲ್ಲಿ ದೀಪದ ಕೇಬಲ್ ಅಳವಡಿಸಲು ತೆಗೆಯಲಾಗಿದ್ದ ಟ್ರಂಚ್ ಮುಚ್ಚಲು (ಆಸ್ಫಾಲ್ಟಿಂಗ್ ವರ್ಕ್)60 ಲಕ್ಷ ರೂ. ಅನುದಾನ ನೀಡಲು ಮೈಸೂರು ಮಹಾನಗರ ಪಾಲಿಕೆ ಒಪ್ಪಿಕೊಂಡಿದೆ. ಹೆದ್ದಾರಿ ಪ್ರಾಧಿಕಾರ ಅಧಿಕೃತ ಪತ್ರ ಸಲ್ಲಿಸಿದಲ್ಲಿ, ಕೂಡಲೇ ಹಣ ನೀಡಲು ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು. ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಯೋಗ ದಿನ ಸಂದರ್ಭ ಹಾಗೂ ದಸರಾ ಮುನ್ನ ರಿಂಗ್ ರಸ್ತೆಯಲ್ಲಿ ಸ್ವಚ್ಛತೆ ಮಾಡಲಾಗಿತ್ತು. ಈಗ ಮತ್ತೊಮ್ಮೆ ನಾಲ್ಕು ದಿನ ಅಭಿಯಾನ ನಡೆಸಲು ಪಾಲಿಕೆ ಸಿದ್ಧವಿದೆ. ಅದಕ್ಕೆ ಬೇಕಾದ ಎಲ್ಲಾ ಸಹಕಾರ ನೀಡಲಾಗುವುದು. ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು. ಸಭೆಯಲ್ಲಿ ಉಪಮೇಯರ್ ಡಾ.ರೂಪ, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಇಇ ರಾಜೇಂದ್ರಕುಮಾರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ನಿಲ್ದಾಣ ವಿಸ್ತರಣಾ ಕಾಮಗಾರಿ ಶೀಘ್ರ ಆರಂಭ

ಈಗಾಗಲೇ ಸರ್ಕಾರವು ಭೂಸ್ವಾಧೀನಕ್ಕೆ 320 ಕೋಟಿ ರೂ. ಅನುದಾನ ಮಂಜೂರು ಮಾಡಿ, ಅದರಲ್ಲಿ 150 ಕೋಟಿ ರೂ. ಬಿಡುಗಡೆ ಮಾಡಿದೆ. ಅದರಲ್ಲಿ ಭೂ ಮಾಲೀಕರಿಗೆ ಪರಿಹಾರ ನೀಡಿ, ಅಗತ್ಯವಿರುವ ಹಣಕ್ಕಾಗಿ ಪ್ರಸ್ತಾವನೆ ಸಲ್ಲಿಸಿದಲ್ಲಿ ತಾವು ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಿ ಹಣ ಕೊಡಿಸುವುದಾಗಿ ತಿಳಿಸಿದ ಅವರು, ಈಗಾಗಲೇ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯನ್ನು ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಸಲಹೆ ನೀಡಿದರು.

ಈಗ ಲಭ್ಯವಿರುವ ಭೂಮಿ ಹಸ್ತಾಂತರಿಸುತ್ತಿದ್ದಂತೆ ವಿಮಾನ ನಿಲ್ದಾಣದ ಉನ್ನತೀಕರಣ ಮತ್ತು ರನ್‌ವೇ ವಿಸ್ತರಣಾ ಕಾರ್ಯವನ್ನು ಪ್ರಾಧಿಕಾರ ಕೈಗೆತ್ತಿಕೊಳ್ಳುತ್ತದೆ. ಉಳಿಕೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ನೀಡಿದಲ್ಲಿ ಬಾಕಿ ಕಾಮಗಾರಿಯನ್ನು ಹಂತ ಹಂತವಾಗಿ ಮುಂದುವರಿಸಿ, ಹೆಚ್ಚು ಹೆಚ್ಚು ವಿಮಾನಗಳು ಮೈಸೂರಿನಿಂದ ದೇಶದ ವಿವಿಧ ನಗರಗಳಿಗೆ ಹಾರಾಟ ನಡೆಸುವ ವ್ಯವಸ್ಥೆ ಮಾಡಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು. ರನ್‌ವೇ ವಿಸ್ತರಣೆಗಾಗಿ ಪ್ರಸ್ತುತ ಇರುವ ನಂಜನಗೂಡು ಹೆದ್ದಾರಿಯನ್ನು ಬಂದ್ ಮಾಡಿ, ಸುರಂಗ ಮಾರ್ಗದ ಮೂಲಕ ವಾಹನಗಳು ಸಾಗುವಂತೆ ಮಾಡಲು ಈ ಹಿಂದೆ ಯೋಜನೆ ರೂಪಿಸಲಾಗಿತ್ತು. ಆದರೆ ಡಿಪಿಆರ್ ಅನ್ನು ಬದಲಾವಣೆ ಮಾಡಲಾಗಿದ್ದು, ಪ್ರಸ್ತುತ ಇರುವ ಹೆದ್ದಾರಿಯನ್ನು ಏರ್‌ಪೋರ್ಟ್ ಬಳಿ ಎಡಭಾಗಕ್ಕೆ ಸ್ಥಳಾಂತರಿಸಿ ಮತ್ತೆ ನಂಜನಗೂಡು ರಸ್ತೆ ಮೂಲಕ ಸಂಚರಿಸಲು ಹೆದ್ದಾರಿಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಡುವಂತೆ ಕೆಐಎಡಿಬಿ ಅಧಿಕಾರಿಗಳಿಗೆ ಸಂಸದರು ಸೂಚನೆ ನೀಡಿದ್ದಾರೆ. ರನ್‌ವೇ ವಿಸ್ತರಣೆಯಾದಲ್ಲಿ ಭಾರೀ ವಿಮಾನಗಳು ಮೈಸೂರಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾಚರಿಸಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಕೆಐಎಡಿಬಿ, ಸಣ್ಣ ನೀರಾವರಿ, ಸೆಸ್ಕ್, ಕೆಪಿಟಿಸಿಎಲ್ ಅಧಿಕಾರಿಗಳು ಸಮನ್ವಯತೆ ಸಾಧಿಸಿ ಭೂಮಿ ಸ್ವಾಧೀನಪಡಿಸಿಕೊಡುವಂತೆ ಪ್ರತಾಪ್ ಸಿಂಹ ತಿಳಿಸಿದರು. ಕೆಐಎಡಿಬಿ ಅಭಿವೃದ್ಧಿ ಅಧಿಕಾರಿ ಮೂರ್ತಿ, ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್. ಮಂಜುನಾಥ್, ಸಣ್ಣ ನೀರಾವರಿ, ಸೆಸ್ಕ್, ಕೆಪಿಟಿಸಿಎಲ್ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ನಮ್ಮೆಲ್ಲರಿಗೂ ಆದರ್ಶ ದೇವೇಗೌಡರು

ನಾಯಕರಾಗಿ, ಉಪಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ತೆಗೆದುಕೊಂಡ ತೀರ್ಮಾನ ಮತ್ತು ಘಟನಾವಳಿಗಳನ್ನು ಮೆಲುಕು ಹಾಕಿದರು. ನಮ್ಮೆಲ್ಲ ಬೆಳವಣಿಗೆಗೆ ಆರ್‌ಎಸ್‌ಎಸ್ ಕಾರಣ ಎಂದ ಯಡಿಯೂರಪ್ಪನವರು, ಮಾಜಿ ಪ್ರಧಾನಿ ದೇವೇಗೌಡರು, ನಮ್ಮ ಆದರ್ಶ ನಾಯಕರು ಎಂದರೆ ತಪ್ಪಾಗಲಾರದು. ಈ ವಯಸ್ಸಿನಲ್ಲೂ ದೇಶ, ರಾಜ್ಯದ ಬಗ್ಗೆ ಚಿಂತನೆ ನಡೆಸುತ್ತಾರೆ. ಆಳುವ ಸರ್ಕಾರಗಳಿಗೆ ಮಾರ್ಗದರ್ಶನ ನೀಡುತ್ತಾರೆ. ದೇವೇಗೌಡರ ಬಳಿ ಕಲಿಯುವುದು ಬಹಳಷ್ಟಿದೆ ಎಂದು ತಮ್ಮ ಅಲ್ಪ ಭಾಷಣದಲ್ಲಿ ಮಾಜಿ ಪ್ರಧಾನಿಗಳ ಗುಣಗಾನ ಮಾಡಿದರು.

10 ಕೆಜಿ ಉಚಿತ ಅಕ್ಕಿ ನೀಡ್ತೇವೆ...

ದಿನ ಅಧಿಕಾರ ಸ್ವೀಕಾರ ಮಾಡಿ ರಾಜ್ಯ ಹಾಗೂ ದೇಶಕ್ಕೆ ಸಂದೇಶ ಕೊಟ್ಟಿತ್ತು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮಾಡಲು ಸಾಧ್ಯವಾಗದ ಯೋಜನೆಗಳನ್ನು ಈಗ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಮೂಲಕ ಮಾಡುತ್ತಿದೆ. ಇನ್ನು ಕೇಂದ್ರ ಸರ್ಕಾರ ಎನ್‌ಇಪಿಯಲ್ಲಿ 1 ನೇ ತರಗತಿ ಸೇರಲು ಮಕ್ಕಳಿಗೆ 6 ವರ್ಷ ವಯೋಮಿತಿ ನಿಗದಿ ಮಾಡಿರುವುದರಿಂದ ಅನೇಕ ಮಕ್ಕಳಿಗೆ ತೊಂದರೆಯಾಗಿದೆ. ನಾವು ಕೂಡ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದು, ಈಗಿರುವ ಪದ್ಧತಿಯಲ್ಲಿ ಯಾವ ಲೋಪವಿದೆ. ಶಿಕ್ಷಣ ಎಂಬುದು ರಾಜ್ಯಕ್ಕೆ ಸಂಬಂಧಿಸಿದ ವಿಚಾರವಾಗಿದ್ದು, ಕೇಂದ್ರ ಇದರಲ್ಲಿ ಹಸ್ತಕ್ಷೇಪ ಮಾಡಬಾರದು. ನಾವು ಅಧಿಕಾರಕ್ಕೆ ಬಂದರೆ ಎನ್‌ಇಪಿ ಜಾರಿಗೆ ಅವಕಾಶ ನೀಡವುದಿಲ್ಲ. ನಮ್ಮ ರಾಜ್ಯ ಜ್ಞಾನದ ರಾಜಧಾನಿಯಾಗಿದ್ದು, ದೇಶದಲ್ಲಿ ಇಂಜಿನಿಯರ್, ಡಾಕ್ಟರ್ ಹಾಗೂ ನರ್ಸ್‌ಗಳು ರಾಜ್ಯದಿಂದಲೇ ಹೆಚ್ಚು ತಯಾರಾಗಿದ್ದಾರೆ. ಹೀಗೆ ನಮ್ಮ ರಾಜ್ಯ ಶಿಕ್ಷಣದ ಎಲ್ಲ ಹಂತದಲ್ಲೂ ದೇಶಕ್ಕೆ ಮಾದರಿಯಾಗಿದೆ. ಬಿಜೆಪಿ ಚುನಾವಣಾ ಪ್ರಣಾಳಿಕೆ ತೆಗೆದು ನೋಡಿ, ರೈತರಿಗೆ 1 ಲಕ್ಷ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರು. 7 ರಿಂದ 10 ಗಂಟೆ ಉಚಿತ ವಿದ್ಯುತ್ ನೀಡುವುದಾಗಿ ಹೇಳಿದ್ದರು. ಡಬಲ್ ಇಂಜಿನ್ ಸರ್ಕಾರದಲ್ಲಿ ಇದು ಸಾಧ್ಯವಾಗಲಿಲ್ಲ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಅವರು ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಹೆಚ್ಚುವರಿ ವಿದ್ಯುತ್ ಅನ್ನು ಬೇರೆ ರಾಜ್ಯಕ್ಕೆ ಮಾರಿ 4 ಸಾವಿರ ಕೋಟಿ ಲಾಭ ಮಾಡಿದ್ದೇವೆ ಎಂದು ಹೇಳಿದ್ದಾರೆ. ದೇಶದ ಇಂಧನ ಉತ್ಪಾದನೆ ಇತಿಹಾಸದಲ್ಲೇ ರಾಜ್ಯವೊಂದು ಹೆಚ್ಚುವರಿ ವಿದ್ಯುತ್ ಮಾರಾಟ ಮಾಡುತ್ತಿರುವುದು ಇದೇ ಮೊದಲು.

ನಾವೇ ಮಾದರಿ: ನಮ್ಮ ಯೋಜನೆ ಬೇರೆ ರಾಜ್ಯಗಳಿಗೆ ಮಾದರಿಯಾಗಿದೆ. ಅವರು 600 ಭರವಸೆಗಳಲ್ಲಿ 50 ಮಾತ್ರ ಈಡೇರಿಸಿದ್ದಾರೆ. ಇನ್ನು ನಮ್ಮ ಸರ್ಕಾರ ಮನೆಯೊಡತಿಗೆ 2000 ರೂ. ನೀಡುವುದಾಗಿ ಘೋಷಿಸಿದೆ. ಈ ಸರ್ಕಾರ ಮೊದಲು 500 ರೂ. ನೀಡುವುದಾಗಿ ಘೋಷಿಸಿ ಈಗ 1000 ರೂ. ನೀಡಲು ತೀರ್ಮಾನಿಸಿದೆ. ಇದು ಮಾತ್ರ ಹೇಗೆ ಸಾಧ್ಯವಾಗುತ್ತದೆ ಎಂದು ಪ್ರಶ್ನಿಸಿದರು.

ಅತೀ ವೇಗಕ್ಕೆ ಒಂದು ಬಲಿ

ಬಡಾವಣೆ ನಿವಾಸಿ ಶಿವಕುಮಾರ್, ತಮ್ಮ ಸ್ವಿಫ್ಟ್ ಡಿಸೈರ್ (ಕೆಎ 55 ಎಂ 4291) ಕಾರಿನಲ್ಲಿ ಮಂಡ್ಯದಿಂದ ಮೈಸೂರಿಗೆ ತೆರಳುತ್ತಿದ್ದರು. ಅತೀ ವೇಗವಾಗಿ ಚಲಿಸುತ್ತಿದ್ದ ಇವರ ಕಾರು ಶ್ರೀರಂಗಪಟ್ಟಣ ತಾಲೂಕಿನ ಗೌರಿಪುರ ಬಳಿ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ನಂತರ ಹಾರಿ ಪಕ್ಕದ ಟ್ರ್ಯಾಕ್‌ನಲ್ಲಿ ಮೈಸೂರಿನಿಂದ ಬೆಂಗಳೂರು ಕಡೆಗೆ ಚಲಿಸುತ್ತಿದ್ದ ಸೆಲೆರಿಯೋ ಕಾರಿಗೆ (ಕೆಎ 09 9690) ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ ಎರಡೂ ಕಾರುಗಳು ನಜ್ಜುಗುಜ್ಜಾಗಿದ್ದು, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲರೂ ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಪೂಜಾ ಸಾವನ್ನಪ್ಪಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಅಮಿಟಿ ಲೇಡಿಸ್ ಸರ್ಕಲ್-108 ವತಿಯಿಂದ

ಇಂದಿನಿಂದ ಕ್ಯಾನ್ಸರ್ ರೋಗಿಗಳ ವಿಗ್‌ಗಾಗಿ ಕೇಶದಾನ ಅಭಿಯಾನ

ಮೈಸೂರು,ಫೆ.24(ಪಿಎಂ)– ಮೈಸೂರು ಅಮಿಟಿ ಲೇಡಿಸ್ ಸರ್ಕಲ್–108ರ ವತಿಯಿಂದ ಕಿಮಾಯ ಬ್ಯೂಟಿ ಸ್ಟುಡಿಯೋ ಸಹಯೋಗದಲ್ಲಿ ಕ್ಯಾನ್ಸರ್ ರೋಗಿಗಳ ವಿಗ್‌ಗಾಗಿ 'ಹೇರ್ ಫಾರ್ ಹೋಪ್' ಶೀರ್ಷಿಕೆಯಡಿ ಫೆ25ರಿಂದ ಮಾ.15ರವರೆಗೆ ಕೇಶದಾನ ಅಭಿಯಾನ ಆಯೋಜಿಸಲಾಗಿದೆ ಎಂದು ಸರ್ಕಲ್‌ನ ಅಧ್ಯಕ್ಷೆ ಅಪರ್ಣಾರಂಗ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಭಿಯಾನದ ಮೂಲಕ ಕ್ಯಾನ್ಸರ್ ರೋಗಿಗಳಿಗೆ ನೆರವಾಗಲು ಆಸಕ್ತರು ತಮ್ಮ ಕೂದಲನ್ನು ದಾನವಾಗಿ ನೀಡಬಹುದು. ವಿಶೇಷ ಶೈಲಿಗಾಗಿ ತಮ್ಮ ಕೂದಲನ್ನು ತೆಗೆಸಿಕೊಳ್ಳುವ ಮಹಿಳೆಯರೂ ಇರುತ್ತಾರೆ. ಅಂತಹವರು ಈ ಅಭಿಯಾನದ ಮೂಲಕ ನೆರವಾಗಬಹುದು ಎಂದರು.

12 ಇಂಚು ಉದ್ದದಷ್ಟು ಕೂದಲನ್ನು ದಾನಿಗಳಿಂದ ಸಂಗ್ರಹಿಸಲಾಗುವುದು. ಇದನ್ನು ಕ್ಯಾನ್ಸರ್ ರೋಗಿಗಳಿಗಾಗಿ ವಿಗ್‌ಗಳನ್ನು ತಯಾರಿಸುವ ಸಹಾಯಾರ್ಥ ಸಂಸ್ಥೆಗಳಿಗೆ ನೀಡಲಾಗುವುದು. ಸದರಿ ಸಂಸ್ಥೆಗಳು ಅಗತ್ಯವಿರುವ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ವಿಗ್‌ಗಳನ್ನು ನೀಡಲಿದ್ದಾರೆ. ಕ್ಯಾನ್ಸರ್ ರೋಗಿಗಳಲ್ಲಿ ಮಹಿಳೆಯರು, ಯುವತಿಯರು ಚಿಕಿತ್ಸೆ ಸಂದರ್ಭದಲ್ಲಿ ತಮ್ಮ ಕೂದಲನ್ನು ಕಳೆದುಕೊಳ್ಳುತ್ತಾರೆ. ಇದು ಅವರ ಆತ್ಮವಿಶ್ವಾಸಕ್ಕೆ ಧಕ್ಕೆ ಉಂಟು ಮಾಡಲಿದೆ. ಅವರು ಆತ್ಮವಿಶ್ವಾಸ ಕಳೆದುಕೊಳ್ಳದಂತೆ ಮಾಡುವಲ್ಲಿ ಈ ಅಭಿಯಾನ ಮಹತ್ವದ ಪಾತ್ರ ವಹಿಸುವ ವಿಶ್ವಾಸವನ್ನು ನಮ್ಮ ಸರ್ಕಲ್ ಹೊಂದಿದೆ ಎಂದು ತಿಳಿಸಿದರು.

ನಮ್ಮ ಸರ್ಕಲ್ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಅನೇಕ ಸೇವಾ ಚಟುವಟಿಕೆ ನಡೆಸಲಾಗುತ್ತಿದೆ. ಅದರಲ್ಲಿ ಈ ಅಭಿಯಾನವೂ ಒಂದಾಗಿದೆ. ಅಗತ್ಯವಿರುವ ಮತ್ತೊಬ್ಬರಿಗೆ ಕೂದಲನ್ನು ದಾನ ಮಾಡುವುದು ಪ್ರೀತಿಯ ಅಭಿವ್ಯಕ್ತಿಯ ಮಾರ್ಗವಾಗಿದೆ. ತಮ್ಮ ಕೂದಲನ್ನು ದಾನ ನೀಡುವ ಮೂಲಕ ಕ್ಯಾನ್ಸರ್ ರೋಗಿಗಳಿಗೆ ತಮ್ಮ ಪ್ರೀತಿ–ಸಹಾನುಭೂತಿ ವ್ಯಕ್ತಪಡಿಸಲು ಈ ಅಭಿಯಾನ ವೇದಿಕೆಯಾಗಿದೆ ಎಂದರು.

ಹತ್ತು ಹಲವು ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ನಮ್ಮ ಸರ್ಕಲ್, ಶಾಲಾ ಕೊಠಡಿ ಹಾಗೂ ಶೌಚಾಲಯಗಳನ್ನು ನಿರ್ಮಿಸಿ ಶಿಕ್ಷಣಕ್ಕೆ ಅಗತ್ಯ ಮೂಲ ಸೌಕರ್ಯ ಒದಗಿಸುವಲ್ಲಿ ವಿಶೇಷವಾಗಿ ಕೆಲಸ ಮಾಡುತ್ತಿದೆ. ಕ್ಯಾನ್ಸರ್ ಚಿಕಿತ್ಸೆ ಮತ್ತು ಮಹಿಳಾ ಸಬಲೀಕರಣದಲ್ಲಿಯೂ ಸರ್ಕಲ್ ಸೇವೆ ಸಲ್ಲಿಸುತ್ತಿದೆ. ಕಳೆದ 4 ವರ್ಷಗಳಲ್ಲಿ 200 ಮಂದಿ ಈ ಅಭಿಯಾನದ ವೇಳೆ ಕೇಶದಾನ ಮಾಡಿದ್ದಾರೆ ಎಂದು ತಿಳಿಸಿದರು. ಸರ್ಕಲ್‌ನ ಖಜಾಂಚಿ ಅನುಷಾ, ಅಭಿಯಾನದ ಸಂಚಾಲಕಿ ಸಹನಾ, ಸಹ ಸಂಚಾಲಕಿ ಸಂಪದಾ ಜೈನ್, ಪ್ರಚಾರ ಸಂಚಾಲಕಿ ಪ್ರಿಯಾಂಕಾ ಗೋಷ್ಠಿಯಲ್ಲಿದ್ದರು.

ಸರ್ಕಲ್‌ನ ಅಧ್ಯಕ್ಷೆ ಅಪರ್ಣಾರಂಗ ಮಾಹಿತಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ಅಮಿಟಿ ಲೇಡಿಸ್ ಸರ್ಕಲ್–108ರ ಅಧ್ಯಕ್ಷೆ ಅಪರ್ಣಾರಂಗ (ಎಡದಿಂದ 3ನೇಯವರು) ಮಾತನಾಡಿದರು. (ಎಡದಿಂದ) ಸರ್ಕಲ್‌ನ ಖಜಾಂಚಿ ಅನುಷಾ, ಅಭಿಯಾನದ ಸಂಚಾಲಕಿ ಸಹನಾ, ಸಹ ಸಂಚಾಲಕಿ ಸಂಪದ ಜೈನ್, ಪ್ರಚಾರ ಸಂಚಾಲಕಿ ಪ್ರಿಯಾಂಕಾ ಚಿತ್ರದಲ್ಲಿದ್ದಾರೆ.

ಕೇಶದಾನಕ್ಕಾಗಿ ಕಿಮಾಯ ಬ್ಯೂಟಿ ಸ್ಟುಡಿಯೋಗೆ ಭೇಟಿ ನೀಡಿ...

4 ವರ್ಷದ ಮೇಲ್ಪಟ್ಟ ಮಕ್ಕಳು ಸೇರಿದಂತೆ ಮಹಿಳೆಯರು, ಪುರುಷರು ತಮ್ಮ ಕೂದಲನ್ನು ದಾನ ಮಾಡಬಹುದು. ಇದಕ್ಕಾಗಿ ಕಿಮಾಯ ಬ್ಯೂಟಿ ಸ್ಟುಡಿಯೋಗೆ (8ನೇ ಮೇನ್, 5ನೇ ಕ್ರಾಸ್, 3ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು–06) ಭೇಟಿ ನೀಡಬಹುದು. ಸದರಿ ಸ್ಟುಡಿಯೋದ ದೂ.ಸಂ. 0821–4266616 ಅಥವಾ ಮೊ.ಸಂ. 70225 54243 ಅನ್ನು ಸಂಪರ್ಕಿಸಿದರೆ ಅವರು ಸಮಯ ನೀಡಲಿದ್ದಾರೆ. ಕೂದಲನ್ನು ತೆಗೆದುಕೊಂಡ ಬಳಿಕ ಉಚಿತವಾಗಿ ಬೇಸಿಕ್ ಹೇರ್‌ಕಟ್ ಮಾಡಿಕೊಡಲಿದ್ದಾರೆ. ಅಲ್ಲದೆ, ಸ್ವಯಂ ಆಗಿ ಕತ್ತರಿಸಿದ ಕೂದಲು ನೀಡಲಿಚ್ಛಿಸುವವರು ಸಹ ದೂರವಾಣಿ ಮೂಲಕ ಸಂಪರ್ಕಿಸಬಹುದು.

-ಅಪರ್ಣಾರಂಗ

ನಾಳೆ ಮೈಸೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸ್ನೇಹಕೂಟ

ಪ್ರೊ.ಆರ್.ಇಂದಿರಾ ಅವರಿಗೆ ಅಭಿನಂದನೆ





ಮೈಸೂರು,ಫೆ.24(ಪಿಎಂ)– ಮಾನಸ ಗಂಗೋತ್ರಿಯ ಮೈಸೂರು ವಿವಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಫೆ26ರಂದು ವಿಭಾಗದ ಹಿರಿಯ ವಿದ್ಯಾರ್ಥಿಗಳ ಸ್ನೇಹಕೂಟ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷೆ ಹೆಚ್.ಎಂ.ವಸಂತಮ್ಮ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾರಾಜ ಶತಮನೋತ್ಸವ ಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಮುಜಾಫರ್ ಅಸ್ಸಾದಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇದೇ ವೇಳೆ ವಿಭಾಗದ ಹಿರಿಯರನ್ನು ಗೌರವಿಸಲಾಗುವುದು. ಅಲ್ಲದೆ, ಭಾರತೀಯ ಸಮಾಜಶಾಸ್ತ್ರ ಸಂಘದಿಂದ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾದ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ ಅವರನ್ನು ಅಭಿನಂದಿಸಲಾಗುವುದು ಎಂದರು.

ಜೆಎನ್‌ಯು ಸೆಂಟರ್ ಫಾರ್ ದಿ ಸ್ಟಡಿ ಆಫ್ ಸೋಷಿಯಲ್ ಸಿಸ್ಟಮ್ಸ್‌ನ ಹಿರಿಯ ಪ್ರಾಧ್ಯಾಪಕ ಪ್ರೊ.ಎಂ.ಎನ್. ಪಾಣಿ ಮುಖ್ಯ ಅತಿಥಿಯಾಗಿ ಭಾಗ ವಹಿಸಲಿದ್ದಾರೆ ಸಮಾಜ ವಿಜ್ಞಾನಗಳಲ್ಲಿ ಸಮಾಜಶಾಸ್ತ್ರ ಅತ್ಯಂತ ಪ್ರಮುಖ ವಿಷಯ. ಎನ್‌ಇಪಿ–2020ರ ಜಾರಿ ಬಳಿಕ ಇದರ ಅಧ್ಯಯನ ವ್ಯಾಪ್ತಿ ಸೀಮಿತಗೊಳಿಸಲಾಗಿದೆ ಇಂತಹ ಅನೇಕ ವಿಷಯಗಳ ಕುರಿತು ಚರ್ಚೆ ಕೂಡ ನಡೆಯಲಿದೆ ಎಂದು ತಿಳಿಸಿದರು. ಸಂಘದ ಉಪಾಧ್ಯಕ್ಷ ಪ್ರೊ.ಎಂ. ರಾಫೆಲ್, ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶ್ರೀನಿವಾಸನ್, ಖಜಾಂಚಿ ಚಿಕ್ಕೆಂಪೇಗೌಡ ಗೋಷ್ಠಿಯಲ್ಲಿದ್ದರು.

ನಾಳೆ ಪಿಟೀಲು ಚೌಡಯ್ಯರ ಕುರಿತ 'ಕಲಾ ಕೌಸ್ತುಭ' ಆಂಗ್ಲ ಪುಸ್ತಕ ಬಿಡುಗಡೆ

ಮೈಸೂರು,ಫೆ.24(ಪಿಎಂ)– ಕರ್ನಾಟಕ ಸಂಗೀತಕ್ಕೆ ಪಿಟೀಲು ಟಿ.ಚೌಡಯ್ಯನವರ ಕೊಡುಗೆ ಕುರಿತು ರಚಿಸಿರುವ 'ಕಲಾ ಕೌಸ್ತುಭ' ಆಂಗ್ಲ ಪುಸ್ತಕ ಫೆ.26ರಂದು ಬಿಡುಗಡೆಗೊಳ್ಳಲಿದೆ ಎಂದು ಸದರಿ ಪುಸ್ತಕ ಕರ್ತೃ ಡಾ.ಪದ್ಮಾವತಿ ನರಸಿಂಹನ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷ್ಣಮೂರ್ತಿಪುರಂನ ನಿತ್ಯೋತ್ಸವ ಕನ್ವೆನ್ಷನ್ ಸೆಂಟರ್‌ನಲ್ಲಿ ಅಂದು ಬೆಳಗ್ಗೆ 11ಕ್ಕೆ ಚಿತ್ರವೀಣಾ ವಿದ್ವಾಂಸ ಎನ್.ರವಿಕಿರಣ್ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಟಿ.ಚೌಡಯ್ಯನವರ ಹಿರಿಯ ಶಿಷ್ಯೆ ಡಾ.ಅನಸೂಯ ಕುಲಕರ್ಣಿ ಪುಸ್ತಕ ಕುರಿತು ಮಾತನಾಡಲಿದ್ದಾರೆ. ಹಿರಿಯ ಮೃದಂಗ ವಿದ್ವಾಂಸ ಎ.ವಿ.ಆನಂದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.


ಇದಕ್ಕೂ ಮುನ್ನ ಬೆಳಗ್ಗೆ 10.30 ಏಕೈಕ ಏಳು ತಂತಿ ಪಿಟೀಲು ವಾದಕಿ ಜ್ಯೋತ್ಸ್ನಾ ಮಂಜುನಾಥ್ ಅವರು ಚೌಡಯ್ಯನವರ ಕೃತಿಗಳ ಏಳು ತಂತಿ ಪಿಟೀಲು ವಾದನ ಕಾರ್ಯಕ್ರಮ ನಡೆಯಲಿದೆ. ನನ್ನ ಪಿ.ಹೆಚ್‌ಡಿ ಮಹಾಪ್ರಬಂಧ ಆಧಾರಿತ ಪುಸ್ತಕ ಇದು. ಟಿ.ಚೌಡಯ್ಯನವರ ಜೀವನಾಧಾರಿತ ಸ್ವಾರಸ್ಯ ಪ್ರಸಂಗಗಳು, ಕೃತಿಗಳನ್ನು ಪುಸ್ತಕ ಒಳಗೊಂಡಿದೆ. ಅಲ್ಲದೆ, ವಿಶ್ಲೇಷಣೆ ಹಾಗೂ ಸಂಗೀತ ಲಿಪಿ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಹೇಳಿದರು. ಡಾ.ಪದ್ಮಾವತಿ ನರಸಿಂಹನ್ ಪುತ್ರ ದೀಮಂತ್, ಲೇಖಕ ಕೃರಾಮಚಂದ್ರ ಗೋಷ್ಠಿಯಲ್ಲಿದ್ದರು.



ಅಂಜುಮನ್ ಇ–ಹದೀಬತುಲ್ ಆದಾಬ್ ಅಧ್ಯಕ್ಷ ಡಾ. ಮಹಮದ್ ಸಲ ಹುದ್ದೀನ್ ನೇತೃತ್ವದ ನಿಯೋಗ ಶುಕ್ರವಾರ ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿ ಪ್ರೊ. ಮುಜಾಫರ್ ಅಸಾದಿ ಅವರನ್ನು ಅಭಿನಂದಿಸಿತು. ಅಂಜುಮಾನ್ ಸೈಯ್ಯದ್ ಶಫಿ ಅಹಮದ್, ಸೈಯ್ಯದ್, ಸಜ್ಜದ್ ಅಹಮದ್, ಮೊಹಮದ್ ಇಕ್ಬಾಲ್ ಹಾಗೂ ಅಬ್ದುಲ್ ರಹಮಾನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮಾರ್ಚ್ ಮೊದಲ ವಾರ ಹೈಟೆಕ್ ಹೆರಿಟೇಜ್ ಶೌಚಾಲಯ ಉದ್ಘಾಟನೆ





ಮೈಸೂರು, ಫೆ24(ಆರ್‌ಕೆ)–ಮೈಸೂರಿನ ಪುರಭವನದ ಆವರಣದಲ್ಲಿ ನಮ್ಮ ಮೈಸೂರು ಫೌಂಡೇಷನ್ (NMF) ನಿರ್ಮಿಸಿರುವ ಹೈಟೆಕ್ ಹೆರಿಟೇಜ್ ಶೌಚಾಲಯವನ್ನು ಮಾರ್ಚ್ ಮೊದಲ ವಾರ ಉದ್ಘಾಟಿಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರೊಂದಿಗೆ ಇಂದು ಶೌಚಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಿರುವ ಶೌಚಾಲಯದಲ್ಲಿ ಮಹಿಳೆಯರು, ಪುರುಷರಿಗಾಗಿ ಪ್ರತ್ಯೇಕ ಸ್ನಾನ ಗೃಹಗಳು, ವೆಸ್ಟರ್ನ್ ಮತ್ತು ಇಂಡಿಯನ್ ಟಾಯ್ಲೆಟ್‌ಗಳು, ಮಕ್ಕಳಿಗೆ ಹಾಲುಣಿಸುವ ಕೊಠಡಿ, ಟಿಕೆಟ್ ಕೌಂಟರ್, ಸ್ಟೋರ್ ರೂಂ, ಭದ್ರತಾ ಕೊಠಡಿ ಸೇರಿದಂತೆ ಮೂಲ ಸೌಲಭ್ಯ ಒದಗಿಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

40X60 ಅಡಿ ಜಾಗದಲ್ಲಿ ಗಾಂಧಿ ಸ್ಕ್ವೇರ್‌ಗೆ ಅಭಿಮುಖವಾಗಿ 1.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶೌಚಾಲಯವನ್ನು ನಮ್ಮ ಮೈಸೂರು ಫೌಂಡೇಷನ್‌ನಿಂದಲೇ ನಿರ್ವಹಿಸಿ 5 ವರ್ಷಗಳ ನಂತರ ಮೈಸೂರು ಮಹಾನಗರ ಪಾಲಿಕೆಗೆ ಕಟ್ಟಡವನ್ನು ಹಸ್ತಾಂತರಿಸಲಾಗುವುದು ಎಂದು ತಿಳಿಸಿದರು.

ದಿನದ 24 ಗಂಟೆಯೂ ಭದ್ರತಾ ಸಿಬ್ಬಂದಿಗಳನ್ನು ನೇಮಿಸಲಾಗಿದ್ದು, ಸಿಸಿ ಕ್ಯಾಮರಾ ಅಳವಡಿಸಿ ನಿಗಾವಹಿಸಿ ಶೌಚಾಲಯ ಬಳಕೆದಾರರ ರಕ್ಷಣೆಗೂ ಗಮನಹರಿಸಲಾಗಿದೆ. ನೀರಿನ ಸಂಪ್, ಓವರ್‌ಹೆಡ್ ಟ್ಯಾಂಕ್, ವಿದ್ಯುತ್ ಸಂಪರ್ಕ ಒದಗಿಸಿ ಸಾರ್ವಜನಿಕರಿಗೆ ಸೌಲಭ್ಯ ಒದಗಿಸಿರುವುದರಿಂದ ಪೇ ಅಂಡ್ ಯೂಸ್ ಮಾದರಿಯಲ್ಲಿ ದರ ನಿಗದಿ ಮಾಡಿ, ಎನ್‌ಎಂಎಫ್ 5 ವರ್ಷಗಳ ಕಾಲ ಶೌಚಾಲಯವನ್ನು ನಿರ್ವಹಿಸಲಿದೆ ಎಂದು ಮೇಯರ್ ತಿಳಿಸಿದರು. ನಮ್ಮ ಮೈಸೂರು ಫೌಂಡೇಷನ್‌ನ ದಶರಥ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರಿನ ಕ್ರೈಸ್ಟ್ ಪಬ್ಲಿಕ್ ಶಾಲೆಯ ನಾಲ್ಕನೇ ತರಗತಿ ವಿದ್ಯಾರ್ಥಿನಿ ಕುಮಾರಿ ಮಾನ್ಸಿ ಯು.ಎಸ್. ಆಚಾರ್, ಶ್ರೀಮತ್ ಭಗವದ್ಗೀತೆಯ 700 ಶ್ಲೋಕಗಳನ್ನು (18 ಅಧ್ಯಾಯ) ಕಂಠಪಾಠ ಮಾಡಿದ್ದು, ಶ್ರೀ ಶೃಂಗೇರಿ ಶಾರದಾ ಪೀಠ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದವರು ನಡೆಸಿದ ಶ್ರೀಮತ್ ಭಗವತ್ ಗೀತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಶ್ರೀ ಶೃಂಗೇರಿ ಜಗದ್ಗುರುಗಳ ಅಮೃತ ಹಸ್ತದಿಂದ ಪ್ರಶಸ್ತಿಯನ್ನು ಪಡೆದಿದ್ದಾರೆ. ಈಕೆ ಮೈಸೂರಿನ ಉಮಾಶಂಕರ್ ಮತ್ತು ಶ್ರೀಮತಿ ಉಷಾರಾಣಿಯವರ ಪುತ್ರಿ.

ನಾಳೆಯಿಂದ ಸುಯೋಗ್ ಆಸ್ಪತ್ರೆಯಲ್ಲಿ ಉಚಿತ ಹೃದ್ರೋಗ ತಪಾಸಣಾ ಶಿಬಿರ

ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್‌ರಿಂದ ಉದ್ಘಾಟನೆ



ಮೈಸೂರು,ಫೆ.24(ಪಿಎಂ)– ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ವತಿಯಿಂದ ಫೆ.26ರಿಂದ ಮಾ.3ರವರೆಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5ರವರೆಗೆ 50 ಮಂದಿಗೆ ತಪಾಸಣೆ ನಡೆಸಲಾಗುವುದು. ಶಿಬಿರದಲ್ಲಿ ಆಯ್ದ 10 ಮಂದಿ ಕಡುಬಡವರಿಗೆ ಉಚಿತವಾಗಿ ಆಂಜಿಯೋಗ್ರಾಂ ಮತ್ತು ಆಂಜಿಯೋಪ್ಲಾಸ್ಟಿ ಮಾಡಲಾಗುವುದು. ನಾಳೆಯಿಂದ ಹೆಸರು ನೋಂದಣಿ ಮಾಡಿಕೊಳ್ಳಬಹುದು ಎಂದರು.

ಫೆ.26ರಂದು ಬೆಳಗ್ಗೆ 10.30ಕ್ಕೆ ಆಸ್ಪತ್ರೆಯ ಸಭಾಂಗಣದಲ್ಲಿ ಶಿಬಿರದ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಬೆಂಗಳೂರಿನ ಬಿಜಿಎಸ್ ಗ್ಲೋಬಲ್ ಶಿಕ್ಷಣ ಸಂಸ್ಥೆ ಮತ್ತು ಆಸ್ಪತ್ರೆಗಳ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಪ್ರಕಾಶನಾಥ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಖ್ಯಾತ ಹೃದ್ರೋಗ ತಜ್ಞರೂ ಆದ ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಶಿಬಿರದ ಉದ್ಘಾಟನೆ ನೆರವೇರಿಸಲಿದ್ದಾರೆ. ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅಧ್ಯಕ್ಷತೆ ವಹಿಸಲಿದ್ದು, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಆಸ್ಪತ್ರೆ ಸಿಇಓ ಡಾ.ಎಂ.ವಿ.ಮಂಜುನಾಥ್, ವೈದ್ಯ ಡಾ.ರವಿಕುಮಾರ್ ಗೋಷ್ಠಿಯಲ್ಲಿದ್ದರು.

ಎಲ್‌ಐಸಿಯಿಂದಲೇ ಮಿಲೇನಿಯಂ ಸರ್ಕಲ್ ಅಭಿವೃದ್ಧಿ ನಿರ್ವಹಣೆ

ಮೇಯರ್, ಪಾಲಿಕೆ ಆಯುಕ್ತರಿಂದ ಸ್ಥಳ ಪರಿಶೀಲನೆ



ಮೈಸೂರು, ಫೆ24(ಆರ್‌ಕೆ)– ಮೈಸೂರಿನ ಬನ್ನಿಮಂಟಪದ ಮಿಲೇನಿಯಂ ಸರ್ಕಲ್ ಅನ್ನು ಭಾರತೀಯ ಜೀವ ವಿಮಾ ನಿಗಮ (LIC of India)ದಿಂದಲೇ ಅಭಿವೃದ್ಧಿಪಡಿಸಿ, ನಿರ್ವಹಿಸಲು ಮುಂದೆ ಬಂದಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ಎಲ್‌ಐಸಿ ಸರ್ಕಲ್ ಎಂದೇ ಕರೆಯಲಾಗುತ್ತಿರುವ ಮಿಲೇನಿಯಂ ಸರ್ಕಲ್ ಮೈಸೂರು–ಬೆಂಗಳೂರು ರಸ್ತೆಯಲ್ಲಿದ್ದು, ಅದನ್ನು ಅಭಿವೃದ್ಧಿಪಡಿಸಿ ತಾವೇ ನಿರ್ವಹಣೆ ಮಾಡುವುದಾಗಿ ಎಲ್‌ಐಸಿ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿದ್ದಾರೆ. ಇಂದು ತಾವು ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ, ಪಾಲಿಕೆ ಸದಸ್ಯೆ ಅಶ್ವಿನಿ ಅನಂತು, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್ ಅವರೊಂದಿಗೆ ಸರ್ಕಲ್‌ಗೆ ತೆರಳಿ ಸ್ಥಳ ಪರಿಶೀಲಿಸಿದೆವು. ಆ ವೇಳೆ ಎಲ್‌ಐಸಿ ಅಧಿಕಾರಿಗಳು ಹಾಜರಿದ್ದು, ತಾವು ಸಿದ್ಧಪಡಿಸಿರುವ ಸರ್ಕಲ್ ಸೌಂದರ್ಯೀಕರಣದ ನಕ್ಷೆಯನ್ನು ಸಲ್ಲಿಸಿದರು ಎಂದು ತಿಳಿಸಿದರು.

ಸರ್ಕಲ್ ಮಧ್ಯೆ ಅಂಬಾರಿ ಆನೆಗಳ ಪ್ರತಿರೂಪ ಸ್ಥಾಪಿಸಿ ಹಸಿರು ಲಾನ್ ಬೆಳೆಸಿ ನಿರ್ವಹಣೆ ಮಾಡುವುದಾಗಿ ನಕ್ಷೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುವುದರಿಂದ ಪರಿಶೀಲಿಸಿ, ಯೋಜನೆ ಕಾರ್ಯಗತಗೊಳಿಸಲು ಅನುಮತಿ ನೀಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಆಯುಕ್ತರು ತಿಳಿಸಿದರು.

ಈ ಹಿಂದೆ ಸರ್ಕಲ್ ಅಭಿವೃದ್ಧಿಪಡಿಸಿ ಅಲ್ಲಿ ಮೈಸೂರು ಮಹಾರಾಣಿ ಚಿಕ್ಕನಂಜಮ್ಮಣ್ಣಿ ಅವರ ಪ್ರತಿಮೆ ಸ್ಥಾಪಿಸುವ ಬಗ್ಗೆ ಮುಡಾ ಯೋಜನೆ ರೂಪಿಸಿತ್ತಾದರೂ, ಇದೀಗ ಎಲ್‌ಐಸಿಯವರೇ ಅಭಿವೃದ್ಧಿಪಡಿಸಿ ನಿರ್ವಹಿಸಲು ಮುಂದೆ ಬಂದಿರುವುದರಿಂದ ಅವರಿಗೆ ಅನುಮತಿ ನೀಡಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭ ಎಲ್‌ಐಸಿ ಡಿವಿಜನಲ್ ಮ್ಯಾನೇಜರ್ ಶಾಸ್ತ್ರಿ, ರೀಜನಲ್ ಮ್ಯಾನೇಜರ್ ಮುರಳೀಧರ್, ಜಾನಕಿರಾಮ್ ಉಪಸ್ಥಿತರಿದ್ದರು.



ಪ್ರಸ್ತಾಪಿತ ಸರ್ಕಲ್‌ನ ನೀಲ ನಕ್ಷೆ

ಮಾನಸಿಕ ಸ್ಥಿಮಿತದ ಸಮತೋಲನದಿಂದ ಬದುಕು ಉತ್ತಮವಾಗಿರುತ್ತದೆ

ಡಾ.ಎಸ್.ಪಿ.ಯೋಗಣ್ಣ ಅಭಿಮತ



ಮೈಸೂರು, ಫೆ. 24(ಎಸ್‌ಪಿಎನ್)– ನಮ್ಮಲ್ಲಿನ 'ಮನಸ್ಸು' ಮತ್ತು 'ಮಾನಸಿಕ' ಸ್ಥಿಮಿತವನ್ನು ಯಾರು ಸಮತೋಲನ ಕಾಪಾಡಿಕೊಳ್ಳುತ್ತಾರೋ ಅಂತಹವರ ಆರೋಗ್ಯ–ಬದುಕು ಉತ್ತಮವಾಗಿರುತ್ತದೆ ಎಂದು ಸುಯೋಗ ಆಸ್ಪತ್ರೆಯ ಅಧ್ಯಕ್ಷರು, ಹೃದ್ರೋಗ ತಜ್ಞರೂ ಆದ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಭಿಪ್ರಾಯಪಟ್ಟರು.

ಮೈಸೂರು ಶ್ರೀ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ, ಶ್ರೀ ರಾಮಕೃಷ್ಣ ಸೇವಾ ಸಂಘ ಮತ್ತು ವಿವೇಕ ಬಳಗ, ಶ್ರೀ ರಾಮಕೃಷ್ಣ ಸೇವಾ ಬಳಗ, ಶ್ರೀ ರಾಮಕೃಷ್ಣಾಶ್ರಮ ಹಾಗೂ ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ಸಹಯೋಗದೊಂದಿಗೆ ಆಯೋಜಿಸಿದ್ದ ಜಾತ್ರಾ ಮಹೋತ್ಸವದ 4 ನೇ ದಿನದ ಕಾರ್ಯಕ್ರಮದಲ್ಲಿ 'ಆಧ್ಯಾತ್ಮಿಕ ಆರೋಗ್ಯ' ವಿಷಯ ಕುರಿತು ಅವರು ಮಾತನಾಡಿದರು.

ಆಧುನಿಕ ವೈದ್ಯಕೀಯ ಪದ್ಧತಿಯು, ಮನುಷ್ಯನ ಮೆದುಳಿನಲ್ಲಿ 'ಮನಸ್ಸು' ಇದೆ ಎಂಬುದನ್ನು ತೀರ ಇತ್ತೀಚಿನವರೆಗೂ ಒಪ್ಪುತ್ತಿರಲಿಲ್ಲ. ಆದರೆ, ನಮ್ಮ ವೇದ, ಉಪನಿಷತ್‌ಗಳಲ್ಲಿ 'ಮನಸ್ಸು' ಮತ್ತು ಅದರ ಕ್ರಿಯೆ ಕುರಿತು ಉಲ್ಲೇಖವಾಗಿರುವುದು ನಮ್ಮೆಲ್ಲರ ಹೆಮ್ಮೆ. ಇದೇ ಅಂಶವನ್ನು ಸ್ವಾಮಿ ವಿವೇಕಾನಂದರು ತಮ್ಮ ಪ್ರವಚನಗಳಲ್ಲಿ ಸ್ಥೂಲವಾಗಿ ವಿವರಿಸಿದ್ದಾರೆ ಎಂದು ಎಳೆ ಎಳೆಯಾಗಿ ವಿವರಿಸಿದರು.

ಪ್ರತಿಯೊಬ್ಬರಲ್ಲಿ ಗುಪ್ತಗಾಮಿನಿಯಾಗಿರುವ 'ಮನಸ್ಸು' ಮೂರು ಹಂತದಲ್ಲಿ ಕಾರ್ಯ ನಿರ್ವಹಿಸುತ್ತವೆ. ಹೊರ ಮನಸ್ಸು ಜಗತ್ತಿನ ಆಗು–ಹೋಗುಗಳನ್ನು ವಿಶ್ಲೇಷಣೆ ಮಾಡಿದರೆ, ಒಳ ಮನಸ್ಸು, ನಮ್ಮಲ್ಲಿನ ಆಲೋಚನೆಗಳನ್ನು ಮಂಥನ ಮಾಡುತ್ತದೆ. ಸುಪ್ತ ಮನಸ್ಸು ಹೊರ ಜಗತ್ತಿಗೆ ಗೊತ್ತಿಲ್ಲದ ಅಂಶಗಳನ್ನು ಮಂಥನ ಮಾಡುತ್ತದೆ. ಹಾಗಾಗಿ 'ಮನಸ್ಸು' ಮತ್ತು 'ಮಾನಸಿಕ' ಆರೋಗ್ಯ ಸ್ಥಿಮಿತವಾಗಿರಲು ಪ್ರತಿಯೊಬ್ಬರಲ್ಲೂ 'ಆಧ್ಯಾತ್ಮ' ಚಿಂತನೆ ಅತ್ಯವಶ್ಯಕ ಎಂದು ಕೆಲ ಘಟನೆಗಳ ಮೂಲಕ ವಿವರಿಸಿದರು.

ಇತ್ತೀಚಿನ ಸಂಶೋಧನೆಗಳಲ್ಲಿ 'ಮನಸ್ಸು' ಮೆದುಳಿನಲ್ಲಿದೆ. ಅದು ದೇಹದ ರಾಸಾಯಿನಿಕ ಪ್ರಕ್ರಿಯೆಯಲ್ಲಿ ತೊಡಗಿ, ಮನುಷ್ಯನ ಅನೇಕ ಆಲೋಚನೆಗಳಿಗೆ ಪೂರಕವಾಗಿ ಕೆಲಸ ಮಾಡುತ್ತದೆ ಎಂದು ಉಲ್ಲೇಖಿಸಿದ್ದಾರೆ. ಆಧುನಿಕ ವೈದ್ಯಕೀಯ ಪದ್ಧತಿಗೆ ಕೇವಲ 600 ವರ್ಷಗಳ ಇತಿ ಹಾಸವಿದೆ. ಆದರೆ, ಪ್ರಾಚೀನ ವೈದ್ಯಕೀಯ ಪದ್ಧತಿಗೆ ಸಾವಿರಾರು ವರ್ಷಗಳ ಇತಿ ಹಾಸವಿದ್ದು, ಈ ಪದ್ಧತಿಯಲ್ಲಿ ಕ್ಯಾನ್ಸರ್, ಹೃದ್ರೋಗ ಸಮಸ್ಯೆ ಸೇರಿದಂತೆ ಇತರೆ ಕಾಯಿಲೆಗಳಿಗೆ ಗುಣಪಡಿಸುವ ಮದ್ದಿಲ್ಲದಿದ್ದರೂ ಈ ರೋಗಗಳು ಮನುಷ್ಯನ ದೇಹಕ್ಕೆ ಬಾರದಂತೆ ತಡೆಗಟ್ಟುವ ವಿಧಾನಗಳು ಅಡಕವಾಗಿದೆ ಎಂದು ಹೇಳಿದರು.

ಪ್ರಾಚೀನ ವೈದ್ಯ ಪದ್ಧತಿ ಪ್ರಸ್ತುತ: ಮಾನವನ ಉಗಮಕ್ಕೆ 20 ಸಾವಿರ ಕೋಟಿ ಇತಿಹಾಸ ವಿದೆ. ಅಂದಿನಿಂದಲೂ ಆಧ್ಯಾತ್ಮಿಕ ಪ್ರಪಂಚವನ್ನು ಅವಲೋಕಿಸಿದಾಗ ಇದರಲ್ಲಿ ಸಾಧು–ಸಂತರು ಮತ್ತು ತತ್ವಜ್ಞಾನಿಗಳು ತೊಡಗಿಸಿಕೊಂಡಿದ್ದಾರೆ. ಯೋಗ, ನ್ಯಾಚೋರೋಪತಿ, ಚೈನಾ ವೈದ್ಯ ಪದ್ಧತಿ, ಟಿಬೆಟ್ ವೈದ್ಯ ಪದ್ಧತಿ ಸೇರಿದಂತೆ ಇತರೆ ದೇಶಗಳ ಅಂದಿನ ಪ್ರಾಚೀನ ವೈದ್ಯ ಪದ್ಧತಿ ಮನುಷ್ಯನ ಆರೋಗ್ಯ ಕಾಪಾಡಲು ಸಮರ್ಥವಾಗಿದ್ದವು. ಇಂದಿನ ಆಧುನಿಕ ವೈದ್ಯ ಪದ್ಧತಿಯಲ್ಲಿ ಮನುಷ್ಯನಿಗೆ ರೋಗ ಬಂದ ನಂತರ ಗುಣಪಡಿಸುವ ವಿಧಾನ ವಾಗಿದ್ದು, ಇದು ರಾಸಾಯನಿಕ ಔಷಧಿಗಳ ಮೇಲೆ ಅವಲಂಭನೆಯಾಗಿದೆ ಎಂದು ತಿಳಿಸಿದರು.

ಉದಾಹರಣೆಗೆ ಆಜ್ಞಿಯೋಪ್ಲಾಸ್ಟಿ, ಆಜ್ಞಿಯೋಗ್ರಾಂ ಸೇರಿದಂತೆ ಇತರೆ ತಂತ್ರಜ್ಞಾನಗಳಿಂದ ಹೃದ್ರೋಗ ಸಮಸ್ಯೆಗಳನ್ನು ಗುಣಪಡಿಸಬಹುದು ಎಂಬ ನಂಬಿಕೆ ವೈದ್ಯರಲ್ಲಿದೆ. ಆದರೆ, ಪ್ರಾಚೀನ ಆರೋಗ್ಯ ಪದ್ಧತಿಯಲ್ಲಿ ಇದು ಸಾಧ್ಯವಿಲ್ಲ. ಸ್ವಾಮಿ ವಿವೇಕಾನಂದರು ಹೇಳಿದಂತೆ ಸದೃಢ ದೇಹ, ಸದೃಢ ಮನಸ್ಸಿನೊಂದಿಗೆ ದೈವ ಪರಿಕಲ್ಪನೆಯಲ್ಲಿ ಅನುಸಂಧಾನ ಮಾಡಿದಾಗ ಮಾತ್ರ 'ಒತ್ತಡ ಮುಕ್ತ', 'ರೋಗ ಮುಕ್ತ' ಜೀವನ ನಡೆಸಲು ಸಾಧ್ಯ ಎಂದು ಕೆಲವು ಘಟನೆ ಉದಾಹರಿಸಿ ವಿವರಿಸಿದರು.

ಈ ವೇಳೆ ರಾಮಕೃಷ್ಣ ನಗರದ ಶ್ರೀ ಪ್ರಸನ್ನ ಗಣಪತಿ ಭಜನಾ ಮಂಡಳಿ ಕಲಾವಿದರಿಂದ ಭಜನಾ ಕಾರ್ಯಕ್ರಮ ಹಾಗೂ ವಾಸು ಬಡಾವಣೆಯ ರಂಜಿನಿ ಗಾನ ಕಲಾ ಶಾಲೆ ವತಿಯಿಂದ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ವೇದಿಕೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯದರ್ಶಿ ದೊರೈ ರಾಜ್, ಸಂಚಾಲಕರಾದ ಬಸವಣ್ಣ, ಬಸವ ಲಿಂಗಪ್ಪ ಬಸವರಾಜ್, ಗೋಪಿನಾಥ್ ಉಪಸ್ಥಿತರಿದ್ದರು.

ಒಂದೇ ನಾಣ್ಯದ ಎರಡು ಮುಖಗಳು

ಮನುಷ್ಯ ಸಂಘ ಜೀವಿ. ಆತ ಒಬ್ಬಂಟಿಯಾಗಿ ಬದುಕಿರಲು ಸಾಧ್ಯವಿಲ್ಲ. ಆಗೊಂದು ವೇಳೆ ಒಬ್ಬಂಟಿಯಾಗಿದ್ದರೂ ಕೆಲವು ದಿನಗಳ ನಂತರ ಆತ ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಾನೆ. ಹಾಗಾಗಿ ಪ್ರಾಣಿ–ಪಕ್ಷಿಗಳೂ ಸಹ ಸಂಘ ಜೀವಿಗಳಾಗಿ ಬದುಕುತ್ತವೆ. ಇದೇ ಅಂಶವನ್ನು ಸಾಮಾಜಿಕ, ಆಧ್ಯಾತ್ಮಿಕ ಮತ್ತು ಮಾನಸಿಕ ಆರೋಗ್ಯ ಕುರಿತು ಸ್ವಾಮಿ ವಿವೇಕಾನಂದರು ಸವಿವರವಾಗಿ ತಮ್ಮ ಪ್ರವಚನಗಳಲ್ಲಿ ತಿಳಿಸಿದ್ದು, 'ಆಧ್ಯಾತ್ಮ' ಮತ್ತು 'ಮನಸ್ಸು' ಒಂದನ್ನೊಂದು ಬಿಟ್ಟು ಇನ್ನೊಂದಿಲ್ಲ. ಇದರ ಕ್ರಿಯೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇದನ್ನು ಅಧ್ಯಯನ ಮೂಲಕ ತಿಳಿದುಕೊಳ್ಳಲು 'ಮನಸ್ಸು–ಮೆದುಳು' ಸ್ಪಂದಿಸಿದರೆ ಮಾತ್ರ ಸಾಧ್ಯ ಎಂದರಲ್ಲದೆ, ಸಂತರಿಗೆ ದಾನ–ಧರ್ಮ, ಪೂಜಾ ಕೈಂಕರ್ಯಗಳಲ್ಲಿ ಸಂತೋಷ ಕಾಣಬಹುದು. ಮತ್ತೊಬ್ಬರಿಗೆ ಬೇರೆ ಕೆಲಸದಲ್ಲಿ ಸಂತೋಷ ಕಾಣಬಹುದು. ಒಟ್ಟಿನಲ್ಲಿ ಬದುಕು ಸಂತೋಷದಿಂದ ಕೂಡಿರುವಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.



ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಮೈಸೂರಿನ ಜಯಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ಗೋವಿಂದರಾಜು ಅವರನ್ನು ಬಡವರ ಬಂಧು ಕನ್ನಡ ಯುವಕರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಚಿತ್ರದಲ್ಲಿ ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ, ಕೃಷ್ಣಮೂರ್ತಿ, ಮರೀಗೌಡ, ಅರ್ಜುನ್, ಧನಂಜಂಯ್ ಇತರರಿದ್ದಾರೆ.

ಇಂದು, ನಾಳೆ ಮೈಸೂರಲ್ಲಿ 'ಹೈ ಲೈಫ್ ಬ್ರೈಡ್ಸ್' ಫ್ಯಾಷನ್ ಎಗ್ಸಿಬಿಷನ್

ಮೈಸೂರು,ಫೆ.24(ಪಿಎಂ)– ಮೈಸೂರಿನ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಫೆ.25 ಮತ್ತು 26ರಂದು 'ಹೈ ಲೈಫ್ ಬ್ರೈಡ್ಸ್' ಫ್ಯಾಷನ್ ಎಗ್ಸಿಬಿಷನ್ ಹಮ್ಮಿಕೊಳ್ಳಲಾಗಿದೆ ಎಂದು ಎಗ್ಸಿಬಿಷನ್‌ನ ಸಂಚಾಲಕಿ ಶೋಮಿಕಾ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮದುವೆ ಸಮಾರಂಭದ ಅಲಂಕಾರಕ ಸಾಮಗ್ರಿ, ವಧುವಿನ ಅಲಂಕಾರಿಕ ಅತ್ಯಾಕರ್ಷಕ ವಿನ್ಯಾಸವುಳ್ಳ ವಸ್ತ್ರಾಭರಣಗಳು ಇಲ್ಲಿ ವಿಶೇಷವಾಗಿ ಲಭ್ಯವಿರಲಿವೆ. ವರನ ವಸ್ತ್ರಾಭರಣಗಳೂ ದೊರೆಯಲಿವೆ. ಈ ಹಿಂದೆ ಮೈಸೂರಿನಲ್ಲಿ ನಡೆದ ಹೈ ಲೈಫ್ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಉತ್ತಮ ಪ್ರಕ್ರಿಯೆ ದೊರೆತ ಹಿನ್ನೆಲೆಯಲ್ಲಿ ಹೈ ಲೈಫ್ ಬ್ರೈಡ್ಸ್ ಪ್ರದರ್ಶನ–ಮಾರಾಟ ಆಯೋಜಿಸಲಾಗಿದೆ. ಪ್ರವೇಶ ಉಚಿತವಿದೆ ಎಂದರು.

ದಿನನಿತ್ಯದ ಜೀವನಶೈಲಿಗೆ ಅಗತ್ಯವಿರುವ ಬಹುತೇಕ ಸಾಮಗ್ರಿಗಳು ಇಲ್ಲಿ ದೊರೆಯಲಿವೆ. 50ಕ್ಕೂ ಹೆಚ್ಚು ಮಳಿಗೆಗಳಲ್ಲಿ ವಸ್ತ್ರಾಭರಣ, ಪರಿಕರಗಳು ಲಭ್ಯವಿರಲಿವೆ. 100 ರೂ.ನಿಂದ ಲಕ್ಷಾಂತರ ರೂ.ವರೆಗಿನ ಸಾಮಗ್ರಿಗಳು ದೊರೆಯಲಿವೆ. ನಾಳೆ (ಫೆ.25) ಬೆಳಗ್ಗೆ 10ಕ್ಕೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಪತ್ನಿ ವರ್ಷಿತಾ ಎಗ್ಸಿಬಿಷನ್‌ಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ಎಗ್ಸಿಬಿಷನ್‌ನ ಸಂಚಾಲಕ ಶ್ರೀಕಾಂತ್ ಗೋಷ್ಠಿಯಲ್ಲಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ

● ಪಕ್ಷದ ಮುಖಂಡ ಎಂ.ಪ್ರದೀಪ್‌ಕುಮಾರ್ ವಿಶ್ವಾಸ ● ಗ್ಯಾರಂಟಿ ಕಾರ್ಡ್ ವಿತರಣೆ





ಮೈಸೂರು,ಫೆ.24(ಪಿಎಂ)– ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ಅಲೆ ಇದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ ಎಂದು ಮೈಸೂರು ಮಹಾಪಾಲಿಕೆ ಮಾಜಿ ಸದಸ್ಯರೂ ಆದ ಕೆಆರ್ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎಂ.ಪ್ರದೀಪ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಮತ್ತು ನಗರ ಕಾಂಗ್ರೆಸ್ ಸಮಿತಿ ಆದೇಶದಂತೆ ಕೆಆರ್ ಕ್ಷೇತ್ರದಲ್ಲಿ ಶುಕ್ರವಾರ ಪಕ್ಷದ ಭರವಸೆ ಯೋಜನೆಗಳಾದ ಗೃಹಲಕ್ಷ್ಮೀ, ಗೃಹಜ್ಯೋತಿ ಗ್ಯಾರಂಟಿ ಕಾರ್ಡ್‌ಗಳ ವಿತರಣೆ ಕಾರ್ಯಕ್ರಮಕ್ಕೆ ಪಾಲಿಕೆ ವಾರ್ಡ್ ನಂ.61ರ ವಿದ್ಯಾರಣ್ಯಪುರಂನ ಚಾಮುಂಡಿವನದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.

ಕೆಆರ್ ಕ್ಷೇತ್ರ ಸೇರಿದಂತೆ 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಲಿದೆ. ಪಕ್ಷದ ಪ್ರಣಾಳಿಕೆಯಲ್ಲಿನ ಆಶ್ವಾಸನೆಗಳನ್ನು ಪಕ್ಷ ಅಧಿಕಾರಕ್ಕೆ ಬಂದ ದಿನವೇ ಈಡೇರಿಸಲಿದೆ. ಬಿಜೆಪಿ ದುರಾಡಳಿತದಿಂದ ಜನ ಬೇಸತ್ತಿದ್ದು, ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದಾರೆ. ಅಲ್ಲದೆ, ಕೆಆರ್ ಕ್ಷೇತ್ರದಲ್ಲಿ ಪಕ್ಷಕ್ಕೆ ಅಪಾರ ಬೆಂಬಲವಿದೆ ಎಂದು ಹೇಳಿದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆಪಿಸಿಸಿ ಮೈಸೂರು ಭಾಗದ ಉಸ್ತುವಾರಿ ಚಂದ್ರಮೌಳಿ, ಕಾಂಗ್ರೆಸ್ ಮುಖಂಡರಾದ ನವೀನ್‌ಕುಮಾರ್, ಗುರುಪಾದ ಸ್ವಾಮಿ, ಕ್ಷೇತ್ರದ ಬ್ಲಾಕ್ ಅಧ್ಯಕ್ಷರು, ನಗರ ಪಾಲಿಕೆ ಸದಸ್ಯರು, ಮಾಜಿ ಸದಸ್ಯರು ಸೇರಿದಂತೆ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಹವಾಲ ಆರೋಪ: ಜೋಯಾಲುಕ್ಕಾಸ್‌ನ 305 ಕೋಟಿಯ ಆಸ್ತಿ ಇಡಿ ವಶಕ್ಕೆ

ತ್ರಿಶೂರ್, ಫೆ.24– ಹವಾಲ ಮಾರ್ಗದಲ್ಲಿ ದುಬೈಗೆ ಅಪಾರ ಪ್ರಮಾಣದ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯಲ್ಲಿ ಕೇರಳ ಮೂಲದ ಪ್ರತಿಷ್ಠಿತ ಚಿನ್ನಾಭರಣ ಮಾರಾಟ ಕಂಪನಿ ಜೋಯಾಲುಕ್ಕಾಸ್ ಸಮೂಹ ಸಂಸ್ಥೆಯ ಮಾಲೀಕ ಅಲುಕ್ಕಾಸ್ ವರ್ಗೀಸ್ ಅವರ ರೂ. 305 ಕೋಟಿಗೂ ಅಧಿಕ ಮೊತ್ತದ ಆಸ್ತಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಇಡಿ ಶುಕ್ರವಾರ ತಿಳಿಸಿದೆ. ಈ ಸಂಬಂಧ ತ್ರಿಶೂರ್‌ನಲ್ಲಿರುವ ಕೇಂದ್ರ ಕಚೇರಿ ಸಂಕೀರ್ಣದಲ್ಲಿ ಫೆಬ್ರವರಿ 22 ರಂದು ಇಡಿ ಶೋಧ ಕಾರ್ಯಾಚರಣೆ ನಡೆಸಿದ್ದು, ಶೋಭಾ ಸಿಟಿಯಲ್ಲಿನ ಭೂಮಿ ಮತ್ತು ವಸತಿ ಕಟ್ಟಡ ಸೇರಿದಂತೆ ರೂ. 81.54 ಕೋಟಿ ಮೊತ್ತದ 33 ಸ್ಥಿರಾಸ್ತಿ ಮತ್ತು ಮೂರು ಬ್ಯಾಂಕ್ ಅಕೌಂಟ್‌ಗಳಲ್ಲಿನ ರೂ.91. 22 ಲಕ್ಷ, ರೂ.5.58 ಕೋಟಿ ಮೊತ್ತದ ಮೂರು ಸ್ಥಿರ ಠೇವಣಿ ಮತ್ತು ಜೋಯಾಲುಕ್ಕಾಸ್ ಕಂಪನಿಗೆ ಸೇರಿದ ರೂ. 217.80ಕೋಟಿ ಮೊತ್ತದ ಷೇರುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಇಡಿ ಹೇಳಿಕೆಯಲ್ಲಿ ತಿಳಿಸಿದೆ.

ರೂ. 305.84 ಕೋಟಿ ಮೊತ್ತದ ಈ ಎಲ್ಲಾ ಆಸ್ತಿಯನ್ನು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ ಸೆಕ್ಷನ್ 37ಎ ಅಡಿಯಲ್ಲಿ ವಶಕ್ಕೆ ಪಡೆಯಲಾಗಿದೆ ಎಂದು ಇಡಿ ಮಾಹಿತಿ ನೀಡಿದೆ.

ಆರ್‌ಬಿಐ ನೋಟು ಮುದ್ರಣ ಕಾರ್ಖಾನೆ ಅಧಿಕಾರಿಗೆ 1.77 ಲಕ್ಷ ಆನ್‌ಲೈನ್ ವಂಚನೆ

ಮೈಸೂರು, ಫೆ.24–ಮೈಸೂರಿನ ಆರ್‌ಬಿಐ ನೋಟು ಮುದ್ರಣ ಕಾರ್ಖಾನೆಯ ಅಧಿಕಾರಿಯೊಬ್ಬರಿಗೆ ಆನ್‌ಲೈನ್ ಮೂಲಕ 1.77 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಆರ್‌ಬಿಐ ನೋಟು ಮುದ್ರಣ ನಗರದಲ್ಲಿ ವಾಸವಿರುವ ಅಧಿಕಾರಿ ಎಲ್. ಚಂದ್ರಾನಾಯಕ್(52) ಅವರು ತಮ್ಮ ಮೊಬೈಲ್‌ನಲ್ಲಿ ICCRED ಎಂಬ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಅವರ ಬ್ಯಾಂಕ್ ಖಾತೆಯಿಂದ 1,77,650 ರೂ. ತಕ್ಷಣ ವರ್ಗಾವಣೆಯಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳಾ ಸಂಘದಿಂದ ವಸೂಲಿ ಮಾಡಿದ್ದ 31.87 ಲಕ್ಷ ದುರುಪಯೋಗ

ಗೋಣಿಕೊಪ್ಪ, ಫೆ.24–ಮಹಿಳಾ ಸಂಘದ ಸದಸ್ಯರಿಂದ ವಸೂಲಿ ಮಾಡಿದ್ದ 31.87 ಲಕ್ಷ ರೂ. ದುರುಪಯೋಗಪಡಿಸಿಕೊಂಡಿರುವ ಆರೋಪದ ಮೇರೆಗೆ ಹೈದರಾಬಾದ್ ಮೂಲದ ಹಣಕಾಸು ಸಂಸ್ಥೆಯೊಂದರ ನಾಲ್ವರು ಫೀಲ್ಡ್ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಕೆ.ಆರ್.ನಗರ ತಾಲೂಕು ಬೆಟ್ಟಹಳ್ಳಿ ಗ್ರಾಮದ ಬಿ.ವಿ.ರಕ್ಷಿತ್, ಹೆಚ್.ಡಿ.ಕೋಟೆ ತಾಲೂಕು ಮಲಾರಾ ಕಾಲೋನಿಯ ಹರೀಶ್, ಪಿರಿಯಾಪಟ್ಟಣ ತಾಲೂಕು ಹುಣಸೇಕೊಪ್ಪಲು ಗ್ರಾಮದ ಪ್ರಮೋದ್, ಮೈಸೂರಿನ ಬನ್ನಿಮಂಟಪದ ಹಿಮಾಲಯ ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಹೈದರಾಬಾದ್ ಮೂಲದ ಫೈನಾನ್ಷಿಯಲ್ ಇನ್‌ಕ್ಲೂಸನ್ ಎಂಬ ಹಣಕಾಸು ಸಂಸ್ಥೆಯ ಗೋಣಿಕೊಪ್ಪಲು ಬ್ರಾಂಚ್‌ನಲ್ಲಿ ಫೀಲ್ಡ್ ಸಿಬ್ಬಂದಿಗಳಾಗಿ ಕೆಲಸ ಮಾಡುತ್ತಿದ್ದರು.

ಈ ಸಂಸ್ಥೆಯು ಮಹಿಳಾ ಸಂಘಗಳಿಗೆ ಸಾಲ ನೀಡುತ್ತಿದ್ದು, ಆರೋಪಿಗಳು ಅದನ್ನು ವಸೂಲಿ ಮಾಡಿ ಸಂಸ್ಥೆಗೆ ಕಟ್ಟಬೇಕಾಗಿತ್ತು. ಆದರೆ ಇವರು 2022ರ ಜನವರಿ 18 ರಿಂದ ಡಿಸೆಂಬರ್ 14ರವರೆಗೆ ಒಟ್ಟು 32,28,997 ರೂ. ವಸೂಲಿ ಮಾಡಿದ್ದು, ಅದರಲ್ಲಿ 41,360 ರೂ.ಗಳನ್ನು ಮಾತ್ರ ಸಂಸ್ಥೆಗೆ ಕಟ್ಟಿ, ಉಳಿದ 31,87,637 ರೂ.ಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಸಂಸ್ಥೆಯ ಬ್ರಾಂಚ್ ಮ್ಯಾನೇಜರ್ ಬಿ.ಕೆ.ಮಹೇಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಗೋಣಿಕೊಪ್ಪ ಪೊಲೀಸ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಿಡಿಗೇಡಿಗಳಿಂದ ಮರಕ್ಕೆ ಬೆಂಕಿ

ಮೈಸೂರು, ಫೆ.24–ಕಿಡಿಗೇಡಿಗಳು ಹಚ್ಚಿದ ಬೆಂಕಿ ಮರವೊಂದು ಹೊತ್ತಿ ಉರಿದ ಘಟನೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಮೈಸೂರಿನ ರಾಣಾಪ್ರತಾಪ ಸಿಂಹ ರಸ್ತೆಯಲ್ಲಿರುವ ಸಿಎಆರ್ ಪೆರೇಡ್ ಮೈದಾನದ ಮುಂಭಾಗವಿರುವ ಪಾಳು ಬಿದ್ದ ಕಟ್ಟಡದ ಸ್ಥಳದಲ್ಲಿ ಯಾರೋ ಕಿಡಿಗೇಡಿಗಳು ಹಚ್ಚಿರುವ ಬೆಂಕಿಗೆ ಅಲ್ಲಿನ ಮರವೊಂದು ಹೊತ್ತಿ ಉರಿದಿದ್ದು, ವಿಷಯ ತಿಳಿದ ತಕ್ಷಣ ಬನ್ನಿಮಂಟಪದ ಅಗ್ನಿಶಾಮ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಬೆಂಕಿಯನ್ನು ನಂದಿಸಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಪಾಯ ಸಂಭವಿಸಿಲ್ಲ.

ಇಂದು 'ಸ್ಪೈರಲ್ ಎಂಟರೋಸ್ಕೊಪಿ' ಸಾಧನ ಕುರಿತು ವೈದ್ಯಕೀಯ ಶಿಕ್ಷಣ ಕಾರ್ಯಾಗಾರ

ಮೈಸೂರು,ಫೆ.24(ಪಿಎಂ)– ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ವತಿಯಿಂದ ಫೆ.25 ರಂದು ಆಸ್ಪತ್ರೆಯಲ್ಲಿ 'ಸ್ಪೈರಲ್ ಎಂಟರೋಸ್ಕೊಪಿ' ಸಾಧನದ ಬಳಕೆ ಮತ್ತು ಅನುಕೂಲಗಳ ಕುರಿತು ಒಂದು ದಿನದ ವೈದ್ಯಕೀಯ ಶಿಕ್ಷಣ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಆಸ್ಪತ್ರೆಯ ಮುಖ್ಯ ಗ್ಯಾಸ್ಟ್ರೋಎಂಟರಾಲಜಿಸ್ಟ್ ಡಾ.ಸತೀಶ್‌ರಾವ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ನಮ್ಮ ಆಸ್ಪತ್ರೆಯಲ್ಲಿ ಮಾತ್ರವೇ ಈ ಅತ್ಯಾಧುನಿಕ ಸಾಧನ ಇದೆ. ಸಣ್ಣ ಕರುಳಿನ ಗಾಯಗಳ ಬಗ್ಗೆ ಸೂಕ್ತ ರೋಗನಿರ್ಣಯ ಕೈಗೊಳ್ಳುವಲ್ಲಿ ಈ ಸಾಧನದ ಮೂಲಕ ಮಾಡುವ ತಪಾಸಣೆ ಮಹತ್ವದ ಪಾತ್ರ ವಹಿಸಲಿದೆ ಎಂದರು.

ಸಣ್ಣ ಕರುಳಿನ ಶಸ್ತ್ರಚಿಕಿತ್ಸೆ ಇಲ್ಲದೆ ಪಾಲಿಪ್ಸ್ ತೆಗೆದು ಹಾಕುವಲ್ಲಿ ಇದು ಉಪಯುಕ್ತ. ಇದರಲ್ಲಿ ಸಣ್ಣ ಕರುಳಿನಿಂದ ಉಂಟಾಗುವ ರಕ್ತಸ್ರಾವವನ್ನು ನಿರ್ದಿಷ್ಟವಾಗಿ ಗುರುತಿಸಬಹುದು. ನಮ್ಮ ಆಸ್ಪತ್ರೆಯು ವೈದ್ಯರಿಗೆ ತರಬೇತಿ ನೀಡುವಲ್ಲಿ ಮುಂಚೂಣಿಯಲ್ಲಿದೆ. ಗ್ಯಾಸ್ಟ್ರೋಎಂಟರಾಲಜಿಸ್ಟ್ ವೈದ್ಯರು ತಮ್ಮ ಕೌಶಲ್ಯ ವಿಸ್ತರಿಸಿಕೊಳ್ಳಲು ಈ ಸಾಧನ ಸಹಕಾರಿ. ಈ ಸಾಧನವು ಸಣ್ಣ ಕರುಳಿನ ಸಂಪೂರ್ಣ ಪರೀಕ್ಷೆ ಕೈಗೊಳ್ಳಲು ಹೆಚ್ಚು ಸಹಕಾರಿ ಎಂದು ತಿಳಿಸಿದರು.

ನಾಳೆ ಬೆಳಗ್ಗೆ 8ಕ್ಕೆ ಕಾರ್ಯಾಗಾರ ಆರಂಭಗೊಳ್ಳಲಿದೆ. ದೇಶದ ವಿವಿಧ ಭಾಗಗಳಿಂದ 50ಕ್ಕೂ ಹೆಚ್ಚು ಮಂದಿ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ನೋಂದಾಯಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಆಸಕ್ತರು ಮೊ.ಸಂ. 99007 76633 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು. ಆಸ್ಪತ್ರೆಯ ಮಾರ್ಕೆಟಿಂಗ್ ಮುಖ್ಯಸ್ಥ ಕೆ.ವಿ.ಕಾಮತ್ ಗೋಷ್ಠಿಯಲ್ಲಿದ್ದರು.

ಒಂದೂವರೆ ತಿಂಗಳಲ್ಲಿ ಕೆಸರೆ, ರಾಯನಕೆರೆ ಘನತ್ಯಾಜ್ಯ ವಿಲೇವಾರಿ ಘಟಕಗಳು ಕಾರ್ಯಾರಂಭ

ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಮೇಯರ್ ಶಿವಕುಮಾರ್ ಸೂಚನೆ



ಮೈಸೂರು, ಫೆ. 24 (ಆರ್‌ಕೆ)– ನಿರ್ಮಾಣ ಹಂತದಲ್ಲಿರುವ ಮೈಸೂರಿನ ಕೆಸರೆ ಮತ್ತು ರಾಯನಕೆರೆ ಘನ ತ್ಯಾಜ್ಯ ನಿರ್ವಹಣಾ ಘಟಕದ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಮೇಯರ್ ಶಿವಕುಮಾರ್ ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಉಪಮೇಯರ್ ಡಾ. ಜಿ. ರೂಪಾ, ಪಾಲಿಕೆ ಸದಸ್ಯೆ ಅಶ್ವಿನಿ ಅನಂತು, ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್‌ರೊಂದಿಗೆ ಇಂದು ರಾಯನಕೆರೆ ಘನತ್ಯಾಜ್ಯ ಘಟಕಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ ಮೇಯರ್, ಉಳಿದ ಶೇ. 45 ರಷ್ಟು ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮೈಸೂರಿನ ವಿದ್ಯಾರಣ್ಯಪುರಂನ ಸೀವೇಜ್ ಫಾರಂನಲ್ಲಿ ಈಗಾಗಲೇ ರಾಶಿ ರಾಶಿ ಸಂಗ್ರಹವಾಗಿರುವ ಕಸವನ್ನು ವಿಲೇವಾರಿ ಮಾಡಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಅನುಮೋದನೆ ದೊರೆತ ನಂತರ ಟೆಂಡರ್ ಕರೆದು ಕೆಲಸ ಆರಂಭಿಸುತ್ತೇವೆ. ಅಲ್ಲಿನ ಒತ್ತಡ ತಪ್ಪಿಸಲೆಂದು ಎರಡು ಕಡೆ ನಿರ್ಮಿಸುತ್ತಿರುವ ಘನ ತ್ಯಾಜ್ಯ ಘಟಕಗಳನ್ನು 45 ದಿನದೊಳಗೆ ಉದ್ಘಾಟಿಸಲು ನಿರ್ಧರಿಸಿದ್ದೇವೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಕೆಸರೆ ಘಟಕದಲ್ಲಿ ದಿನಕ್ಕೆ 300 ಟನ್ ಹಾಗೂ ರಾಯನಕೆರೆಯಲ್ಲಿ 200 ಟನ್ ತ್ಯಾಜ್ಯ ರೀಸೈಕ್ಲಿಂಗ್ ಮಾಡುವ ಸಾಮರ್ಥ್ಯವಿದ್ದು, ಇದರಿಂದ ಸೀವೇಜ್ ಫಾರಂ ಘಟಕದ ಮೇಲೆ ಒತ್ತಡ ಕಡಿಮೆಯಾಗಲಿದೆ ಎಂದ ಅವರು, ರಾಯನಕೆರೆ ಬಳಿ 6 ಎಕರೆ ಪ್ರದೇಶದಲ್ಲಿ 9.2 ಕೋಟಿ ರೂ. ಅಂದಾಜು ವೆಚ್ಚದ ಘಟಕ ಸ್ಥಾಪಿಸಲಾಗುತ್ತಿದೆ ಎಂದು ತಿಳಿಸಿದರು.

ಸೀವೇಜ್ ಫಾರಂ ಆವರಣದ ಎಕ್ಸೆಲ್ ಪ್ಲಾಂಟ್‌ನಲ್ಲಿ ಪ್ರಸ್ತುತ ಮೈಸೂರು ನಗರದಾದ್ಯಂತ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವನ್ನು ಸುರಿಯುತ್ತಿರುವುದರಿಂದ ಈಗ ಅಲ್ಲಿ ಸುಮಾರು 7 ಲಕ್ಷ ಘನ ತ್ಯಾಜ್ಯ ಸಂಗ್ರಹವಾಗಿದೆ. ಅದನ್ನು ತೆರವುಗೊಳಿಸಲು ಅನುದಾನ ಕೋರಿ ಪಾಲಿಕೆಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ ಎಂದು ಶಿವಕುಮಾರ್ ತಿಳಿಸಿದರು.



ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ ಎಂದು

ನನ್ನ ಬಗ್ಗೆ ಆರೋಪಿಸುವವರಿಗೆ ತಕ್ಕ ಉತ್ತರ ನೀಡುವೆ

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಪುತ್ರ ಸುನೀಲ್ ಬೋಸ್‌ಗೆ ಶಾಸಕ ಎಂ.ಅಶ್ವಿನ್ ಕುಮಾರ್ ತಿರುಗೇಟು



ತಿ.ನರಸೀಪುರ, ಫೆ.24– ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ ಎಂದು ನನ್ನ ಬಗ್ಗೆ ಆರೋಪ ಮಾಡುವವರಿಗೆ ಸೂಕ್ತ ಸಮಯದಲ್ಲಿ ತಕ್ಕ ಉತ್ತರ ನೀಡುತ್ತೇನೆ ಎಂದು ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹಾಗೂ ಅವರ ಪುತ್ರ ಸುನೀಲ್ ಬೋಸ್ ಅವರಿಗೆ ಶಾಸಕ ಎಂ. ಅಶ್ವಿನ್ ಕುಮಾರ್ ತಿರುಗೇಟು ನೀಡಿದರು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಹಿರಿಯೂರು ಗ್ರಾಮದ ವೀರಶೈವ ಯುವ ಮುಖಂಡ ನಾಗೇಶ್ ಸೇರಿದಂತೆ ನಿಲಸೋಗೆ, ಮಾದಾಪುರ ಗ್ರಾಮದ ನೂರಾರು ಯುವಕರನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ಚುನಾವಣೆ ಹತ್ತಿರ ಬರುತ್ತಿದ್ದಂತೆ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳಾಗಿಲ್ಲ. ಯಾವುದೇ ಅನುದಾನ ತಂದಿಲ್ಲ ಎಂದು ಕೆಲವರು ಇಲ್ಲಸಲ್ಲದ ಆರೋಪ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳು ಕ್ಷೇತ್ರದ ಜನರಿಗೆ ತಿಳಿದಿದೆ. ಈ ಸಂಬಂಧ ನಾನು ಯಾರಿಗೂ ಉತ್ತರಿಸುವ ಅಗತ್ಯವಿಲ್ಲ. ಸಮಯ ಬಂದಾಗ ಟೀಕಾಕಾರರಿಗೆ ತಕ್ಕ ಉತ್ತರ ನೀಡುತ್ತೇನೆ ಎಂದರು.

ಕ್ಷೇತ್ರದಲ್ಲಿ ಯಾವುದೇ ತಾರತಮ್ಯ ಮಾಡದೇ ಎಲ್ಲಾ ಸಮುದಾಯಗಳ ಅಭಿವೃದ್ಧಿಗೂ ಶಕ್ತಿ ಮೀರಿ ಶ್ರಮಿಸಿದ್ದೇನೆ. ಆರೋಪಿಸುವವರಿಗೆ ಉತ್ತರಿಸಲು ನಾನು ರಾಜಕೀಯ ಮಾಡಲು ಬಂದಿಲ್ಲ. ಬದಲಿಗೆ ಅಭಿವೃದ್ಧಿ ಕೆಲಸಕಷ್ಟೇ ಆದ್ಯತೆ ನೀಡುತ್ತೇನೆ ಎಂದರು.

ನನ್ನ ಅಭಿವೃದ್ಧಿ ಕಾರ್ಯ ನೋಡಿ ತಾಲೂಕಿನ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾಗುತ್ತಿದ್ದು, ಎಲ್ಲರನ್ನು ಗೌರವದಿಂದ ನಡೆಸಿಕೊಳ್ಳಲಾಗುವುದು. ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕ್ಷೇತ್ರಕ್ಕೆ ಭೇಟಿ ನೀಡಿ ಹೋದ ಮೇಲೆ ಕ್ಷೇತ್ರದಲ್ಲಿ ಜೆಡಿಎಸ್ ಪರ್ವ ಆರಂಭವಾಗಿದೆ ಎಂದರು.

ಉಕ್ಕಲಗೆರೆ ಗ್ರಾಪಂ ಮಾಜಿ ಅಧ್ಯಕ್ಷ ಅಡುಗೆ ಕುಮಾರ್ ಮಾತನಾಡಿ, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷ ಸೇರ್ಪಡೆಯಾಗುತ್ತಿರುವುದು ಶ್ಲಾಘನೀಯ. ಮುಂಬರುವ ಚುನಾವಣೆಯಲ್ಲಿ ಯುವಕರು ಶಾಸಕರ ಗೆಲುವಿಗೆ ಶ್ರಮಿಸಬೇಕು. ಚುನಾವಣೆ ಹಿನ್ನೆಲೆಯಲ್ಲಿ ಮಾತಿನ ವಾಕ್ಸಮರ ಸಹಜ. ಕೆಲವರು ಶಾಸಕರು ಕ್ಷೇತ್ರದ ಬಡಜನರಿಗೆ ಮನೆ ನೀಡಲ್ಲ ಎಂದು ಆರೋಪಿಸುತ್ತಿದ್ದಾರೆ. ಆದರೆ ಸರ್ಕಾರ ಪ್ರತಿ ಕ್ಷೇತ್ರದ ಶಾಸಕರಿಗೆ ಇಂತಿಷ್ಟು ಮನೆ ನೀಡುತ್ತದೆ. ಅದರ ಆಧಾರದ ಮೇಲೆ ಶಾಸಕರು ಸರ್ಕಾರ ಕೊಟ್ಟಷ್ಟು ಮನೆಗಳನ್ನು ನೀಡುತ್ತಾರೆ. ಆದರೆ ಈಗಿನ ಆಡಳಿತ ಪಕ್ಷ ಮನೆ ಕೊಟ್ಟಿಲ್ಲ ಎಂದರೆ ಶಾಸಕರೇನು ಮಾಡಲು ಸಾಧ್ಯ ಎಂದು ಪ್ರಶ್ನಿಸಿದ ಅವರು ಆರೋಪ ಮಾಡುವವರು ಕನಿಷ್ಟ ಪ್ರಜ್ಞೆ ಇಟ್ಟುಕೊಂಡು ಆರೋಪ ಮಾಡಲಿ ಎಂದರು.

ಇನ್ನು ಕೆಲವರು ಶಾಸಕರನ್ನು ಅಭಿವೃದ್ಧಿ ಹಾಗೂ ಕ್ಷೇತ್ರಕ್ಕೆ ಅನುದಾನ ತಂದಿರುವ ಬಗ್ಗೆ ಶ್ವೇತಪತ್ರ ಹೊರಡಿಸುವಂತೆ ಕೇಳುತ್ತಾರೆ. ಶಾಸಕರನ್ನು ಶ್ವೇತಪತ್ರ ಕೇಳುವವರು ತಮಗೆ ಆ ಅರ್ಹತೆ ಇದೆಯೇ ಎಂಬುದನ್ನು ಮೊದಲು ಅರಿತು ನಂತರ ಮಾತನಾಡಲಿ ಎಂದು ಶ್ವೇತಪತ್ರ ಹೊರಡಿಸುವಂತೆ ಶಾಸಕರನ್ನು ಒತ್ತಾಯಿಸಿದ್ದ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಅವರಿಗೆ ಉಕ್ಕಲಗೆರೆ ಬಸವಣ್ಣ ಟಾಂಗ್ ನೀಡಿದರು.

ಪಕ್ಷಕ್ಕೆ ಸೇರ್ಪಡೆಗೊಂಡ ನಾಗೇಶ್ ಮಾತನಾಡಿದರು. ಈ ವೇಳೆ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಯುವ ಜನತಾದಳದ ಸಂಪತ್, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಸದಸ್ಯ ಕೈಯಂಬಳ್ಳಿ ಅಶೋಕ್, ಮಾವಿನಹಳ್ಳಿ ರಾಜೇಶ್, ಹಿರಿಯೂರು ಸೋಮಣ್ಣ, ಚೌಹಳ್ಳಿ ರಾಜಪ್ಪ, ಸೋಸಲೆ ರಾಜೇಶ್, ರಾಜಣ್ಣ ನಿಖಿಲ್, ಮೂಗೂರು ಹೋಬಳಿ ಅಧ್ಯಕ್ಷ ಸೋಮಣ್ಣ, ಮುಖಂಡರಾದ ಶ್ರೀನಿವಾಸ್, ರಾಜು, ಸಿದ್ದಣ್ಣ, ಕೇಶವ, ಹಿರಿಯೂರು ನಾಗೇಶ್, ನಿಲಸೋಗೆ ಮನೋಜ್, ಸಿದ್ಧಾರ್ಥ, ದೊಡ್ಡಪುರ ಚೇತನ್, ಮಾದಾಪುರ ರಾಜು, ಹಿರಿಯೂರು ರಾಚಪ್ಪಾಜಿ, ಸಿದ್ದು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ಮಹಿಳೆಯರು ಯುವಕರು ಹಾಜರಿದ್ದರು.

> 6 ಮುಂಬರುವ ಚುನಾವಣೆಯಲ್ಲಿ ಮತ್ತೆ ಕುಮಾರಣ್ಣನ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಮತದಾರರು ಅವಕಾಶ ಮಾಡಿಕೊಡಬೇಕು. ವಸತಿ, ಶಿಕ್ಷಣ, ಆರೋಗ್ಯ, ಕೃಷಿ, ಉದ್ಯೋಗ ನೀಡುವಂತಹ ಪ್ರಮುಖ ಉದ್ದೇಶಗಳನ್ನು ಕುಮಾರಸ್ವಾಮಿ ಅವರು ಪಂಚರತ್ನ ಯೋಜನೆಯಲ್ಲಿ ಸೇರಿಸಿದ್ದು, ಸ್ತ್ರೀಶಕ್ತಿ ಸಂಘದ ಸಾಲ ಮನ್ನಾ ಮಾಡುವ ಮಹತ್ತರ ಕಾರ್ಯ ಮಾಡುವ ಹೆಬ್ಬಯಕೆ ಹೊಂದಿದ್ದು, ಅವರನ್ನು ಮುಖ್ಯಮಂತ್ರಿ ಮಾಡಲು ನಾವೆಲ್ಲರೂ ಮುಂದಾಗೋಣ.
> –ಎಂ.ಅಶ್ವಿನ್ ಕುಮಾರ್, ಶಾಸಕರು

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.26 ಕೋಟಿ ಸಂಗ್ರಹ



ನಂಜನಗೂಡು, ಫೆ.24– ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ 33 ಹುಂಡಿಗಳಲ್ಲಿ 1.26 ಕೋಟಿ ರೂ. ಸಂಗ್ರಹವಾಗಿದೆ.

ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದಲ್ಲಿ ಶುಕ್ರವಾರ ಹುಂಡಿಗಳನ್ನು ತೆರೆದು ಎಣಿಕೆ ನಡೆಸಲಾಯಿತು. ಈ ವೇಳೆ 1,26,65,782 ರೂ. ನಗದು, 92 ಗ್ರಾಂ ಚಿನ್ನ, 3.75 ಕೆಜಿ ಬೆಳ್ಳಿ ಹಾಗೂ 9 ವಿದೇಶಿ ಕರೆನ್ಸಿಗಳು ದೊರೆತಿವೆ. ಬ್ಯಾಂಕ್ ಆಫ್ ಬರೋಡಾ ಹಾಗೂ ದೇವಾಲಯದ ಸಿಬ್ಬಂದಿ, ನೂರಕ್ಕೂ ಹೆಚ್ಚು ಸ್ವಸಹಾಯ ಸಂಘದ ಮಹಿಳೆಯರು ಹುಂಡಿ ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು.

ದೇವಾಲಯದ ಉಪವಿಭಾಗಾಧಿಕಾರಿ ರಕ್ಷಿತ್, ದೇವಾಲಯದ ಇಓ ಜಗದೀಶ್, ಎಇಓ ವೆಂಕಟೇಶ್ ಪ್ರಸಾದ್, ಮುಜರಾಯಿ ತಹಸೀಲ್ದಾರ್ ಕೃಷ್ಣ, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಬ್ಯಾಂಕ್ ಆಫ್ ಬರೋಡಾ ವ್ಯವಸ್ಥಾಪಕ ಟಿ.ಕೆ.ನಾಯಕ್ ಉಪಸ್ಥಿತರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಹಸುವಿನ ಕಾವಲು ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಲೋಕೇಶ್, ಡೈರಿ ಅಧ್ಯಕ್ಷ ಮಲ್ಲೇಶ್, ಪಿಡಿಓ ಮಂಜುನಾಥ್, ಮೈತ್ರಮ್ಮ ಸೇರಿದಂತೆ ಇನ್ನಿತರರಿದ್ದರು.

ಹೆಚ್.ಡಿ.ಕೋಟೆ ನಾಯಕ ಸಂಘದ ಅಧ್ಯಕ್ಷರ ಬಗ್ಗೆ

ಆರೋಪಿಸಿದವರಿಗೆ ಮುಂದಿನ ದಿನಗಳಲ್ಲಿ ತಕ್ಕಪಾಠ: ಎಚ್ಚರಿಕೆ



ಹೆಚ್.ಡಿ.ಕೋಟೆ, ಫೆ.24– ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿರುವ ಕ್ಯಾತನಹಳ್ಳಿ ನಾಗರಾಜ್ ಹಾಗೂ ಜಿನ್ನಹಳ್ಳಿ ರಾಜನಾಯಕ ಅವರಿಗೆ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸಲಾಗುವುದು ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಎಚ್ಚರಿಕೆ ನೀಡಿದರು.

ಪಟ್ಟಣದ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ಅವರ ಬಗ್ಗೆ ಆರೋಪ ಮಾಡಿರುವುದು ಸರಿಯಲ್ಲ. ಈ ಹಿಂದೆ ತಾಲೂಕು ನಾಯಕ ಸಂಘದ ಅಧ್ಯಕ್ಷರಾಗಿ ಶಂಭುಲಿಂಗನಾಯಕ ಕಾರ್ಯ ನಿರ್ವಹಿಸುತ್ತಿದ್ದರು. ಆದರೆ ನಾಗರಾಜು, ರಾಜನಾಯಕ ಸೇರಿದಂತೆ ಸಮಾಜದ ಬಂಧುಗಳ ಸರ್ವಾನುಮತದಿಂದ ಎಂ.ಸಿ.ದೊಡ್ಡನಾಯಕ ಅವರನ್ನು ತಾಲೂಕು ನಾಯಕ ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದ್ದು, ಕ್ಯಾತನಹಳ್ಳಿ ನಾಗರಾಜ್ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಜಿನ್ನಹಳ್ಳಿ ರಾಜನಾಯಕ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಇವರಿಬ್ಬರೂ ದೊಡ್ಡನಾಯಕ ತಾಲೂಕು ನಾಯಕ ಸಂಘದ ಅಧ್ಯಕ್ಷರಲ್ಲ ಎಂದು ಸುಳ್ಳು ಹೇಳುವ ಮೂಲಕ ನಾಯಕ ಸಮುದಾಯ ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮರಿತಿಮ್ಮನಾಯಕ, ಮಿಲ್ ನಾಗರಾಜ್, ಚಾಕಳ್ಳಿ ಕೃಷ್ಣ, ನಾಗನಾಯಕ, ಸೋಮನಾಯಕ, ಶಂಭು, ಗಣೇಶ್ ಇತರರಿದ್ದರು.

ಸರಗೂರಲ್ಲಿ ನಂದಿನಿ ಹಾಲಿನ ಮಾರಾಟ ಕೇಂದ್ರ ಉದ್ಘಾಟನೆ



ಸರಗೂರು, ಫೆ.24– ಮೈಮುಲ್ ಅಭಿವೃದ್ಧಿಗೆ ಶ್ರಮಿಸುತ್ತಿರುವ ನಿರ್ದೇಶಕ ಕೆ.ಈರೇಗೌಡರ ಪರಿಶ್ರಮ ಶ್ಲಾಘನೀಯ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಪ್ರಾಯಪಟ್ಟರು.

ಪಟ್ಟಣದ ಕೆಇಬಿ ಹತ್ತಿರ ನೂತನ ನಂದಿನಿ ಹಾಲಿನ ಮಾರಾಟ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಗುಣಮಟ್ಟದ ಹಾಲಿನ ಉತ್ಪಾದನೆಗೆ ಹೆಚ್ಚು ಒತ್ತು ನೀಡಬೇಕು. ಆ ಮೂಲಕ ಮೈಮುಲ್ ಉಳಿಸಿ, ಬೆಳೆಸಬೇಕು. ಹಸು ಸಾಗಾಣಿಕೆಯಿಂದ ಕುಟುಂಬದ ಆರ್ಥಿಕ ಮಟ್ಟ ಸುಧಾರಿಸಲಿದ್ದು, ಮೈಮುಲ್ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ರೈತರು ಕೃಷಿಯೊಂದಿಗೆ ಹೈನುಗಾರಿಕೆಯನ್ನು ಉಪಕಸುಬಾಗಿ ಮಾಡಿಕೊಂಡಿದ್ದಾರೆ. ಡೈರಿಯಿಂದ ಹಾಲು ಉತ್ಪಾದಕರಿಗೆ ಇನ್ನು ಹೆಚ್ಚಿನ ಸೌಲಭ್ಯ ದೊರಕುವಂತಾಗಬೇಕು. ರೈತರು ಹಸುಗಳಿಗೆ ಉತ್ತಮ ಗುಣಮಟ್ಟದ ಆಹಾರ ನೀಡಬೇಕು. ಆಗ ಉತ್ತಮ ಹಾಲು ದೊರಕಲು ಸಾಧ್ಯ.ಇದರಿಂದ ಮೈಮುಲ್ ಬೆಳವಣಿಗೆಯಾಗಲಿದೆ ಎಂದರು.

ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮಾತನಾಡಿ, ಸರಗೂರು ಕಾಡಂಚಿನ ಪ್ರದೇಶವಾಗಿರುವುದರಿಂದ ಬೇಸಿಗೆಯಲ್ಲಿ ಹಸಿ ಮೇವು ಕೊರತೆಯಾಗಲಿದೆ. ಹೀಗಾಗಿ ರೈತರು ಹಸಿ ಮೇವಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಾಲಿನ ಮಾರಾಟ ಕೇಂದ್ರಗಳು ಗ್ರಾಹಕ ಸ್ನೇಹಿಯಾಗಬೇಕು. ಸರಗೂರು ಪಟ್ಟಣದಲ್ಲಿ 3 ನಂದಿನಿ ಮಾರಾಟ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಸದ್ಯದಲ್ಲೇ ಇನ್ನೊಂದು ನಂದಿನಿ ಹಾಲಿನ ಕೇಂದ್ರ ಪ್ರಾರಂಭವಾಗಲಿದೆ ಎಂದರು.

ಈ ವೇಳೆ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ನೂತನ ಹಾಲಿನ ಮಾರಾಟ ಕೇಂದ್ರದ ಮಾಲೀಕ ನಾಗರಾಜು, ಮೈಮುಲ್ ಅಧಿಕಾರಿಗಳಾದ ವಿಜಯ್ ಕುಮಾರ್, ಅಶೋಕ್, ಫಣಿರಾಜ್, ಹರೀಶ್, ಪಪಂ ಮುಖ್ಯಾಧಿಕಾರಿ ಕೆ.ಪಿವಸಂತ ಕುಮಾರಿ, ಅಧ್ಯಕ್ಷೆ ರಾಧಿಕ, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ಎಸ್.ಎಲ್.ರಾಜಣ್ಣ, ಶ್ರೀನಿವಾಸ್, ವಿರೇಶ್, ನೂರಾಳ ಸ್ವಾಮಿ, ಚೆಲುವ ಕೃಷ್ಣ, ದಿವ್ಯ, ಚೈತ್ರ, ಸಣ್ಣತಾಯಮ್ಮ, ಉಮಾ, ಹೇಮಾವತಿ, ಮುಖಂಡರಾದ ಶಿವಣ್ಣ, ಜಿಪಂ ಮಾಜಿ ಸದಸ್ಯ ಪಿ.ರವಿ, ಚಿಕ್ಕವೀರನಾಯಕ, ಭಾಗ್ಯಲಕ್ಷ್ಮಿ, ಸುನೀತಾ, ಮುಖಂಡರಾದ ಪರಶಿವಮೂರ್ತಿ, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಮಾಜಿ ಅಧ್ಯಕ್ಷ ಶಿವಣ್ಣ, ಉಮೇಶ್, ತಾಪಂ ಸದಸ್ಯ ಗಿರಿಗೌಡ ಇನ್ನಿತರರಿದ್ದರು.

ಮಾಹಿತಿ ನೀಡದ ನಗರಸಭೆ ಅಧಿಕಾರಿಗೆ 25 ಸಾವಿರ ದಂಡ



ಹುಣಸೂರು, ಫೆ.24– ಇಲ್ಲಿನ ನಗರಸಭೆಗೆ ಸಂಬಂಧಿಸಿದ ಸಿಸಿ ಕ್ಯಾಮರಾ ಫುಟೇಜ್ ನೀಡದೇ ಮಾಹಿತಿ ಆಯೋಗದ ಸೂಚನೆ ನಿರ್ಲಕ್ಷಿಸಿದ ನಗರಸಭೆ ಸಾರ್ವಜನಿಕ ಮಾಹಿತಿ ಅಧಿಕಾರಿ ಚಂದ್ರು ಅವರಿಗೆ ಆಯೋಗ 25 ಸಾವಿರ ರೂ. ದಂಡ ವಿಧಿಸಿದೆ.

ಮಾಹಿತಿ ಹಕ್ಕು ಕಾರ್ಯಕರ್ತ ಹುಣಸೂರು ಮುಸ್ಲಿಂ ಬ್ಲಾಕ್ ನಿವಾಸಿ ಜೆ.ಬಿ. ಒಬೇದುಲ್ಲಾ 2022ರ ಫೆ.3ರಂದು ಸಿಸಿ ಕ್ಯಾಮರಾ ಫುಟೇಜ್ ನೀಡುವಂತೆ ಮಾಹಿತಿ ಹಕ್ಕಿನಡಿ ಕೋರಿದ್ದರು. ನಿಗದಿತ ಶುಲ್ಕ ಪಾವತಿಸಿದಲ್ಲಿ ಫುಟೇಜ್ ನೀಡಲಾಗುವುದೆಂದು ಅರ್ಜಿದಾರರಿಗೆ ಸೂಚಿಸಿದ್ದಂತೆ ಒಬೇದುಲ್ಲಾ ನಿಗದಿತ ಶುಲ್ಕ ಪಾವತಿಸಿದ್ದರು. ಆದರೆ ಸಿಸಿ ಟಿವಿಯ ಫುಟೇಜ್ ಬ್ಯಾಕ್‌ಅಪ್ ಶೇಖರಣೆಯಾಗಿಲ್ಲವೆಂದು 2022 ಅ.21ರಂದು ಹಿಂಬರಹ ನೀಡಿದ್ದಾರೆಂದು ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಆಯೋಗದ ನಿಯಮದಂತೆ 30 ದಿನದೊಳಗೆ ಮಾಹಿತಿ ನೀಡಬೇಕಿತ್ತಾದರೂ, 300 ದಿನಗಳಾದರೂ ಅರ್ಜಿದಾರರಿಗೆ ಮಾಹಿತಿ ನೀಡದೆ ಅನಪೇಕ್ಷ ಹಿಂಬರಹ ನೀಡುವ ಮೂಲಕ ವಿಳಂಬ ಮಾಡಿದ್ದನ್ನು ಗಂಭೀರವಾಗಿ ಪರಿಗಣಿಸಿದ ಆಯೋಗ ಸಾರ್ವಜನಿಕ ಮಾಹಿತಿ ಅಧಿಕಾರಿ ಚಂದ್ರು ಅವರಿಗೆ 25 ಸಾವಿರ ರೂ. ದಂಡವಿಧಿಸಿ ಕರ್ನಾಟಕ ಮಾಹಿತಿ ಆಯೋಗವು ಏಕ ಕಂತಿನಲ್ಲಿ ದಂಡವನ್ನು ಪಾವತಿಸುವಂತೆ ಹಾಗೂ ಫುಟೇಜ್ ನೀಡಲು ಪಡೆದಿದ್ದ ಶುಲ್ಕವನ್ನು ನಿಗದಿತ ದಿನಾಂಕದೊಳಗೆ ವಾಪಸ್ ನೀಡಿ, ಆಯೋಗಕ್ಕೆ ವರದಿ ನೀಡುವಂತೆ ರಾಜ್ಯ ಮಾಹಿತಿ ಆಯುಕ್ತ ಎಚ್.ಸಿ.ಸತ್ಯನ್ ಆದೇಶಿಸಿದ್ದಾರೆ.

ತಿ.ನರಸೀಪುರ ಬಿಜೆಪಿ ಟಿಕೆಟ್‌ಗಾಗಿ ಬಿಎಸ್‌ವೈಗೆ ಮನವಿ



ತಿ.ನರಸೀಪುರ, ಫೆ.24– ಮುಂಬರುವ ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡುವಂತೆ ಬಿಜೆಪಿ ಕಾರ್ಯಕಾರಿಣಿ ಸಮಿತಿ ಸದಸ್ಯ ಕುರಹಟ್ಟಿ ಮಹದೇವಯ್ಯ ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಈ ವೇಳೆ ಮಹದೇವಯ್ಯ ಮಾತನಾಡಿ, ಹಲವು ವರ್ಷದಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ಪಕ್ಷದ ಅಭಿವೃದ್ಧಿಗಾಗಿ ದುಡಿಯುತ್ತಿದ್ದೇನೆ. ನನ್ನ ಹಿರಿತನ ಹಾಗೂ ಸೇವೆ ಪರಿಗಣಿಸಿ ಈ ಬಾರಿ ನನಗೆ ತಿ.ನರಸೀಪುರ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡುವಂತೆ ಯಡಿಯೂರಪ್ಪನವರಿಗೆ ಮನವಿ ಮಾಡಿದರು. ಚುನಾವಣೆ ಹತ್ತಿರವಾಗುತ್ತಿದ್ದಂತೆ ಹೊರಗಿನವರು ಕ್ಷೇತ್ರದಲ್ಲಿ ರಾಜಕೀಯ ನೆಲೆ ಕಂಡುಕೊಳ್ಳಲು ಹಪಾಹಪಿಸುತ್ತಿದ್ದು, ಟಿಕೆಟ್‌ಗಾಗಿ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಆದರೆ ಕ್ಷೇತ್ರಕ್ಕೆ ಹೊರಗಿನವರ ಅವಶ್ಯಕತೆ ಇಲ್ಲ. ಇಲ್ಲಿಯೇ ಹಲವು ಸಮರ್ಥರಿದ್ದಾರೆ. ಹೀಗಾಗಿ ಕ್ಷೇತ್ರದಲ್ಲಿ ಪಕ್ಷಕ್ಕಾಗಿ ದುಡಿದವರಿಗೆ, ಅದರಲ್ಲೂ ಸ್ಥಳೀಯನಾದ ನನಗೆ ಈ ಬಾರಿ ಪಕ್ಷದ ವರಿಷ್ಠರು ಚುನಾವಣೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕು ಎಂದರು.

ಈ ವೇಳೆ ಜಿಲ್ಲಾ ಎಸ್‌ಸಿ ಮೋರ್ಚಾ ಮಾಜಿ ಪ್ರಧಾನ ಕಾರ್ಯದರ್ಶಿ ಮುರಳಿ, ಜಿಲ್ಲಾ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೇಶವಮೂರ್ತಿ, ಜಿಲ್ಲಾ ಎಸ್ಸಿ ಮೋರ್ಚಾ ಕಾರ್ಯದರ್ಶಿ ಅನಿಲ್ ಕುಮಾರ್ ಮತ್ತಿತರರಿದ್ದರು.

ಇಂದಿನ ಯುವ ಪೀಳಿಗೆಗೆ ನಾರಾಯಣ ರೈ ಆದರ್ಶ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಮತ



ಹುಣಸೂರು, ಫೆ.24– ಕಲೆ, ರಂಗಭೂಮಿ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ನಾರಾಯಣ ರೈ ಅವರು ಇಂದಿನ ಯುವ ಪೀಳಿಗೆಗೆ ಆದರ್ಶವಾಗಿದ್ದಾರೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮೈಸೂರಿನ ಬಾಲ ಸಾಹಿತ್ಯ ಚಿಂತನ ಬಳಗ, ಬೆಂಗಳೂರಿನ ಅವ್ಯಕ್ತ ಪ್ರಕಾಶನ ಹಾಗೂ ತಾಲೂಕಿನ ಕರುನೇ ಸಹಯೋಗದಲ್ಲಿ ನಡೆದ ಹುಣಸೂರಿನ ರಂಗಕರ್ಮಿ ನಾರಾಯಣ ರೈ ಅವರ ಕುರಿತು ಶಿಕ್ಷಕ ಡಾ.ಮಾಧುಪ್ರಸಾದ್ ಅವರ ರಂಗತಪಸ್ವಿ ನಾರಾಯಣ ರೈ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹವರಿಂದ ಜೀವನ ಪಾಠ ಕಲಿಯುವುದು ಸಾಕಷ್ಟಿದೆ. ಇಂದಿನ ಯುವ ಜನರಲ್ಲಿ ಪುಸ್ತಕ ಓದುವ ಹವ್ಯಾಸ ಕಡಿಮೆಯಾಗಿದ್ದು, ಜೀವನ ಪಾಠಗಳನ್ನು ಅರ್ಥೈಸಿಕೊಳ್ಳಲು ಕಷ್ಟವಾಗಿದೆ. ಈ ಕಾರಣದಿಂದ ಯುವ ಜನರು ಪುಸ್ತಕ ಓದುವ ಪ್ರವೃತ್ತಿ ಮೈಗೂಡಿಸಿ ಕೊಳ್ಳಬೇಕು ಎಂದರು.

ಮೈಸೂರಿನ ಒಡನಾಡಿ ಸಂಸ್ಥೆ ಮುಖ್ಯಸ್ಥ ಸ್ಟ್ಯಾನ್ಲಿ ಮಾತನಾಡಿ, ಸಮಾಜ ಮುಖಿ ವ್ಯಕ್ತಿತ್ವದ ನಾರಾಯಣ ರೈ ಅವರು ರಂಗಕಲೆಯಲ್ಲಿ ತಮ್ಮ ಪ್ರೀತಿ ಹಂಚುವ ಸಾಕಾರ ಮೂರ್ತಿಯಾಗಿ ಸಮಾಜದಲ್ಲಿ ಸಮಾನತೆ ಪ್ರತಿಬಿಂಬಿಸುವ ಪರಿಪಕ್ವ ನಟರಾಗಿದ್ದರು ಎಂದು ಬಣ್ಣಿಸಿದರು.

ಸಾಹಿತಿ ಜಯಪ್ಪ ಹೊನಾಳ್ಳಿ ಪುಸ್ತಕದ ಬಗ್ಗೆ ವಿಮರ್ಶೆ ಮಾಡುತ್ತಾ ನಾರಾಯಣ ರೈ ಅವರು ವೃತ್ತಿಯಲ್ಲಿ ಸರ್ಕಾರಿ ಅಧಿಕಾರಿಯಾಗಿದ್ದು, ಪ್ರವೃತ್ತಿಯಲ್ಲಿ ರಂಗಕರ್ಮಿಯಾಗಿ ರಂಗ ಕಲೆ ಪೋಷಿಸಿಕೊಂಡು ಬಂದ ಎಲೆಮರೆಯಲ್ಲಿರುವ ಪರಿಪಕ್ವ ಹಣ್ಣಾಗಿದ್ದರು. ಇವರು ನಾಟಕಗಳ ಮೂಲಕ ಮೂಡಿಸಿದ ಜಾಗೃತಿ ಬಗ್ಗೆ ಲೇಖಕರು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ. ಇಂತಹ ಮಹನೀಯರ ಆಶಯದಂತೆ ಹುಣಸೂರಿ ನಲ್ಲೊಂದು ಬಯಲು ರಂಗಮಂಟಪ ನಿರ್ಮಿಸಬೇಕು ಹಾಗೂ ನಗರದ ವೃತ್ತ ಅಥವಾ ರಸ್ತೆಯೊಂದಕ್ಕೆ ರೈ ಹೆಸರಿಡ ಬೇಕಾಗಿದೆ ಎಂದರು. ಹಿರಿಯ ಪತ್ರಕರ್ತ ರವೀಂದ್ರ ಭಟ್ ಐನಕೈ ಪುಸ್ತಕ ಬಿಡುಗಡೆ ಮಾಡಿ ರೈಗಳ ರಂಗ ಚಟುವಟಿಕೆ ಸಾಧನೆ ಬಗ್ಗೆ ಮಾತನಾಡಿದರು.

ಸಾಧನಶ್ರೀ ಬಿರುದು: ಬೆಂಗಳೂರಿನ ಸಾಧನಕೇರಿ ಸಾಹಿತ್ಯ ಪ್ರತಿಷ್ಠಾನದಿಂದ ವಸುವಸ್ತಲ ಅವರು 84 ವರ್ಷದ ರಂಗಕರ್ಮಿ ನಾರಾಯಣ ರೈ ಅವರಿಗೆ 'ಸಾಧನಶ್ರೀ' ಬಿರುದು ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ನಾರಾಯಣ ರೈ ಪುತ್ರ ಟ್ಯಾಲೆಂಟ್ ವಿದ್ಯಾಸಂಸ್ಥೆ ಮುಖ್ಯಸ್ಥ ನವೀನ್ ರೈ, ಕೃತಿ ಸಂಪಾದಕ ಡಾ.ಮಾಧುಪ್ರಸಾದ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶಾರಧ್ಯ, ಜಿಪಂ ಮಾಜಿ ಸದಸ್ಯ ಸಿ.ಟಿ.ರಾಜಣ್ಣ, ರಕ್ಷಣಾ ವೇದಿಕೆ ಅಧ್ಯಕ್ಷ ಪುರುಷೋತ್ತಮ್, ಅವ್ಯಕ್ತ ಪ್ರಕಾಶನದ ಸುರೇಶ್ ಎಲ್.ಗೌಡ ಮಾತನಾಡಿದರು.

ಬೆಂಗಳೂರಿನ ವರ್ಷಿತ ಅವರ ಭರತನಾಟ್ಯ ಎಲ್ಲರ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ಎಸ್.ಜಯರಾಮ್, ಆನಂದ್, ಜೆ.ಮಹದೇವ್, ಸಾಯಿನಾಥ್, ಹೆಚ್.ಹೆಚ್. ಲೋಕೇಶ್‌ಬಾಬು, ಶಿಕ್ಷಕ ಲೋಕೇಶ್ ಮತ್ತಿತರರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಕೊನೆಯಲ್ಲಿ ದೇವನೂರ ಮಹದೇವು ಅವರ ಕಥೆಗಳ ಆಧಾರಿತ ರಾಜಪ್ಪ ದಳವಾಯಿ ರಚಿಸಿರುವ 'ಸಂಬಂಜ ಅನ್ನೋದ್ ದೊಡ್ದು ಕನಾ' ಎಂಬ ನಾಟಕವನ್ನು ರಂಗಾಯಣದ ಜನಾರ್ಧನ್(ಜನ್ನಿ) ನಿರ್ದೇಶನದಲ್ಲಿ ಅಭಿನಯಿಸಿದರು.

ಇಂದು ವಿದ್ಯುತ್ ವ್ಯತ್ಯಯ




ನಂಜನಗೂಡು, ಫೆ.24– ತಾಲೂಕಿನ ಹುಲ್ಲಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಫೆ.25ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ತಾಲೂಕಿನ ಹುಲ್ಲಹಳ್ಳಿ, ಶಿರಮಳ್ಳಿ, ಹಗಿನವಾಳು, ರಾಂಪುರ, ಹೆಗ್ಗಡಹಳ್ಳಿ, ದುಗ್ಗಳ್ಳಿ ಮತ್ತು ಹುಸ್ಕೂರು, ಕುರಿಹುಂಡಿ, ಯಾಲಹಳ್ಳಿ, ವಳಗೆರೆ, ಹರತಲೆ, ಮೊಬ್ಬಳ್ಳಿ, ಗಾಂಧಿಗ್ರಾಮ, ಬ್ಯಾಳಾರು, ಮಾದಾಪುರ, ಕಾರ್ಯ ಗ್ರಾಪಂ ವ್ಯಾಪ್ತಿಯ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಧುಕೇಶ್ವರ್ ನಿಧನ



ಬೆಟ್ಟದಪುರ, ಫೆ.24– ಇಲ್ಲಿನ ಸಂಘರ ಶೆಟ್ಟರಹಳ್ಳಿ ಗ್ರಾಮದ ನಿವಾಸಿ ಹಾಗೂ ಬಳ್ಳಾರಿ ಜಿಲ್ಲೆ ಭೂಸ್ವಾಧೀನಾಧಿಕಾರಿ ಮಧುಕೇಶ್ವರ್(52) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜುಂಡಸ್ವಾಮಿ



ಹಿರೀಕ್ಯಾತನಹಳ್ಳಿ, ಫೆ.24– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ನಿರ್ದೇಶಕ, ಹರವೆ ಗ್ರಾಮದ ನಂಜುಂಡಸ್ವಾಮಿ(81) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಕಾರಿಯಪ್ಪ



ಹುಣಸೂರು, ಫೆ.24– ಮೂಲತಃ ಹುಣಸೂರಿನ ವಿ.ಪಿ.ಬೋರೆ ನಿವಾಸಿ, ನಿವೃತ್ತ ಯೋಧ ದಿ॥ ಉತ್ತಪ್ಪ ಅವರ ಪುತ್ರ ಕಾರಿಯಪ್ಪ (ಬ್ರಿಜೇಶ್ 49) ಶುಕ್ರವಾರ ಬೆಳಗ್ಗೆ ತುಮಕೂರಿನಲ್ಲಿ ನಿಧನರಾಗಿದರು.

ಮೃತರು ತಾಯಿ, ಪತ್ನಿ, ಇಬ್ಬರು ಪುತ್ರರು, ಸಹೋದರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರು ಭೂಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದು, ತುಮಕೂರಿನ ಖಾಸಗಿ ಕಂಪನಿಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೂಫಿಯಾ ಬೇಗಂ



ಹುಲ್ಲಹಳ್ಳಿ, ಫೆ.24– ಗ್ರಾಮದ ನಿವಾಸಿ ಸೂಫಿಯಾ ಬೇಗಂ (68) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಪುತ್ರ ಮೈಸೂರು ಜಿಲ್ಲಾ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಇಲಿಯಾಸ್ ಅಹಮದ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಲ್ಲಹಳ್ಳಿಯಲ್ಲಿ ನಾಳೆ (ಶನಿವಾರ) ಮಧ್ಯಾಹ್ನ 1 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


₹1 DOWN PAYMENT
POORVIKA
ಪೂರ್ವಿಕಾ
ಬ್ರಹ್ಮಾಂಡ ಉದ್ಘಾಟನೆಯ
ವಿಶೇಷ ಕೊಡುಗೆಗಳು
ಪಿರಿಯಾಪಟ್ಟಣದಲ್ಲಿ
MEGA EXCHANGE OFFER
UPTO 60%* DISCOUNT
NO COST EMI*
UPTO ₹15,000* INSTANT DISCOUNT
UPTO 5%* CASHBACK Canara Bank
UPTO 10%* CASHBACK HDB FINANCIAL SERVICES
CAMERA PHONE
₹699* 1 year Warranty
Opening showroom only
NEW ARRIVAL
OPPO Reno 8T 5G
UPTO 10% CASH BACK
EMI @ ₹2,499*
vivo Y100 5G
UPTO ₹1,500* CASHBACK
EMI @ ₹2,083*
vivo Y56 5G
UPTO 5%* CASH BACK
EMI @ ₹2,222*
SAMSUNG
Galaxy S23 Ultra
Galaxy Watch4 Classic LTE
Galaxy Buds2
at ₹4999**
₹8,000* INSTANT DISCOUNT
or
SAMSUNG Upgrade
*T&C Apply
iPhone 13 128GB
₹69,900 EFFECTIVE PRICE ₹31,900* INCLUDING OFFER
iPhone 14 / 14 Plus 128GB
₹79,900 EFFECTIVE PRICE ₹39,900* INCLUDING OFFER
iPad Air M1 Chip
UPTO ₹4,000* INSTANT DISCOUNT
SAMSUNG Galaxy A14 5G
Starts @ ₹16,499* EMI @₹1,375*
SAMSUNG Galaxy A53 5G
JUST PAY ₹1* EMI ₹5,333*
SAMSUNG GALAXY TAB A8
UPTO ₹2,000* INSTANT DISCOUNT EMI ₹2,333*
Redmi Note 12 Pro 5G
UPTO ₹2,000* INSTANT DISCOUNT EMI @₹2,444*
vivo Y35
JUST PAY ₹1* or ₹1,000* CASHBACK
OPPO A77S
UPTO ₹1,500* CASHBACK EMI @₹1,999*
OPPO A78 5G
UPTO ₹1,500* CASHBACK EMI @₹2,055*
vivo Y22
JUST PAY ₹1* or ₹1,000* CASHBACK
realme 9 5G Speed Edition
UPTO 5%* CASHBACK EMI @ ₹1,591*
SAMSUNG Galaxy A23 5G
JUST PAY ₹1 EMI ₹3,823*
NOKIA G21
JUST PAY ₹1 EMI ₹2,166*
NOKIA G11 Plus
JUST PAY ₹1 EMI ₹1,666*
FREE Earphone worth ₹599
SAMSUNG Galaxy A73 5G
UPTO ₹2,000* SAMSUNG Upgrade
PAY ₹1,999* GET GALAXY BUDS 2
OPPO F21s Pro 5G
FREE MIXIE
Opening Showroom Only*
vivo V25 5G
FREE MIXIE
Opening Showroom Only*
ONEPLUS Y1 32"
EFFECTIVE PRICE ₹14,999 ₹11,499* INCLUDING BANK OFFER
X43 4K ULTRA
EFFECTIVE PRICE ₹28,999 ₹26,999* INCLUDING BANK OFFER
ASUS
VivoBook Go 14 Intel Celeron N4500
₹36,990 ₹23,990*
EMI Starts @ ₹1,554*
MacBook Air
8 Core CPU and 7 Core GPU Mac OS 256GB
EFFECTIVE PRICE ₹99,900 ₹60,990* INCLUDING BANK OFFER
EMI Starts @ ₹3,388*
Lenovo
IDEAPAD 3 Intel core i3 11th Gen 8GB+512GB
FREE BACK PACK
EMI Starts @ ₹2,266*
BUY LAPTOP GET FREE
BACKPACK BOOM HEADSET WEB CAMERA
ON SELECTED MODELS*
ANKER SOUNDCORE R500 55% OFF ₹1,299
boAt ROCKERZ 333 ANC UPTO 55% OFF ₹1,699
SONY WH-CH510 UPTO 60% OFF ₹1,999
ZEBRONICS ZEB SOUND BOMB 4 70% OFF ₹1,099
IR CONTROL SMART SPEAKER 50% OFF ₹2,999
ELECTRIC TOOTHBRUSH STARTS @ ₹599
CP PLUS CP-E34A SECURITY CAMERA 360° 1080px 45% OFF ₹2,399
ZEBRONICS JUKE BAR - 100A 55% OFF ₹3,999
boAt AAVANTE BAR AURA UPTO 60% OFF ₹8,999
IRON BOX STARTS @ ₹949
PERSONAL CARE STARTS @ ₹945
noise COLORFIT VICTOR 60% OFF ₹2,599
FIRE-BOLTT ROCKET 70% OFF ₹2,699
WIPRO SMART LED BULB 60% OFF ₹799
*T&C APPLY
PIRIYAPATNA : #3-7-27, B.M. ROAD, NEAR NEW TOWN MUNICIPAL COUNCIL & KEB ROAD.
BAJAJ FINSERV
IDFC FIRST Bank
HDB FINANCIAL SERVICES
TVS CREDIT
Paytm
zest
HDFC BANK
ICICI Bank
Pine Labs
kotak Kotak Mahindra Bank
*EMI OPTIONS AVAILABLE ON SELECTED SHOWROOM ONLY
Customer Helpline :
99406 88855
Shop online @ www.poorvika.com
POORVIKA
• URS ROAD : No. 4A, 4B & 4C, D.Devaraja URS Road, Devaraj Mohalla. • SARASWATHIPURAM : No. 846 & 847A, Saraswathipuram, Thonachikoppal, Chamaraja Mohalla. • VIRAJPET : No. 1, Prakash Tower, Junction View, Mysore Road.
• NILGIRI ROAD : No. 5 to 8 & 11 to 12, Maharaja Shopping Complex, Bangalore - Nilgiri Road, Lashkar Mohalla. • HASSAN : New No. 1525/3029, GF & FF, Shariff Colony, B.M.Road. • MADIKERI : Anushree Complex, Old SBI Building, College Road.
• VIJAYANAGARA : No. 371, 1st Main Road, Railway Layout, Near Water Tank, Vijaya Nagar. • CHANNARAYAPATANA : Prabhath Complex, SAS No. 243, B.M.Road, Opp. to KSRTC Bus Stand. • CHANNAPATANA : No.2368/A3, Shop No.10 & 11, Jyothi Narendra Complex, B M Road, Channapatna, Ramanagara District. • KOLLEGAL : No: 491, GF, Balaji Complex, Dr.B.R Ambedkar Road. • KUSHAL NAGAR : No. 122, Primary Agriculture Credit Co-Operative Society, BM Road, Kushal Nagar, Somwarpet TK, Kodagu.
• T.NARASIPURA : No. 339, College Road Kosamattam Building, Near Thotadappa Hotel, Mysore. • CHAMARAJA NAGAR : PID No. 12-2-2-15B/1226/1147, Block No.2, Ward No.12, Deviation Road. • MANDYA : No.1161, GF & FF, S.L.V Complex, V.V Road, Ashok Nagar. • NANJANGUD : No. 4573/4381, MGS Road, Opp. to KSRTC Bus stand. • ARSIKERE : No.241/410/389, B.H.Road, Old Canara Bank Building, Hassan District.• SIDDARTHA LAYOUT : No. 417/376, Teresian College Circle, Yaraganahalli, T.N Pura Main Road.